# ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ

## ಮೂರನೆಯ ಮುದ್ರಣಕ್ಕೆ ಮುನ್ನುಡಿ

ಈ ನಾಲ್ಕು ವಿಚಾರೋಪನ್ಯಾಸಗಳೂ ಸುಮಾರು ಇಪ್ಪತ್ತೈದು ಮುವತ್ತು ವರ್ಷಗಳ ಹಿಂದೆ ಸ್ವಾತಂತ್ರ್ಯ ಪೂರ್ವದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳನ್ನೂ ಮತ್ತು ಯುವಜನರನ್ನೂ ನಿರ್ದೇಶಿಸಿ ಮಾಡಿದವಾಗಿವೆ. ತರುಣರಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಗಳನ್ನು ಪ್ರಚೋದಿಸುವುದೇ ಅವುಗಳ ಮುಖ್ಯೋದ್ದೇಶವಾಗಿತ್ತು. ಮತೀಯ ಮತ್ತು ಸಾಮಾಜಿಕ ಅಂಧಶ್ರದ್ಧೆ ಮತ್ತು ಅಂಧಾಚಾರಗಳಿಂದ ನಾವು ಪಾರಾಗದಿದ್ದರೆ ನಮಗೆ ಉದ್ಧಾರವಿಲ್ಲ ಎಂಬ ನಂಬುಗೆಯ ಹಿನ್ನಲೆಯಲ್ಲಿ ಅವು ಮೂಡಿವೆ.

ಆಗ ಭಾರತ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧೀಜಯ ನೇತೃತ್ವದಲ್ಲಿ ಸತ್ಯಾಗ್ರಹ ರೂಪದ ಸಂಗ್ರಾಮ ಸಮಗ್ರ ಭರತಖಂಡ ವ್ಯಾಪಿಯಾಗಿ ನಡೆಯುತ್ತಿದ್ದ ಕಾಲ. ಬದುಕು ಕುದಿಯುತ್ತಿದ್ದ ಕಾಲ. ದಿನದಿನವೂ ಪತ್ರಿಕೆಗಳು ತ್ಯಾಗದ, ಸಂಕಟದ, ದುಃಖದ, ವೀರದ, ಆವೇಶದ, ಜಯದ, ಶಿಕ್ಷೆಯ, ಪ್ರತೀಕಾರದ ನಾನಾ ರೀತಿಯ ಉದ್ವೇಗದ ವಾರ್ತೆಗಳನ್ನು ಹೊತ್ತು ತರುತ್ತಿದ್ದ ಕಾಲ. ನಮ್ಮ ಸಾಮಾಜಿಕ ಮತ್ತು ಮತೀಯವಾದ ದೋಷ ದೌರ್ಬಲ್ಯಗಳನ್ನು ಆರ್ಶಯಿಸಿ, ನಮ್ಮ್ಮ ನಮ್ಮೊಳಗೇ ಒಡಕು ಬಿರುಕುಗಳನ್ನು ಹುಟ್ಟಿಸಿ, ನಮ್ಮನ್ನು ಸೆದೆಬಡಿದು, ಬ್ರಿಟಿಷರ ರಾಜತಂತ್ರ ನಿಪುಣತೆ ಅಟ್ಟಹಾಸದಿಂದ ವಿಜೃಂಭಿಸುತ್ತಿದ್ದ ಕಾಲ. ತರುಣರೂ ಯುವಜನರೂ ದೇಶವನ್ನು ಮುಕ್ತಗೊಳಿಸಲೆಂದು ಆದರ್ಶಾಗ್ನಿಯಿಂದ ದೀಪ್ತರಾಗಿ ಸರ್ವ ತ್ಯಾಗಕ್ಕೂ ಸಿದ್ಧರಾಗಿ ಮುನ್ನುಗ್ಗುತ್ತಿದ್ದ ಕಾಲ. ತಮ್ಮ ಪ್ರಾಚೀನ ಮತ್ತು ಆರ್ಷೇಯ ಮತಧರ್ಮಗಳ ಮತ್ತುಸಾಮಾಜಿಕ ಕಟ್ಟು ಕಟ್ಟಳೆಗಳ ಹೀನ ಬುದ್ಧಿಯನ್ನೂ ನಿಷ್ಠುರತೆಯನ್ನೂ ಕಿತ್ತೊಗೆದು ಸಮಗ್ರ ಭಾರತದ ರಾಜಕೀಯ ಐಕಮತ್ಯವನ್ನೂ ಭಾವೈಕ್ಯತೆಯನ್ನೂ ಸಾಧಿಸಲೆಂದು ಹೃದಯವನ್ನೂ ಮನಸ್ಸನ್ನೂ ಸುವಿಶಾಲಗೊಳಿಸುತ್ತಿದ್ದ ಕಾಲ. ಶ್ರೀರಾಮಕೃಷ್ಣ — ವಿವೇಕಾನಂದರು, ರವೀಂದ್ರರು, ಗಾಂಧೀಜಿ, ಶ್ರೀ ಅರವಿಂದರಾದಿಯಾಗಿ ಆಧಾತ್ಮ ಜೀವಿಗಳ, ದೇಶಭಕ್ತರ ಮತ್ತು ಕವಿಗಳ ಮಹಾವಾಣಿ ಕೋಟ್ಯನುಕೋಟಿ ಕರ್ಣಗಳಲ್ಲಿ ಅನುದಿನವೂ ಅನುರಣಿಸುತ್ತಿದ್ದ ಕಾಲ, ಉದಾರವೂ, ವಿಶಾಲವೂ ಆದ ಒಂದು ಧ್ಯೇಯೋತ್ಸಾಹ ತಾರುಣ್ಯದ ಧಮನಿಗಳಲ್ಲಿ ಸ್ವರ್ಣೋಜ್ವಲವಾಗಿ ಮಿಂಚಿ ಪ್ರವಹಿಸುತ್ತಿದ್ದ ಸಾಹಸೋಲ್ಲಾಸದ ಕಾಲ.

ಆಗ ನಾವು ರಾಜಕೀಯ ಕಾರಣಗಳಿಗಾಗಿ ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರನ್ನು ಹೊರಗಟ್ಟಲು ಪ್ರಯತ್ನಿಸುತ್ತಿದ್ದರೂ ಇಂಗ್ಲಿಷ್ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಇಂಗ್ಲಿಷಿನ ಮುಖಾಂತರವಾಗಿಯೇ ನಮಗೆ ಕರಗತವಾಗುತ್ತಿದ್ದ ಯಂತ್ರವಿದ್ಯೆ ಮತ್ತು ವಿಜ್ಞಾನ ಇವುಗಳನ್ನು ಗೌರವಿಸುತ್ತಿದ್ದುದು ಮಾತ್ರವಲ್ಲದೆ ಅವುಗಳ ಪ್ರಯೋಜನವನ್ನೂ ಪರಮಾಧಿಕವಾಗಿ ಪಡೆಯಲು ದುಡಿಯುತ್ತಿದ್ದೆವು. ಅದಕ್ಕಿಂತಲೂ ಮುಖ್ಯವಾಗಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನಗಳ ಆದಿಭಾಗದಲ್ಲಿ ಕ್ರೈಸ್ತಮತ ಪ್ರಚುರವಾಗಿದ್ದ ಐರೋಪ್ಯ ನಾಗರೀಕತೆಯಲ್ಲಿ ಪರಿವರ್ತನೆಗೊಳಿಸಿದ 'ವಿಚಾರದ' ಮತ್ತು 'ವೈಜ್ಞಾನಿಕ ದೃಷ್ಟಿ' ಇವುಗಳಿಂದ ಅಂಧಶ್ರದ್ಧೆ, ಮತ್ತು

ಅನುದಾರತ್ವ, ಸಂಕುಚಿತ ಮನೋಭಾವ ಮತ್ತು ಸ್ವಾರ್ಥತೆ, ಜಾತೀಯತಾ ದ್ವೇಷ ಇತ್ಯಾದಿ ರೋಗಗಳಿಂದ ಪೀಡಿತವಾಗಿ ಕಲುಷಿತವಾಗಿದ್ದ ನಮ್ಮ ಮತೀಯ ಮನೋಮಂಡಲವನ್ನು ನಿರ್ಮಲಗೊಳಿಸುವ ಒಂದು ಮಹದಾಶೆ ಭಾರತೀಯ ಯುವಜನರ ಹೃದಯದಲ್ಲಿ ಬೆಳಗುತ್ತಿತ್ತು. 'ವಿಚಾರವಾದ' ಮತ್ತು 'ವೈಜ್ಞಾನಿಕ ದೃಷ್ಟಿ'ಯ ಅನುಯಾಯಿಗಳಾಗುವ ಹಂಬಲವಿದ್ದ ಬರ್ಟ್ರಂಡ್ ರಡೆಲ್ ಮತ್ತು ಆಲ್ಡಸ್ ಹಕ್ಷಿಯಂತಹರಿಂದ ಪ್ರಾತಿನಿಧ್ಯ ಪಡೆದ ಲೇಖಕರ ಗುಂಪು ಆದರ್ಶ ಪ್ರಾಯವಾದುದಾಗಿತ್ತು. ಜೊತೆಗೆ ಹಿಂದೂ ಧರ್ಮದಲ್ಲಿ ಬಹು ಪೂರ್ವಕಾಲದಿಂದಲೂ ಅಂಗೀಭೂತವಾಗಿದ್ದ ವರ್ಣಾಶ್ರಮ, ಜಾತಿಪದ್ಧತಿ, ಅಸ್ಪೃಷ್ಯತೆ ಮೊದಲಾದ ಸಮಾಜಿಕ ಅನ್ಯಾಯಗಳನ್ನು ಭಾರತೀಯ ಮುಂದಾಳುಗಳೇ ತೀವ್ರವಾಗಿ ಖಂಡಿಸಿ, ಕ್ರಾಂತಿ ನವತರುಣರ ಮಾನಸ ದಿಗಂತದಲ್ಲಿ ವಿಚಾರ ಕಾಂತಿಯ ಅರುಣೋದಯವಾಗುವಂತೆ ಮಾಡಿದ್ದರು. ಪರಿಸ್ಥಿತಿ ಹೇಗಿತ್ತು ಎಂದರೆ ನಮ್ಮ ದೇಶ ನಮ್ಮದಾಗುವುದೆ ತಡ, ಎಲ್ಲ ಶುದ್ಧೀಕರಣವೂ ಸಿದ್ಧಿಸುವುದೆಂದು ನಂಬಿದ್ದೆವು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮರುದಿನವೆ ವಿಚಾರವಾದ ಮತ್ತು ವೈಜ್ಞಾನಿಕ ದೃಷ್ಟಿಯ ನವವಿಧಾನವು ಸಂಪೂರ್ಣವಾಗಿ ಸರ್ವತೋಮುಖವಾಗಿ ಪ್ರಯೋಗವಾಗತೊಡಗುವುದೆಂದೂ, ಭಾರತವು ತನ್ನೆಲ್ಲ ಆರ್ಥಿಕ ರಾಜಕೀಯ ಸಮಾಜಿಕ ಮತೀಯ ದೋಷ ದೌರ್ಬಲ್ಯಗಳಿಂದ ಬಹುಬೇಗನೆ ಪಾರಾಗುವುದೆಂದೂ ಅನೇಕರ ದೃಥ ನಂಬುಗೆಯಾಗಿತ್ತು.

ಆದರೆ?

ಪ್ರಗತಿ, ಉದ್ಧಾರ, ಧ್ಯೇಯ ಸಿದ್ಧಿ ನಾವು ಕಲ್ಪಿಸಿದಂತೆ ವಾಸ್ತವವಾಗುವುದೂ ಇಲ್ಲ; ನಾವು ಸಂಕಲ್ಪಸಿದ ರೀತಿಯಲ್ಲಿ ಕೈಗೂಡುವುದೂ ಇಲ್ಲ. ಪ್ರಪಂಚದ ಮಾನಸ ಶಕ್ತಿ ಸಮೂಹಗಳ ಸಂಘರ್ಷಣೆಯ ಫಲರೂಪವಾಗಿ ಅನಿರೀಕ್ಷಿತಗಳು ಬಂದೊದಗುತ್ತವೆ; ಅನಿವಾರ್ಯಗಳು ಅಡ್ಡಗಟ್ಟುತ್ತವೆ. ನಮ್ಮ ಪಯಣದ ದಾರಿ ಮಾತ್ರವಲ್ಲದೆ ದಿಕ್ಕೂ ಬದಲಾಯಿಸುವ ಸಂಭವವೂ ಉಂಟು.

ಸ್ವಾತಂತ್ರ್ಯೋದಯದ ಹೊಸ್ತಿಲಲ್ಲಿಯೆ, ಆ ಉದಯಕ್ಕೆ ಮುಖ್ಯ ಕಾರಣವಾದ ಮಹಾ ಜ್ಯೋತಿ ನಮ್ಮ ಮಧ್ಯೆ ಇನ್ನೂ ಪ್ರಜ್ವಲಿಸುತ್ತಿದ್ದಾಗಲೆ ಮತಾಂಧತೆಯ ಶೋಣಿತ ಹಸ್ತ ಭಾರತವನ್ನು ರುಧಿರ ಪ್ಲಾವಿತವನ್ನಾಗಿ ಮಾಡಿತು. ವಿವೇಕ ಮತ್ತು ವಿಚಾರದ ಹನನ ಯಜ್ಞವೆ ನಡೆಯಲು ಮೊದಲಾದಾಗ 'ವಿಚಾರವಾದ' ಮತ್ತು 'ವೈಜ್ಞಾನಿಕ ದೃಷ್ಟಿ'ಗಳನ್ನು ಕೇಳುವವರು ಯಾರು?

ಅಂತೂ ಕೊನೆಗೆ ಮಹಾತ್ಮನ ರಕ್ತಗಂಗಾ ವಾರಿಯಿಂದ ಅವಿವೇಕದ ಆ ಯಜ್ಞಾಗ್ನಿ ನಂದಿ, ಭಾರತಿಗೆ ಶಾಂತಿಯ ಅವಭೃತ ಸ್ನಾನವಾಯಿತು. ಆದರೆ ಮತಾಂಧತೆ, ಮತಭ್ರಾಂತಿ, ಮತದ್ವೇಷ ಮತ್ತು ಮತಸ್ವಾರ್ಥತೆ ಇವು 'ವಿಚಾರವಾದ' ಮತ್ತು 'ವೈಜ್ಞಾನಿಕ ದೃಷ್ಟಿ'ಗಳಿಗೆ ಕೊಟ್ಟ ಪೆಟ್ಟಿನಿಂದ ಅವಕ್ಕೆ ಸೊಂಟ ಮುರಿದಂತಾಗಿ ತೆವಳಿಕೊಂಡು ಮುನ್ನಡೆಯುವಂತಾಗಿದೆ. ಮೇರುದಂಡ ನೆಟ್ಟಗಾಗಿ ಅವು ಎಂದು ಎದ್ದು ನಿಂತು ನಡೆಯತೊಡಗುತ್ತವೆಯೋ ದೇವರೇ ಬಲ್ಲ.

ಸ್ವಾತಂತ್ರೋತ್ತರ ಭಾರತ ತನ್ನನ್ನು ತಾನು 'ಲೌಕಿಕ ಕ್ಷೇಮರಾಜ್ಯ' ಎಂದು ಘೋಷಿಸಿಕೊಂಡಿತು. ರಾಜ್ಯಾಂಗದಲ್ಲಿ ಸರ್ವಮತಗಳೂ ಸಮಾನವಾಗಿ ಮಾನ್ಯವಾಗಿ ಮತಧರ್ಮದಲ್ಲಿ ಸಮನ್ವಯ ದೃಷ್ಟಿಗೆ ಕಾನೂನಿನ ಸ್ಥಾನ ಸಿಕ್ಕಿತು. ವರ್ಣ ಮತ ಜಾತಿ ಭೇದಗಳಿಲ್ಲದೆ ಸರ್ವರೂ ಸಮಾನರು ಎಂದು ಘೋಷಿಸಿ, ಸರ್ವರ ಏಳಿಗೆಗೂ ಸಾಧನವಾಗುವ ಸರ್ವೋದಯ ತತ್ವಕ್ಕೆ ಒಂದು ಅಧಿಕಾರ ಮುದ್ರೆ ಬಿದ್ದಂತಾಯ್ತು. ಪಾಂಚವಾರ್ಷಿಕ ಯೋಜನೆಗಳು ಆರ್ಥಿಕ ಮತ್ತು ಪರಮಾರ್ಥಿಕವಾದ ಅಭ್ಯುದಯ ಶ್ರೇಯಸ್ಸುಗಳನ್ನು ಸಾಧಿಸುವ ವ್ಯೂಹ ರಚನೆ ಮಾಡಿ ತಕ್ಕಮಟ್ಟಿಗೆ ಯಶಸ್ವಿಯಾಗಿ ಮುಂಬರುತ್ತಿವೆ.

ಆಧುನಿಕವಾದ ಈ ಪ್ರಗತಿ ಸಾಧನೆಗೆ ವಿಜ್ಞಾನದ ಸಹಾಯವನ್ನು ನಾವು ಒಂದಿನಿತೂ ಹಿಂಜರಿಯದೆ ಸ್ವೀಕರಿಸಿದ್ದೇವೆ. ಇನ್ನೂ ಹೆಚ್ಚು ಹೆಚ್ಚು ಸ್ವೀಕರಿಸುತ್ತಲೂ ಇದ್ದೇವೆ. ಏಕೆಂದರೆ ಕಾರ್ಯ ಭೂಮಿಕೆಯಲ್ಲಿ ಬರಿಯ ಭಾವ ಭ್ರಾಂತಿಯ ಬೆಡಗಿನ ವೈಖರಿ ನಡೆಯುವುದಿಲ್ಲ. ಹಳೆಯ ನಂಬುಗೆಗಳ ಬೇಳೆ ಅಲ್ಲಿ ಬೇಯುವುದಿಲ್ಲ. ಭಾವ ಭ್ರಾಂತಿಗೆ ವಶರಾಗಿ ವಿಜ್ಞಾನ ದೃಷ್ಟಿಗೆ ವಿರುದ್ಧವಾದುದನ್ನು ಏನಾದರೂ ಮಾಡಿದೆವೋ ಒಡನೆಯೆ ದುಷ್ಫಲ ನಮ್ಮನ್ನು ಬಡಿದೆಚ್ಚರಿಸುತ್ತದೆ. ಏಕೆಂದರೆ ಯಂತ್ರ ಸರಿಯಾಗಿ ನಡೆಯುವುದು ಅಥವಾ ನಡೆಯದಿರುವುದು ರಾಹುಕಾಲ ಗುಳಿಕಾಲದಿಂದಲ್ಲವಷ್ಟೆ? ವಿದ್ಯುದಾಗರದ ಕೆಲಸ ಸುಸೂತ್ರವಾಗಿ ಜರುಗದಿದ್ದರೆ ಅಷ್ಟಗ್ರಹಯಾಗವನ್ನಾಗಲೀ ಚಂಡೀಯಾಗವನ್ನಾಗಲೀ ವಿಜೃಂಭಣೆಯಿಂದ ಜರುಗಿಸುವ ಮೂರ್ಖತೆ ಅದನ್ನು ಸರಿಪಡಿಸುವುದಿಲ್ಲವಷ್ಟೆ?

ಆದರೂ ನಮ್ಮಲ್ಲಿ ಸಂಸ್ಕೃತಿ ಹೆಸರಿನಲ್ಲಿ, ಮತದ ಹೆಸರಿನಲ್ಲಿ, ಧರ್ಮದ ಸೋಗಿನಲ್ಲಿ ಪೂರ್ವಿಕರ ಪ್ರಾಚೀನ ವೈಭವಗಳ ಕರ್ಮಕಾಂಡವನ್ನು ಮತ್ತೆ ಜೀರ್ಣೋದ್ಧಾರ ಮಾಡಿ ಪ್ರತಿಷ್ಠಾಪಿಸುವ ಸ್ವಾರ್ಥತಾ ಮೂಲವಾದ ಕುರುಡು ನೆವದಲ್ಲಿ, ಅವಿವೇಕ ಮೌಢ್ಯಗಳಿಗೆ ವೈಜ್ಞಾನಿಕತೆಯ ಮತ್ತು ವಿಚಾರದ ಚೆನ್ನದ ಮುಲಾಮು ಹಚ್ಚಿ ಜನರನ್ನು ದಿಕ್ಕು ತಪ್ಪಿಸಿ, ವಂಚಿಸುವ ಮಹೋದ್ಯೋಗ ನಿರ್ಲಜ್ಜೆಯಿಂದ ಸಾಗುತ್ತಿರುವುದನ್ನು ದಿನದಿನವೂ ನೋಡುತ್ತಿದ್ದೇವೆ. ಅಂತಹ ಆತ್ಮವಂಚನ ಮತ್ತು ಪರವಂಚನಕರವಾದ ಉದ್ಯೋಗಪ್ರಸಿದ್ಧರೂ ಪ್ರತಿಷ್ಠಿತರೂ ಆದ ಸ್ವಾರ್ಥಸಾಧಕ ವ್ಯಕ್ತಿಗಳಿಂದಲೆ ಪರಿಪೋಷಿತವಾಗುತ್ತಿರುವುದನ್ನು ನೋಡಿದರೆ ಈ ದೇಶದಲ್ಲಿ ವಿಜ್ಞಾನದ ಯಂತ್ರವಿದ್ಯೆಯಿಂದ ಪಂಚವಾರ್ಷಿಕ ಯೋಜನೆಗಳು ಮುಂದುವರಿದರೂ ವೈಜ್ಞಾನಿಕ ದೃಷ್ಟಿಯಾಗಲಿ ವಿಚಾರವಾದವಾಗಲಿ ವಿಜಯ ಪಡೆಯುವ ಕಾಲ ಹತ್ತಿರದಲ್ಲಿ ಎಲ್ಲಿಯೂ ಗೋಚರವಾಗುತ್ತಿಲ್ಲ.

ವೈಜ್ಞಾನಿಕ ದೃಷ್ಟಿ ಮತ್ತು ವಿಚಾರವಾದಗಳನ್ನು ಬೋಧಿಸಿ, ಪ್ರಚೋದಿಸಿ ಸಾಧಿಸುವ ಕಾರ್ಯ ಯಾವ ಸಂಸ್ಥೆಗಳಿಗೆ ಮೀಸಲಾಗಬೇಕೋ ಆ ಸಂಸ್ಥೆಗಳಲ್ಲಿಯೆ ಅದು ಅವಮಾನಿತವಾಗುತ್ತಿರವುದು ಅತ್ಯಂತ ನಿರಾಶಾಜನಕವಾಗಿದೆ. ವಿಜ್ಞಾನದ ಪಾಠ ಹೇಳಿಕೊಡುವ ಅಧ್ಯಾಪಕನೆ ತನ್ನ ಸ್ವಂತ ಬದುಕಿನಲ್ಲಿ ರಾಹುಕಾಲ ಪಂಚಾಂಗ ವಾರಭವಿಷ್ಯ ಇತ್ಯಾದಿ ಮೂಢ ನಂಬಿಕೆಗಳಿಂದ ಮೂರುಹೊತ್ತೂ ಮತ ಮೂರ್ಖನಾಗಿದ್ದರೆ ವಿದ್ಯಾರ್ಥಿಗಳಿಗೆ ಹೇಗೆತಾನೆ ಸಿದ್ಧಿಸೀತು ವಿಚಾರದೃಷ್ಟಿ, ನಮ್ಮ ರಾಜಕೀಯವಲಯದಲ್ಲಿಯೋ ಭವಿಷ್ಯನಿರ್ಣಯ ಮಾಡುವ ಜ್ಯೋತಿಷಿಗಳಿಗೆ ಪರಮಾಧಿಕಾರ ಲಭಿಸಿದಂತಾಗಿದೆ. ಅಧಿಕಾರಿ ತನ್ನ ಮೇಲ್ಮೆಯನ್ನು ಸಾಧಿಸಲು ಸೇವಾನಿಷ್ಠೆಯನ್ನು ಅನುಸರಿಸುವ ಕ್ಷೇಷಕ್ಕೆ ಹೋಗುವುದಿಲ್ಲ; ಜ್ಯೋತಿಷಿಯನ್ನೋ ಮಾತ್ರಿಕನನ್ನೋ ಆಶ್ರಯಿಸುತ್ತಾನೆ. ಮಂತ್ರಿ ತನ್ನ ರಾಜಕೀಯ ಭದ್ರತೆಯನ್ನು

ಪ್ರಜಾಸತ್ತೆಯ ಋಜುನಿಯಮಗಳಿಂದ ಸ್ಥಾಪಿಸಿಕೊಳ್ಳುವ 'ಅಭದ್ರ ವಿಜ್ಞಾನ'ಕ್ಕೆ ಬಿಟ್ಟುಕೊಡದೆ ಜ್ಯೋತಿಷಿಯ 'ಸುಭದ್ರ ಅಜ್ಞಾನ'ಕ್ಕೇ ಶರಣು ಹೋಗುತ್ತಾನೆ.

ಮಂತ್ರಿತ್ವ ವಹಿಸಿಕೊಳ್ಳುವ ಕಾಲನಿರ್ಣಯ ಮಾಡುವವನು ಜ್ಯೋತಿಷಿ. ಕೊನೆಗೆ ವಿಮಾನ ಏರುವ ಮಹೂರ್ತ ಇಟ್ಟುಕೊಡುವವನೂ ಜ್ಯೋತಿಷಿ; ಕೊನೆಗೆ ವಿಮಾನ ಹಾರುವ ಸಮಯ ಗೊತ್ತು ಮಾಡುವುದೂ ಇವನ ಕೈಲಿರದಿದ್ದರೆ, ಜೋಯಿಸನ 'ನಿಮಿತ್ತ'ಕ್ಕೆ ಶರಣಾಗಿ, ತನ್ನ ನಿವಾಸದಿಂದಾದರೂ ಆ ಸುಮುಹೂರ್ತಕ್ಕೆ ಹೊರಡದಿದ್ದರೆ ಆತನ ಮನಸ್ಸಿಗೆ ನೆಮ್ಮದಿ ಇಲ್ಲ; ತನ್ನ ಅವಿವೇಕದಿಂದ ಏನಾದರೂ ಕೆಟ್ಟುದಾದರೆ, ಸರಿ, ಹೊರಟ ಗಳಿಗೆಯ ಮೇಲೆ ಹೊರೆ ಹೇರುತ್ತಾರೆ. ಅಧ್ಯಾಪಕ, ಅಧಿಕಾರಿ, ಮಂತ್ರಿ, ವ್ಯಾಪಾರಿ, ಪಠಾಧಿಪತಿ, ಶ್ರಮಜೀವಿ, ಕೂಲಿ, ಕೊನೆಗೆ ಕಳ್ಳ—ಎಲ್ಲರಲ್ಲಿಯೂ ಎಲ್ಲೆಲ್ಲಿಯೂ ಇಂತಹ ಅವೈಜ್ಞಾನಿಕತೆ ಮತ್ತು ಅವಿಚಾರತೆ ವ್ಯಾಪಿಸಿ ವರ್ಧಿಸುತ್ತಿರುವುದನ್ನು ಸಂಕಟದಿಂದ ನೋಡುತ್ತಿರಬೇಕಾಗಿದೆ.

ಆದರೆ ಆತ್ಮಶ್ರೀಗಾಗಿ ನಿರಂಕುಶಮತಿಯಾಗುವ ಧೀರ ವಿದ್ಯಾರ್ಥಿ ಹತಾಶನಾಗುವುದಿಲ್ಲ. ವಿಜ್ಞಾನ ಮತ್ತು ಅಧ್ಯಾತ್ಮ — (ಮತವನ್ನಲ್ಲ, ಮೌಢ್ಯವನ್ನಲ್ಲ, ಅಂಧಶ್ರದ್ಧೆಯನ್ನಲ್ಲ ಅಂಧಾಚಾರವನ್ನಲ್ಲ) — ವಿಜ್ಞಾನ ಮತ್ತು ಅಧ್ಯಾತ್ಮ ಇವೆರಡನ್ನೂ ಕೆಚ್ಚಿನಿಂದ, ನಿಷ್ಠೆಯಿಂದ ದೃಢಬುದ್ಧಿಯಿಂದ ಆಶ್ರಯಿಸಿ, ವಿಚಾರಧಿಯಾಗಿ ವೈಜ್ಞಾನಿಕ ದೃಷ್ಟಿಸಂಪನ್ನನಾಗಿ ಮುಂಬರಿದು ತನಗೂ ಲೋಕಕ್ಕೂ ಕಲ್ಯಾಣವಾಗುವಂತೆ ಬಾಳುತ್ತಾನೆ. ದಾರಿಯ ಮುಳ್ಳನ್ನೆಲ್ಲ ತೆಗೆಯಲಾಗದಿದ್ದರೂ ತನ್ನ ಕಾಲಿಗಾದರೂ ಮೆಟ್ಟು ಹಾಕಿಕೊಂಡು ಮುನ್ನಡೆದು ಗುರಿಗೆ ಸೇರುತ್ತಾನೆ.

**ಕುವೆಂಪು**

ಮೈಸೂರು

೫.೫.೧೯೭೩

## ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ

ಅಮೃತಪುತ್ರರಲ್ಲಿ ವಿಜ್ಞಾಪನೆ,

ಮಿತ್ರರೇ, ನಿಮ್ಮ ಮುಂದೆ ನಿಂತು, ನನ್ನ ಕೆಲವು ಅಭಿಪ್ರಾಯಗಳನ್ನು ಪ್ರಕಾಶಪಡಿಸಲು ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ನಾನು ನಿಮ್ಮೆಲ್ಲರನ್ನೂ ಮನಮುಟ್ಟಿ ವಂದಿಸುತ್ತೇನೆ.

ನನ್ನ ಅಭಿಪ್ರಾಯಗಳು ಕೆಲವರಿಗೆ ರುಚಿಸದಿರಬಹುದು, ಮತ್ತೆ ಕೆಲವರಿಗೆ ಕ್ರಾಂತಿಕಾರಿಗಳಾಗಿ ತೋರಬಹುದು ಆದರೂ ನನ್ನ ಮನಸ್ಸಿನಲ್ಲಿ ಯಾರನ್ನಾದರೂ ನೋಯಿಸಬೇಕೆಂಬ ಇಚ್ಛೆ ಲವಲೇಶವೂ ಇಲ್ಲ. ಅಲ್ಲದೆ ನಾನು ಹೇಳಲಿರುವ ಅಭಿಪ್ರಾಯಗಳು ಅಲ್ಪಾಲೋಚನೆಯಿಂದಾಗಲಿ, ಉದ್ರೇಕದ ಬುದ್ಧಿಯಿಂದಲಾಗಲಿ, ಅನುದಾರತೆಯಿಂದಾಗಲಿ,

ಪ್ರತಿಹಿಂಸಾಭಾವದಿಂದಾಗಲಿ ಬಂದುದಲ್ಲ; ಬಹುಕಾಲದ ದೀರ್ಘಮಂಥನದಿಂದ, ಪ್ರಶಾಂತ ಧ್ಯಾನದಿಂದ, ಅನ್ಯಾಯಗಳನ್ನೂ ಅವಿವೇಕಗಳನ್ನೂ ಅಜ್ಞಾನಜನ್ಯವಾದ ಕ್ರೂರ ವರ್ತನೆಗಳನ್ನೂ ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ, ನಮ್ಮ ದೇಶ ನಮ್ಮ ನಾಡು ನಮ್ಮ ಭಾಷೆ ನಮ್ಮ ಸಂಸ್ಕೃತಿ ನಮ್ಮ ಸ್ಥಿತಿಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಮೂಡಿದುವಾಗಿವೆ. ಆದಕಾರಣ, ತಾಳ್ಮೆಯಿಂದ ಆಲಿಸಿ, ವಿವೇಕದಿಂದ ಭಾವಿಸಿ, ವಿಮರ್ಶಕಬುದ್ಧಿಯಿಂದ ಪರೀಕ್ಷಿಸಿ, ಒಪ್ಪಿಗೆಯಾದುದನ್ನು ಸ್ವೀಕರಿಸಿ, ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ನಾನಿಲ್ಲಿ ಗುರುಸ್ಥಾನದಲ್ಲಿ ನಿಂತಿಲ್ಲ; ನೀವೂ ಶಿಷ್ಯಸ್ಥಾನದಲ್ಲಿ ಕುಳಿತಿಲ್ಲ. ನಾನು ಉಪದೇಶ ಮಾಡುತ್ತಿಲ್ಲ; ವಿಜ್ಞಾಪಿಸುತ್ತಿದ್ದೇನೆ. ನನ್ನಂತೆಯೇ ನಿಮ್ಮಲ್ಲಿ ಅನೇಕರು ಜಿಜ್ಞಾಸೆ ಮೂಡಿರಬಹುದು. ಹಾಗಿದ್ದರೆ ನಮ್ಮ ಅಭಿಪ್ರಾಯಗಳು ಘರ್ಷಿಸದೆ ಮೃದುವಾಗಿ ಹೊಂದಿಕೊಳ್ಳುತ್ತವೆ. ಜಿಜ್ಞಾಸೆ ಮಾಡದೆ ಇದ್ದವರಿಗೆ ಜಿಜ್ಞಾಸೆ ಮಾಡಲು ಭಾವಾವಕಾಶಗಳು ದೊರೆಯುತ್ತವೆ. ಆದ್ದರಿಂದ ಯಾರೊಬ್ಬರೂ ನನ್ನ ಮಾತುಗಳನ್ನು ಪಚನಮಾಡದೆ ನುಂಗದಿರಲಿ; ಮತಿಯ ಒರೆಗಲ್ಲಿಗೆ ಹಚ್ಚದೆ ಸ್ವೀಕರಿಸದಿರಲಿ; ಧೀರವಾಗಿ ವಿಮರ್ಶಿಸದೆ ಒಪ್ಪದಿರಲಿ; ಆದರೆ ಪಕ್ಷಪಾತವಿಲ್ಲದೆ ಕಿವಿಗೊಟ್ಟು ಮಾತ್ರ ಕೇಳಿ.

ಯುವಕರು 'ನಿರಂಕುಶಮತಿ'ಗಳಾಗಬೇಕು. 'ನಿರಂಕುಶಮತಿ'ತ್ವ ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೆ 'ನಿರಂಕುಶ ಮತಿ.'

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆದ್ದರಿಂದ, ಸಹೋದರರೇ, ಮತಿ ನಿಮ್ಮ ನಚ್ಚಿನ ರನ್ನ ದೀವಿಗೆಯಾಗಲಿ.

ಸ್ವಲ್ಪವಾಗಯೋ ಹೆಚ್ಚಾಗಿಯೋ ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ. ಕಾಂತಿಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವವೆ ನಿಸ್ತೇಜವಾಗಿದೆ. ಯುವಕ ಮಿತ್ರರೇ, ಅಧೋಗತಿಗಿಳಿದಿರುವ ನಮ್ಮ ಮತಿಯನ್ನು ಮತ್ತೆ ಆಕಾಶಕ್ಕೆತ್ತಬೇಕು.

ಮತಿಯನ್ನು ನಿಸ್ತೇಜಗೈದಿರುವ ಕೆಲವು ಅಂಶಗಳನ್ನು ವಿವರಿಸುತ್ತೇನೆ. ಸಾವಧಾನದಿಂದ ಕೇಳಿ.

ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರಳಾಗಿದೆ. ಪರಮಶಾಂತಿಯೂ ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೆ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟು ಕಟ್ಟಳೆಗಳ ಕಾಡವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದ, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತ ಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು; — ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ.

ಆದರೆ ಇನ್ನು ಹೆಚ್ಚು ಕಾಲ ಆ ಅಮೃತಸಂದೇಶಕ್ಕೆ ಕಿವುಡಾಗಿರಲಾರೆವು. ಹಾಗಿದ್ದರೆ ನಮಗೂ ನಮ್ಮ ಸಂಸ್ಕೃತಿಗೂ ಮರಣವೇ ಗತಿಯಾಗುತ್ತದೆ. ಯುವಕರಾದವರು ಎಚ್ಚತ್ತುಕೊಂಡು ದೀರ್ಘದೃಷ್ಟಿಯಿಂದಲೂ ವಿಶಾಲ ಹೃದಯದಿಂದಲೂ ಸನಾತನವಾದರೂ ಚಿರನವೀನವಾದ ಆತ್ಮನ ಚರಂತನ 'ದರ್ಶನ'ವನ್ನು ಪಡೆದು ತಮ್ಮನ್ನೂ ದೇಶವನ್ನೂ ಉದ್ಧಾರಮಾಡಿಕೊಳ್ಳಬೇಕಾಗಿದೆ.

ಸರ್ವಮತಗಳಿಗಿಂತಲೂ ಶುದ್ಧಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದುವು ಏನೇ ಹೇಳಲಿ; ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರ ನಿಂದೆ. ಯಾವ ರೂಪದಲ್ಲಿಯೆ ಆಗಲಿ, ಯಾವ ವೇಷದಲ್ಲಿಯೆ ಆಗಲಿ, ತಿಳಿದೂ ತಳಿದೂ ಮೂಢತನವನ್ನು ಆರಾಧಿಸಿ, ಬೋಧಿಸಿ, ಲಾಭ ಪಡೆಯತ್ತ ನೆಮ್ಮದಿಯಾಗಿರುವವನು ಪಾಷಂಡಿಯಾಗುತ್ತಾನೆ.

ಚತುರ್ಮುಖ ಬ್ರಹ್ಮನೇ ಸಾಕ್ಷಾತ್ತಾಗಿ ಬಂದು, ನಾನೀಗ ನಿಮ್ಮೊಡನೆ ಮಾತಾಡುತ್ತಿರುವಂತೆ. ಋಷಿಗಳಿಗೆ ವೇದಗಳನ್ನು ಉಪನ್ಯಸಿಸಿದನು ಎಂದು ಹೇಳಿದರೆ, ಕಣ್ಣುಮುಚ್ಚಿಕೊಂಡು ನಂಬಬೇಡಿ. ಯಾವ ಕಾಲದಲ್ಲಿಯೋ ಯಾವ ಸಮಾಜಕ್ಕಾಗಿಯೋ ಮನು ಬರೆದಿಟ್ಟ ಕಟ್ಟಳೆಗಳು ಇಂದಿಗೂ ನಮ್ಮನ್ನಾಳಬೇಕೆಂದು ಹೇಳಿದರೆ ತಲೆದೂಗಿಬಿಡಬೇಡಿ. ಆಗಿನ ಮನು ಪವಿತ್ರನಾದರೆ ಈಗಿನ ಮಹಾತ್ಮಾಗಾಂಧಿ ಪವಿತ್ರನಲ್ಲವೆ? ನಂಬುಗೆ ಪುರಾತನವಾದ ಮಾತ್ರಕ್ಕೆ ಸತ್ಯವಾದುದೆಂದು ಭಾವಿಸಬೇಡಿ. ವಿಜ್ಞಾನ ಪ್ರಪಂಚದಲ್ಲಿ ಹೊಸದಾಗಿ ಕಂಡು ಹಿಡಿದ ಸತ್ಯಗಳು ಹಳೆಯ ಅರ್ಧಸತ್ಯಗಳಿಗಿಂತಲೂ ಮಾನ್ಯವಾಗುವುದಾದರೆ ಧರ್ಮ ಪ್ರಪಂಚದಲ್ಲೇಕೆ ಹಾಗಾಗಬಾರದು? ವೇದ ಅನಾದಿಯಾದರೆ

ಅನಂತವೂ ಆಗಿರುವುದಿಲ್ಲವೆ? ವೇದ ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಅದು ಇಂದಿಗೂ ನಾಳೆಗೂ ಮುಂದುವರಿಯುತ್ತವೆ. ಹಾಗೆಯೇ ಋಷಿಗಳೂ ಆಚಾರ್ಯರೂ ಅಂದಿಗೇ ಪೂರೈಸಿಲ್ಲ, ಕೊನೆಗಂಡಿಲ್ಲ; ಇಂದಿಗೂ ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ. ಸಂಕುಚಿತ ಬುದ್ಧಿಯನ್ನು ದೂರಮಾಡಿ. ಹೃದಯಜೀವನ ಹಳೆಯನೀರಿನ ಕೊಳಕು ಕೊಳವಾಗದಿರಲಿ; ಯಾವಾಗಲೂ ಹೊಸ ನೀರು ಬಂದು ಹರಿಯುತ್ತಿರುವ ಸ್ವಚ್ಛ ಸಲಿಲ ಸ್ರೋತವಾಗಿರಲಿ.

ಮಹನೀಯರೇ, ಕೆಲವು ಉದಾಹರಣೆಗಳನ್ನು ತೆಗೆದುಕೊಂಡರೆ ನನ್ನ ಆಶಯ ನಿಮಗೆ ಇನ್ನೂ ಸ್ಪಷ್ಟವಾಗುತ್ತದೆ. ಅಸ್ಫುಟವಾಗಿ ಅನಿರ್ದಿಷ್ಟವಾಗಿ ನಿರಾಕಾರವಾಗಿ ತತ್ತ್ವಪ್ರತಿಪಾದನೆ ಮಾಡುವುದಕ್ಕಿಂತ ದೃಷ್ಟಾಂತಗಳನ್ನೂ ನಿದರ್ಶನಗಳನ್ನೂ ತೆಗೆದುಕೊಂಡು ಭಾವವನ್ನು ವಿವರಿಸುವುದು ಮೇಲು.

ಮತಭ್ರಾಂತಿಯೂ ಮೌಢ್ಯವೂ ವೈಜ್ಞಾನಿಕ ಪ್ರಗತಿಗೆ ಹೇಗೆ ಮಹಾಕಂಟಕಗಳಾದುವು ಎಂಬುದಕ್ಕೆ ಪಾಶ್ಚಾತ್ಯ ದೇಶಗಳ ಕ್ರೈಸ್ತಧರ್ಮ ಚರಿತ್ರೆಯಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಅವುಗಳಲ್ಲಿ ಒಂದು, ಸುಪ್ರಸಿದ್ಧ ವಿಜ್ಞಾನಿಯಾಗಿದ್ದ ಗೆಲಿಲಿಯೋ ಎಂಬಾತನನ್ನು ಕುರಿತದ್ದು. ಕ್ರೈಸ್ತರಿಗೆ ಬೈಬಲ್ ಪರಮ ಪ್ರಮಾಣವಾದ ಪವಿತ್ರ ಗ್ರಂಥ, ಹಿಂದೂಗಳಿಗೆ ವೇದಗಳಿರುವಂತೆ. ಆದ್ದರಿಂದ ಕ್ರೈಸ್ತ ಪುರೋಹಿತರೂ ಗುರುಗಳೂ ಭಕ್ತ ಜನರೂ ಬೈಬಲ್ಲಿಗೆ ವ್ಯತಿರಿಕ್ತವಾದುವೆಲ್ಲ. ಪಾಷಂಡ ಮತವೆಂದು ಸಾರಿ, ಅಂತಹ ದುರ್ಮತಕ್ಕೆ ಕಾರಣರಾದವರನ್ನು ಜೀವಸಹಿತವಾಗಿ ಸುಡುವುದೇ ಮೊದಲಾದ ಶಿಕ್ಷೆಗಳಿಗೆ ಗುರಿಮಾಡುತ್ತಿದ್ದರು. ಎಷ್ಟೋ ಜನ ಸಾತ್ತ್ವಿಕ ಜೀವಿಗಳೂ ಮೇಧಾವಿಗಳೂ ಆದ ಸತ್ಯಾರಾಧಕರು ಬೈಬಲಿಗೂ ಮತ್ತು ಕ್ರೈಸ್ತಗುರು ಸಂಪ್ರದಾಯಕ್ಕೂ ವ್ಯತಿರಿಕ್ತವಾದ ಖಗೋಲಶಾಸ್ತ್ರ, ಜೀವಶಾಸ್ತ್ರ, ಮತ್ತು ಭೌತಶಾಸ್ತ್ರಗಳ ಅಮೂಲ್ಯ ಸತ್ಯಗಳನ್ನು ಕಂಡುಹಿಡಿದು ಹೇಳಿದದುದರ ಫಲವಾಗಿ ಆ ಪುರೋಹಿತರ ಕ್ರೋಧಾಗ್ನಿಗೆ ಸಿಕ್ಕಿ ಭಸ್ಮೀಭೂತರಾಗಬೇಕಾಯಿತು.

ಗೆಲಿಲಿಯೊ ಎಂಬಾತನು ದೂರದರ್ಶಕ ಯಂತ್ರವನ್ನು ಕಂಡುಹಿಡಿದು, ಗ್ರಹ ಚಂದ್ರ ತಾರೆಗಳನ್ನು ನೋಡಿ ಪರೀಕ್ಷಿಸಿದುದರ ಫಲರೂಪವಾಗಿ ಭೂಮಿ ಇತರ ಗ್ರಹಗಳಂತೆ ಸೂರ್ಯನ ಸುತ್ತ ಸುತ್ತುತ್ತದೆ ಎಂದು ಪ್ರಯೋಗಪೂರ್ವಕವಾಗಿ ಸಿದ್ಧಾಂತ ಮಾಡಿದನು. ಆದರೆ ಕ್ರೈಸ್ತಸಂಪ್ರದಾಯಕ್ಕನುಸಾರವಾಗಿ ಭೂಮಿ ಜಗತ್ತಿನ ಕೇಂದ್ರಸ್ಥಾನ; ಸೂರ್ಯ ನಕ್ಷತ್ರಗಳೆಲ್ಲ ಭೂಮಿಯ ಸುತ್ತ ಸುತ್ತುತ್ತವೆ. ಆ ಕಾರಣದಿಂದಲೆ ಕ್ರೈಸ್ತಗುರುಗಳು ಗೆಲಿಲೆಯೊವನ್ನು ಪಾಷಂಡಿಯೆಂದು ಸಾರಿ ವಿಚಾರಣೆಗೆ ಒಳಪಡಿಸಿದರು. ಮುಟ್ಠಾಳರೆಲ್ಲ ಸೇರಿ ಮೇಧಾವಿಯನ್ನು ಕುರಿತು ಹೀಗೆ ಹೇಳಿದರು: “ನಮ್ಮ ಪವಿತ್ರ ಧರ್ಮಶಾಸ್ತ್ರ ಭೂಮಿಯೆ ವಿಶ್ವದ ಕೇಂದ್ರವೆಂದು ಹೇಳುತ್ತದೆ. ಸೂರ್ಯ ಚಂದ್ರ ನಕತ್ರಗಳೆಲ್ಲ ದೇವರು ತನ್ನ ಮಕ್ಕಳಾದ ಮನುಷ್ಯರ ಪ್ರಯೋಜನಕ್ಕಾಗಿ ಆಕಾಶದಲ್ಲಿಟ್ಟಿರುವ ಅಲಂಕಾರ ದೀಪಗಳು. ಅವು ಭೂಮಿಯ ಸುತ್ತ ಸುತ್ತುತ್ತವೆ. ಭೂಮಿ ತನಗಿಂತಲೂ ಬಹುಪಾಲು ದೊಡ್ಡದಾಗಿರುವ ಸೂರ್ಯನ ಸುತ್ತಲೂ ಸುತ್ತುವ ಅನೇಕ ಗ್ರಹಗಳಲ್ಲಿ ಒಂದು ಸಣ್ಣ ಯಃಕಶ್ಚಿತ ಗ್ರಹ ಮಾತ್ರವೆಂದು ಸಿದ್ಧಾಂತ ಮಾಡಿ ನಮ್ಮನ್ನು ಸೃಷ್ಟಿಸಿದ ಕರುಣಾಮಯನಾದ ಸೃಷ್ಟಿಕರ್ತನಿಗೂ ಆತನ ವಾಣಿಗೂ ಆತನ ಭಕ್ತರಿಗೂ ಅವಮಾನ ಮಾಡಿದ್ದೀಯೆ. ಅಲ್ಲದೆ ನೀನು ಹೇಳುವುದು ಬೈಬಲ್ಲಿಗೆ ವ್ಯತಿರಿಕ್ತವಾದುದರಿಂದ ಅದು ಸುಳ್ಳು. ನಿನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು ನಮ್ಮ

ಪವಿತ್ರಮತ ಹೇಳುವ ಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೆ, ಪವಿತ್ರಮತದ ಉದ್ಧಾರಕ್ಕಾಗಿಯೂ ಬೈಬಲ್ಲಿನ ಗೌರವಾರ್ಥವಾಗಿಯೂ ಪಾಷಂಡಿಗಳಿಗೆ ಭೀತಿ ಹುಟ್ಟಿಸುವ ಸಲುವಾಗಿಯೂ ಸೃಷ್ಟಿಕರ್ತನ ಮಹಿಮೆ ಪೂಜೆಗಳಿಗಾಗಿಯೂ ನಿನ್ನ ಆತ್ಮದ ಪ್ರಾಯಶ್ಚಿತ್ತ ಮತ್ತು ಮೋಕ್ಷಾರ್ಥವಾಗಿಯೂ ನಿನ್ನನ್ನು ಜೀವಸಹಿತವಾಗಿ ಸುಡುತ್ತೇವೆ! ಹೇಳು! ಸುಳ್ಳು ಸಿದ್ಧಾಂತವನ್ನು ವಾಪಸು ತೆಗೆದುಕೊಳ್ಳುತ್ತಿಯೊ? ಜೀವಸಹಿತವಾಗಿ ಸುಡಿಸಿಕೊಳ್ಳುತ್ತಿಯೊ?"

ಗೆಲಿಲಿಯೊಗೆ ಚೆನ್ನಾಗಿ ಗೊತ್ತು, ತನ್ನ ಸಿದ್ಧಾಂತವೇ ಸರಿ ಎಂದು. ಆದರೆ ವಾಪಸು ತೆಗೆದುಕೊಳ್ಳದಿದ್ದರೆ, ಹಿಂದೆ ಕೆಲವರನ್ನು ಸುಟ್ಟ ಹಾಗೆ ತನ್ನನ್ನೂ ಸುಡುತ್ತಾರೆ ಎಂದೂ ಆತನಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಆ ಮುಟ್ಠಾಳರ ತೃಪ್ತಿಗಾಗಿ ತನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು, ಅವರ ಸಿದ್ಧಾಂತವೇ ಸರಿಯೆಂದು ಒಪ್ಪಿ ಬಿಡುಗಡೆ ಪಡೆದನು. ಆದರೆ ಕೋರ್ಟಿನಿಂದ ಹೊರಗೆ ಬರುವಾಗ ತನ್ನಷ್ಟಕ್ಕೆ ತಾನೇ "ನಾನು ನೋವಿಗೆ ಹೆದರಿ ವಾಪಸು ತೆಗೆದುಕೊಂಡರೇನಾಯಿತು? ಭೂಮಿ ಸೂರ್ಯನ ಸುತ್ತ ಸುತ್ತಿಯೇ ಸುತ್ತುತ್ತದೆ" ಎಂದುಕೊಂಡನಂತೆ. ಹೀಗೆ ಮತಿಹೀನವಾದ ಮತ ಜ್ಞಾನದ ಪ್ರಗತಿಗೆ ಅಡಚಣೆಯಾಗಿರುವುದಕ್ಕೆ ಸಾವಿರಾರು ನಿದರ್ಶನಗಳು ಹಿಂದೆಯೂ ಸಿಕ್ಕುತ್ತವೆ; ಇಂದೂ ದೊರೆಯುತ್ತವೆ.

ಕೆಲವು ತಿಂಗಳ ಪತ್ತಿಕೆಯೊಂದರಲ್ಲಿ ಯಾರೋ ಒಬ್ಬರಿಗೆ ಯಾವುದೋ ದೇವತೆ ಯಾವುದೋ ತೋಟದಲ್ಲಿ ಕಾಣಿಸಿಕೊಂಡಂತೆಯೂ, ಆ ದೇವತೆ "ಎಲ್ಲರೂ ಇಂತಿಷ್ಟು ದಿನಗಳ ಒಳಗಾಗಿ ಉಗಾದಿ ಹಬ್ಬವನ್ನು ಮಾಡದಿದ್ದರೆ ಮನೆಮನೆಗೂ ಒಂದೊಂದು ಜೀವವನ್ನು ಅಪಹರಿಸುತ್ತೇನೆ" ಎಂದು ಹೇಳಿದಹಾಗೂ ಪ್ರಕಟವಾಗಿದ್ದಿತು. ಮಾಡಬೇಕಾದ ನೈವೇದ್ಯಗಳ ವಿವರವೂ ಪ್ರಮಾಣವೂ ಕೂಡ ಅಚ್ಚಾಗಿತ್ತು. ಅನೇಕರು ಹೆದರಿಯೇ ಹಬ್ಬ ಮಾಡಿಕೊಂಡು ತಿಂದರು. ಹಬ್ಬಮಾಡಿಕೊಂಡು ತಿಂದುದರಿಂದ ಅಪಾಯವೇನಿಲ್ಲ. ಆದರೆ ಅಂತಹ ಮೂಢ ಭಾವಗಳ ಪ್ರಚಾರ ದುಷ್ಪರಿಣಾಮಕಾರಿಯಾದುದಲ್ಲವೇ? ಅದರಲ್ಲಿಯೂ ಹಳ್ಳಿಗಳಲ್ಲಿ ಪತ್ರಿಕೆಗಳೆಂದರೆ ವೇದಸಮವಾಗಿವೆ. ಪತ್ರಿಕೆಗಳಲ್ಲಿ ಬಂದಿದೆ ಎಂದರೆ ಏನನ್ನು ಬೇಕಾದರೂ ನಂಬುತ್ತಾರೆ, ವೇದ ಧರ್ಮಶಾಸ್ತ್ರಗಳಲ್ಲಿ ಹೇಳಿದೆ ಎಂದರೆ ಎಂತಹ ಕ್ರೂರಕರ್ಮವನ್ನಾದರೂ ಸರಿ ಎಂದು ನಂಬುವಂತೆ! ಅಚ್ಚಿನಲ್ಲಿ ಅವರಿಗಷ್ಟು ಗೌರವ; ನಮಗೆ ಸಂಸ್ಕೃತ ಶ್ಲೋಕಗಳಲ್ಲಿರುವಂತೆ. ದುಡ್ಡು ಇದ್ದರೆ ಸರಿ. 'ಮೊಲಕ್ಕೆ ಮೂರು ಕೊಂಬುಗಳ ತುದಿಯಲ್ಲಿ ಕಣ್ಣುಗಳಿವೆ' ಎಂದು ಬೇಕಾದರೂ ಅಚ್ಚು ಮಾಡಬಹುದು ಎಂಬ ಸಂಗತಿ, ಪಾಪ ಆ ಹಳ್ಳಿಗರಿಗೇನು ಗೊತ್ತು?

ಹಾಗೆಯೇ ಪರ್ಜನ್ಯಜಪ ಮಾಡಿ ಮಳೆ ಬರಿಸಿದರು ಎನ್ನುವ ವಿಷಯ. ಅದನ್ನು ಕುರಿತು ಎಷ್ಟು ಮಂದಿ ನಿಷ್ಪಕ್ಷಪಾತವಾಗಿ ಧೀರಮತಿಯಿಂದ ಅಲೋಚಿಸಿದ್ದಾರೆ? ಸಹರಾ ಮರುಭೂಮಿಗೆ ಪುರೋಹಿತರನ್ನು ಕಳುಹಿಸಿ ಪರ್ಜನ್ಯಜಪ ಮಾಡಿಸಿದರೆ ಮಳೆ ಬಂದು ಅದು ಫಲವತ್ತಾಗುತ್ತದೆಯೆ? ಆಗುತ್ತದೆ ಎಂದು ನಿರ್ಣಯವಾಗುವವರೆಗೆ ನಂಬುಗೆ ಕುರುಡಲ್ಲವೆ? ಹುತ್ಪೂರ್ವಕವಾದ ಪ್ರಾರ್ಥನೆಯಿಂದ ಪ್ರಕೃತಿ ನಿಯಮಗಳು ಮನಕರಗುತ್ತವೆಯೆ? ಒಂದು ವೇಳೆ ಕರಗುವುದಾದರೂ ರೈತಾದಿ ಜನಗಳು ಮನೆಮನೆಯಲ್ಲಿಯೂ ಮೂರುಹೊತ್ತೂ 'ಭಗವಂತ, ಮಳೆಯನ್ನು ದಯಪಾಲಿಸು' ಎಂದು ಬೇಡುವ ಆರ್ತಧ್ವನಿಗಿಂತಲೂ ದುಡ್ಡುಕೊಟ್ಟು ಮಾಡಿಸುವ ಜಪಕ್ಕೆ ಜಗಚ್ಛಕ್ತಿ ಹೆಚ್ಚಾಗಿ ಕೃಪೆದೋರುತ್ತದೆಯೆ? ಯುವಕರೆಲ್ಲರೂ ಇಂತಹ ಪ್ರಶ್ನೆಗಳನ್ನು ಧೀರವಾಗಿ ಕೇಳಿಕೊಳ್ಳಬೇಕು. ಧೀರವಾದ ಉತ್ತರಗಳನ್ನು ಕಂಡುಹಿಡಿದುಕೊಳ್ಳಬೇಕು.

ಏಕೆಂದರೆ ಇಂದು ಪರ್ಜನ್ಯಜಪ ಮಾಡಿ ಮಳೆಬರಿಸಿದವರು ನಾಳೆ ರಾಮ ಧ್ಯಾನಮಾಡಿ ಪ್ಲೇಗು ಓಡಿಸಲಾರರೆ ಎಂದು ಮೂಢರು ಆ ರೋಗಕ್ಕೆ ಬೇಕಾಗುವ ವೈದ್ಯಕಾರ್ಯಗಳನ್ನು ಮಾಡದೆ ನಾಶವಾಗಬಹುದು! ಇಂತಹ ಮೌಢ್ಯದಿಂದ ನಾಶವಾಗುತ್ತಿರುವುದನ್ನು ನಾವು ಕಣ್ಣಾರೆ ಕಾಣಬಹುದು. ಉದ್ದೇಶ ಎಷ್ಟೇ ಶ್ಲಾಘ್ಯವಾಗಲಿ, ಅದು ತಿಳಿವಳಿಕೆಯಿಂದ ಕೂಡಿರದಿದ್ದರೆ ಅಪಾಯವಾಗುತ್ತದೆ. ಒಂದು ಪಟ್ಟಣದಲ್ಲಿ ಸಿಡುಬು ರೋಗ ತಲೆದೋರಿ ಎಲ್ಲಲ್ಲಿಯೂ ಜನರು ಸಾಯುತ್ತಿದ್ದರಂತೆ. ಆ ನಗರದ ದೊಡ್ಡ ಪಾದ್ರಿ ಸಿಡುಬಿನ ರೋಗವನ್ನು ಓಡಿಸುವುದಕ್ಕೆಂದು ಜನರೆನ್ನೆಲ್ಲ ಚರ್ಚಿನಲ್ಲಿ ಒಟ್ಟುಗೂಡಿಸಿ ದೇವರ ಪ್ರಾರ್ಥನೆ ಮಾಡಿಸಿದನಂತೆ. ಆದರೆ ಆ ಗುಂಪಿನಲ್ಲಿ ಸಿಡುಬಿನ ಸೋಂಕು ತಗುಲಿದವರು ಇದ್ದುದರಿಂದ, ಜನರು 'ಸಿಡುಬಿನಿಂದ ಪಾರುಮಾಡು' ಎಂದು ದೇವರನ್ನು ಬೇಡುತ್ತಿದ್ದಾಗಲೆ ಆ ಭಯಂಕರ ರೋಗ ನೆರೆದವರಲ್ಲಿ ಒಬ್ಬರಿಂದೊಬ್ಬರಿಗೆ ಹರಡುತ್ತಿತ್ತು. ಇಲ್ಲಿ ಪಾದ್ರಿಯ ಮತ್ತು ಜನರ ಉದ್ದೇಶ ಸದ್ಭಾವದಿಂದ ಕೂಡಿದ್ದರೂ ಸಿಡುಬಿನ ರೋಗದ ವಿಚಾರವಾಗಿದ್ದ ಅವರ ಅಜ್ಞಾನ ಆ ಸದುದ್ದೇಶವನ್ನೆ ಅದು ಭಯಂಕರ ವ್ಯಾಪಾರಕ್ಕೆ ಕಾರಣವಾಗುವಂತೆ ಮಾಡಿತು. ಅಂತಹ ಅನಾಹುತಗಳಿಂದ ಜನರನ್ನು ಪಾರು ಮಾಡಬೇಕಾದರೆ ಅವರ ಕೈಗೆ ಮತಿಯ ದೀವಿಗೆಯನ್ನು ಕೊಡಬೇಕು. ಅವರಲ್ಲಿ ಪರೀಕ್ಷಿಸುವ ಬುದ್ಧಿಯೂ ವಿಮರ್ಶಿಸುವ ಧೈರ್ಯವೂ ಉದ್ಭವಿಸುವಂತೆ ಮಾಡಬೇಕು. "ಅವಿದ್ಯಾಯಾ ಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಮಡಿತಂ ಮಂನ್ಯಮಾನಾಃ। ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇ ನೈವ ನೀಯಮಾನಾ ಯಂಥಾಂಧಾಃ॥ ಅವಿದ್ಯೆಯಾ ಮಧ್ಯೆ ಬಿದ್ದುಕೊಂಡಿದ್ದರೂ ತಾವು ಬುದ್ಧಿವಂತರೆಂದೂ ಪಂಡಿತರೆಂದೂ ಭ್ರಮಿಸಿ, ಕುರಡರಿಂದ ನಡೆಯಿಸಲ್ಪಡುವ ಕುರುಡರಂತೆ, ಅಜ್ಞಾನಿಗಳು ಕಷ್ಟಕ್ಕೀಡಾಗಿ ತೊಳಲುತ್ತಾರೆ" ಎಂದು ಹೇಳುವ ಉಪನಿಷತ್ತಿನ ಎಚ್ಚರಿಕೆಗೆ ಕಿವಿಗೊಡಬೇಕು.

ಹಾಗೆಯೇ 'ದೇವಾಲಯ ಪ್ರವೇಶ'ದ ಪ್ರಶ್ನೆ — ಮುಂತಾದುವುಗಳನ್ನು ಕೆಚ್ಚಿನಿಂದ ಮತಿಯ ಒರೆಗಲ್ಲಿಗೆ ಹಚ್ಚಿನೋಡಬೇಕು. ಮೊನ್ನೆ ಪತ್ರಿಕೆಗಳಲ್ಲಿ ನಾನು ಓದಿದೆ. ಒಬ್ಬರು ಕೃತವಿದ್ಯಾರಾದ ಗೌರವಸ್ಥರು ದೇವಾಲಯಕ್ಕೆ ಹೋಗಿ ಬಂದುದಕ್ಕೆ ಪ್ರತಿಯಾಗಿ ಸಂಪ್ರೋಕ್ಷಣೆಗೆ ಜುಲುಮಾನೆ ಕೊಡಬೇಕಾಗಿ ಬಂದಿತಂತೆ. ಕಾರಣ, ಅವರು ಅಸ್ಪೃಶ್ಯರ ಜಾತಿಗೆ ಸೇರಿದವರಂತೆ. ಅವರಿಗಿಂತಲೂ ಮೂಢರೂ ಕೊಳಕರೂ ದುಷ್ಟರೂ ರೋಗಿಗಳೂ ದುರಾಚಾರಿಗಳೂ ಆದ 'ಸ್ಪೃಶ್ಯ'ರೆಂದೆನಿಸಿಕೊಂಡವರು ಗುಡಿಯೊಳಗೆ ಹೋದರೆ ಮೈಲಿಗೆಯಾಗುವುದಿಲ್ಲವಂತೆ! 'ಸ್ಪೃಶ್ಯ' ಯುವಕರು ತಮ್ಮ ಸಹೋದರನಿಗಾದ ಅವಮಾನ ತಮ್ಮದೆಂದು ಭಾವಿಸಿ ದೇವಾಲಯಗಳಿಗೆ ಹೋಗುವುದನ್ನೆ ಬಿಟ್ಟು, ಹೊರಗೆ, ಪ್ರಕೃತಿ ಸೌಂದರ್ಯದಲ್ಲಿ, ಉದಯಿಸುವ ಸೂರ್ಯನಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ, ದರಿದ್ರನಾರಾಯಣನ ಸೇವೆಯಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು, ಮತದ ಅನೌದಾರ್ಯವನ್ನು ಮುರಿಯಬೇಕು. ಅಸ್ಪೃಶ್ಯ ಯುವಕರಾದವರಿಗೆ ನನ್ನದೊಂದು ಬಿನ್ನಹ. ನೀವು ಅವಮಾನಿಸಿಕೊಂಡು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ? ಗುಡಿಯ ಕಲ್ಲಿನಲ್ಲಿ ದೇವರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ? 'ಪ್ರಭುಲಿಂಗ ಲೀಲೆ'ಯಲ್ಲಿ ಸತ್ಯಸಾಕ್ಷಾತ್ಕಾರದ ಕಾರ್ಯವನ್ನು ಬಿಟ್ಟು ಕೀರ್ತಿಪೂಜಾಲಾಭದಾಶೆಗೆ ದೇವಸ್ಥಾನವನ್ನು ಕಟ್ಟಿಸುತ್ತಿದ್ದ ಸಿದ್ಧರಾಮನನ್ನು ಕುರಿತು ಅಲ್ಲಮನು —

ಸಕಲ ಕಲ್ಲನು ಕಡಿದು, ಕಲ್ಲಿಗೆ
ಶಿಖರ ದೇಗುಲವೆಂದು ಮಾಡಿಸಿ,
ಮಕರಿಸುವರಿವರೊಡ್ಡರಲ್ಲದೆ ಸಿದ್ಧರಲ್ಲ —

ಎಂದಿದ್ದಾನೆ. ಒಡ್ಡತನದ ಕೆಲಸವನ್ನು ನಾವೇಕೆ ಮಾಡಬೇಕು! ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ದೂರವಾಗಿದ್ದುಕೊಂಡು ಎದೆಯ ದೇಗುಲದಲ್ಲಿಯೆ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೆ? ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶ ಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ್ಯ ಸಾಧನೆಗಾಗಿಯೆ ಹೊರತು ಹರಿಜನರ ಮೋಕ್ಷಕ್ಕಾಗಿಯಲ್ಲ. ಹೊರಗಿನ ಸುಂದರ ಪ್ರಕೃತಿಮಯ ಜಗತ್ತೂ ಅಂತರಂಗದ ದಿವ್ಯಭಾವಗಳ ಪ್ರಪಂಚವೂ ಸರ್ವರಿಗೂ ಸುಲಭವಾದ ಮಹಾಪುರಷರ ಕೃತಿಗಳಲ್ಲಿರುವ ಮಹದಾಲೋಚನೆಗಳೂ ನಮಗೆ ದೇವಸ್ಥಾನ, ಪೂಜೆ, ಗುರು, ಮಂತ್ರ ಇವುಗಳೆಲ್ಲವೂ ಆಗಲಿ; ಪ್ರಯತ್ನಿಸುವವರಿಗೆಲ್ಲ ಆ 'ದರ್ಶನ' ಲಭಿಸುವುದರಲ್ಲಿ ಸಂದೇಹವಿಲ್ಲ; ಅದು ಸಿದ್ಧಿಸುವವರೆಗೂ ನಮಗಾಗಲಿ ನಮ್ಮ ದೇಶಕ್ಕಾಗಲಿ ಮೋಕ್ಷವಿಲ್ಲ; ಸುಖವಿಲ್ಲ; ಶಾಂತಿಯಿಲ್ಲ; ದಾಸ್ಯದಿಂದ ಬಿಡುಗಡೆಯಿಲ್ಲ.

ಆದ್ದರಿಂದ ಯುವಕ ಸಹೋದರರರೇ, ಯಾವ ಒಂದು ಸಂಪ್ರದಾಯದ ಸಂಕೋಚಕ್ಕೂ ಸಿಕ್ಕಿಕೊಳ್ಳಬಾರದು. ಯಾವ ಒಂದು ಪಂಥದ ಇಕ್ಕಟ್ಟಿಗೂ ಒಳಗಾಗಬಾರದು. ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಕಂಡು, ಕಟ್ಟಿಕೊಂಡು ಬಾಳಬೇಕು. ಜಾತಿ ಮತ ದೇಶ ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರಷರ ಜ್ಞಾನಗಂಗೆಗಳ ಮಂಗಳಸಂಗಮದಲ್ಲಿ ತೀರ್ಥಸ್ನಾನಮಾಡಿ ಪೂರ್ಣ ಜೀವನವನ್ನು ಪೂರ್ಣವಾಗಿ ಅನುಭವಿಸಬೇಕು.

ಸೋದರರರೇ ಅಂತಹ 'ದರ್ಶನ'ದ ಸಂಪಾದನೆ ಅಷ್ಟೇನೂ ದುಸ್ಸಾಧ್ಯವಲ್ಲ. ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ ಅದು ಸುಲಭಸಾಧ್ಯ.

ಆ 'ದರ್ಶನ' ವನ್ನು ಪಡೆದ ಮೇಲೆ ನಮಗೆ ದೇವಸ್ಥಾನಗಳ ಆವಶ್ಯಕತೆ ಇರುವುದಿಲ್ಲ. ದೇವದೇವನ ಶರೀರರೂಪಿಯಾದ ಜಗತ್ತೆಲ್ಲವೂ ದೇವಸ್ಥಾನವಾಗುತ್ತದೆ. ಅಸ್ಪೃಶ್ಯರೆಂದು ಪರಿಗಣಿತರಾಗಿರುವ ಈಶ್ವರ ಶಿಶುಗಳು ಕಲ್ಲು ಕಟ್ಟಡದ ದೇವಸ್ಥಾನಗಳಿಗೆ ಹೋಗಿ ಭಕ್ತಿಪ್ರದರ್ಶನ ಮಾಡಿದ ಪಾಪಕ್ಕೆ ಆಮೇಲೆ ಸಂಪ್ರೋಕ್ಷಣೆಗಾಗಿ ಜುಲುಮಾನೆ ಕೊಡುವುದೂ ತಪ್ಪುತ್ತದೆ.

ಇಂತಹ ದಿವ್ಯ 'ದರ್ಶನ'ದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೆ ನಾನು 'ನಿರಂಕುಶಮತಿ' ಎಂದು ಕರೆದಿದ್ದೇನೆ. ಆದ್ದರಿಂದ ತಮ್ಮ ತಮ್ಮ ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ 'ನಿರಂಕುಶಮತಿ' ಗಳಾಗಬೇಕು.

'ನಿರಂಕುಶಮತಿ'ಗಳಾಗಬೇಕಾದರೆ ದಾಸ್ಯಬುದ್ಧಿ, ತೊಲಗಬೇಕು; ದಾಸ್ಯಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸಬೇಕು; ಎಂದರೆ ಸ್ವಾಲಂಬನ ಬೇಕು; ಎಂದರೆ ಇನ್ನೊಬ್ಬರ ಕೈ ಹಾರೈಸಿ ಹೊಟ್ಟೆ ಹೊರೆಯುವುದು ತಪ್ಪಬೇಕು. ಮುಚ್ಚುಮರೆಯಿಲ್ಲದೆ ಬಿಚ್ಚಿ ಹೇಳುವುದಾದರೆ, ಸಂಪತ್ತುಬೇಕು, ಹಣಬೇಕು; ಉದ್ಯೋಗ ಬೇಕು. ಮಿತ್ರರೇ, ನಾನು ಒಪ್ಪಿಕೊಳ್ಳುತ್ತೇನೆ, ಈ ಸಮಸ್ಯೆ ನಿಜವಾಗಿಯೂ ಕಗ್ಗಂಟಾಗಿದೆ. ಆ ಸಮಸ್ಯೆಯನ್ನು ಪರಿಹರಿಸಲೆಂದೇ ದೇಶದ ನಾಯಕರೆಲ್ಲರೂ ಕಷ್ಟಪಡುತ್ತಿದ್ದಾರೆ. ಆಶಾಬುದ್ಧಿಯಿಂದ ಅವರ ಉದ್ಯಮದಲ್ಲಿ ನಾವೂ ಭಾಗಿಗಳಾಗಿ ಇಂದಿನ ತಪಸ್ಸು ಮುಂದಿನ ಸತ್ಫಲಕ್ಕೆ ಮಾರ್ಗವೆಂದು ಶ್ರದ್ಧೆಯಿಂದ ಮುಂದುವರಿಯಬೇಕಾಗಿದೆ. ಸಮಸ್ಯೆಯ ಅಗಾಧತೆ ನಮ್ಮ ಮುಂದಿರುವ ಸಾಹಸದ ಆಳ ಅಗಲಗಳನ್ನು ಸೂಚಿಸುತ್ತದೆ.

ಆದರೂ ಪಾರಾಗಲೂ ಕೆಲವು ಸೂಚನೆಗಳನ್ನು ಕೊಡಬಹುದು. ಹೀಗೆಯೇ ಮಾಡಿ ಎಂದು ಇತಿವಿಧಿಗಳನ್ನು ಸೂಚಿಸುವುದು ಕಷ್ಟಸಾಧ್ಯವಾದರೂ ಹೀಗೆ ಮಾಡದಿದ್ದರೆ ಒಂದಿಷ್ಟು ಲೇಸಾಗಬಹುದೆಂದು ನೇತಿವಿಧಾನವನ್ನಾದರೂ ಹೇಳಲು ಸಾಧ್ಯ.

ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಕೂಡ ಅವರು ಕೈಕೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಿವೆ 'ಉತ್ಪತ್ತಿಕಾರಕ' ವಾಗಿರುವುದಿಲ್ಲ; 'ಸಂಗ್ರಹಕಾರಕ'ವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೆ ಸಂಪತ್ತನ್ನು ಸೃಷ್ಟಿಸದೆ ಸಮಗ್ರಹಿಸುತ್ತಲೆ ಹೋಗಲಾಗುತ್ತದೆ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ ಎಂದುಕೊಂಡು, ಗ್ರಾಮಗಳಲ್ಲಿಯೆ ನಿಂತು ಜನರ ಆಧ್ಯಾತ್ಮಿಕ ಅಜ್ಞಾನವನ್ನೂ ಆಧಿದೈವಿಕ ಮೌಢ್ಯವನ್ನೂ ಆಧಿಭೌತಿಕ ಕಷ್ಟನಷ್ಟಗಳನ್ನೂ ಪರಿಹರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಕೊಳ್ಳಬೇಕು.

ಮತದ ಹೆಸರಿನಲ್ಲಿ, ಸಮಾಜದ ಕಟ್ಟುಕಟ್ಟಲೆಗಲ ಹೆಸರಿನಲ್ಲಿ, ದೆವ್ವ, ಪಿಶಾಚಿ ಗ್ರಹಗಳ ಹೆಸರಿನಲ್ಲಿ, ಮಾಮೂಲಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹಚ್ಚು ಅವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರವಾಗಿರುವ ಜೀವನ ಪಥಗಳಲ್ಲಿ ವಿನಿಯೊಗಿಸುವಂತೆ ಮಾಡಬೇಕು.

ಯುವಕರು ವೇಷ ಭೂಷಣಗಲ್ಲಿ ಅತಿ ಷೋಕಿಗೆ ಹೋಗದೆ ಸರಳ ಸಾಧಾರಣವಾಗಿದ್ದರೆ ಸ್ವಲ್ಪವಾದರೂ ಉಳಿತಾಯವಾಗುತ್ತದೆ. ಅಲ್ಲದೆ ಷೋಕಿ ಮಾಡಲೆಂದು ಮದುವೆ ಮಾಡಿಕೊಂಡು ಮಾವಂದಿರ ಮೂಲಧನಕ್ಕೆ ಬಾಯಿ ಬಾಯಿ ಬಿಡುವುದೂ ತಪ್ಪುತ್ತದೆ.

ಯುವಕನು ಸಂಪಾದನೆ ಮಾಡುವ ಸಾಮರ್ಥ್ಯವನ್ನು ಪಡೆಯುವ ಮೊದಲೆ ಮದುವೆ ಮಾಡಿಕೊಂಡಲ್ಲಿ ಒಡನೆಯೆ ಚತುಷ್ಪಾದಿಯಾಗುತ್ತಾನೆ. ಅವನ ಸ್ವತಂತ್ರ ಬುದ್ಧಿ, ನಿರಂಕುಶ ಮತಿ ಎಲ್ಲವೂ ಮಣ್ಣುಗೂಡುತ್ತವೆ. ಅವರಿವರ ಕೈ ಹಾರೈಸಿ, ನಾಲ್ಕು ಕಾಸು ಸಂಪಾದನೆಗಾಗಿ ಅವರಿವರನ್ನು ಓಲಗಿಸ, ಅಧಿಕಾರಿಗಳ ಅಥವಾ ಸಾಹುಕಾರರ ಕಾಲಬಳಿ

ಮೂಲಗಿಸಿ, ತನ್ನಲ್ಲಿರುವ ದಿವ್ಯಾತ್ಮವನ್ನು ಸಂಪೂರ್ಣವಾಗಿ ಅವಮಾನಪಡಿಸುತ್ತಾನೆ. ಆತನ ತಾರುಣ್ಯದ 'ದರ್ಶನ' ಜ್ಯೋತಿ ಸಾಂಸಾರಿಕ ಜೀವನದ ದಾಸ್ಯದಲ್ಲಿ, ಕೋಟಲೆಯಲ್ಲಿ, ಕಷ್ಟದಲ್ಲಿ ಧೂಳಿಧೂಮಗಳಲ್ಲಿ ನಂದಿಹೋಗುತ್ತದೆ ಅಥವಾ ನಂದಿಹೋಗುವಷ್ಟರ ಮಟ್ಟಿಗೆ ಮಾಸಿಹೋಗುತ್ತದೆ. ಕಡೆಕಡೆಗೆ ಅನೀತಿ ಕೂಡ ಹೀನವಾಗಿ ತೋರುವುದಿಲ್ಲ. ಅವನ ಔದಾರ್ಯದ ವಲಯ ಬರಬರುತ್ತಾ ಕಿರಿದಾಗಿ, ಕಡೆಗೆ ತಾನು, ತನ್ನ ಹೆಂಡತಿ, ತನ್ನ ಮಗು ಮೂವರನ್ನು ಮಾತ್ರ ಸುತ್ತುವರಿಯುತ್ತದೆ. ಅವರಿಗಾಗಿ ಏನನ್ನೂ ಬೇಕಾದರೂ ಮಾಡಲು ಹೇಸುವುದಿಲ್ಲ. ಹಾಗಾಗುವವರು ದೇಶದ ಪ್ರಗತಿಗೆ ಕಂಟಕಪ್ರಾಯರಾಗುತ್ತಾರೆ. ಆದ್ದರಿಂದ, ಮಿತ್ರರೇ, ನಿಮ್ಮ ಕಾಲ ಮೇಲೆ ನೀವು ನೆಮ್ಮದಿಯಾಗಿ ನಿಲ್ಲುವ ಶಕ್ತಿ ಬರುವ ಮೊದಲು ಮದುವೆಯಾಗಬೇಡಿ; ಆತ್ಮಕ್ಕೆ ಅಗೌರವವನ್ನೂ ಮನಸ್ಸಿಗೆ ಯಾತನೆಯನ್ನೂ ದೇಶಕ್ಕೆ ಹಾನಿಯನ್ನೂ ತರಬೇಡಿ.

ಅದಕ್ಕೆ ಬದಲು ವೈವಾಹಿಕ ಜೀವನವನ್ನು ಸಾಂಗವಾಗಿ ನಡೆಸಲು ತಕ್ಕ ಸಂಪತ್ತೂ ಸಾಮರ್ಥ್ಯವೂ ಲಭಿಸುವ ತನಕ ಬ್ರಹ್ಮಚಾರಿಗಳಾಗಿದ್ದುಕೊಂಡು ದೇಶಕ್ಕೆ ಹಿತಕರವಾದ ಕಾರ್ಯಗಳನ್ನು ಮಾಡುತ್ತಿರಬಹುದು. ಭೀಷ್ಮನು ಬ್ರಹ್ಮಚಾರಿಯಾಗಿದ್ದನು. ಹನುಮಂತನು ಬ್ರಹ್ಮಚಾರಿಯಾಗಿದ್ದನು. ಅವರು ಮಹತ್ಕಾರ್ಯಗಳನ್ನು ಸಾಧಿಸಿದರು. ಇಂದಿನ ಮನಶ್ಶಾಸ್ತ್ರವೂ ಕೂಡ ಬ್ರಹ್ಮಚರ್ಯದಿಂದ ತೇಜಸ್ಸು ಓಜಸ್ಸುಗಳೂ ದರ್ಪ ಬಲ ಅಧಿಕಾರಿಗಳೂ ಲಭಿಸುತ್ತವೆ ಎಂದು ಹೇಳುತ್ತಿದೆ. "ನಾಯಮಾತ್ಮಾ ಬಲಹೀನೇನ ಲಭ್ಯಃ."

ದೇಶವು ಸರ್ವತೋಮುಖವಾಗಿ ಎಚ್ಚರಗೊಳ್ಳುತ್ತಿರುವ ಕಾಲವಿದು. ಎಲ್ಲೆಲ್ಲಿಯೂ ಎಲ್ಲ ಶಾಖೆಗಳಲ್ಲಿಯೂ ಕೆಲಸಗಾರರು ಬೇಕಾಗಿದ್ದಾರೆ. ಸಂಘಬದ್ಧರಾಗಿಯೊ, ಸಂಸ್ಥೆಗಳಿಗೆ ಸದಸ್ಯರಾಗಿಯೊ, ಅಥವಾ ವ್ಯಕ್ತಿಶಃವಾಗಿಯೊ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಆ ಕಾರ್ಯಗಳ ರೀತಿ ನೀತಿ ವಲಯ ವಿಸ್ತಾರಗಳನ್ನು ಯಾರೊಬ್ಬರೂ ನಿಷ್ಕರ್ಷಿಸಿ ಹೇಳಲಾರರು. ಆಯಾ ಸನ್ನಿವೇಶಕ್ಕೆ ತಕ್ಕಂತೆ ಅವರವರ ಮನೋಧರ್ಮ ಆತ್ಮಾನುಭವ ಅಭಿರುಚಿ ಉದ್ದೇಶಗಳಿಗೆ ತಕ್ಕಂತೆ ಕಾರ್ಯಾರಂಭ ಮಾಡಬೇಕು. ಮೈಸೂರು ಪಟ್ಟಣದಲ್ಲಿರುವ ಯುವಕರು ಕೈಕೊಳ್ಳಬೇಕಾಗಿರುವ ಕಾರ್ಯದ ಸ್ವಭಾವ ರೀತಿ ನೀತಿ ವಲಯಗಳು ಶ್ರೀರಂಗಪಟ್ಟಣಕ್ಕೆ ಹೊಂದದಿರಬಹುದು; ಶ್ರೀರಂಗಪಟ್ಟಣಕ್ಕೆ ಹೊಂದುವ ಕಾರ್ಯಗಳು ಪಕ್ಕದ ಹಳ್ಳಿಗೆ ಹೊಂದದಿರಬಹುದು. ಹಳ್ಳಿಗಳಲ್ಲಿ ನೈರ್ಮಲ್ಯ ವಿದ್ಯಾಪ್ರಚಾರಗಳು ಬೇಕಾಗುವಂತೆ ಪಟ್ಟಣಗಳಲ್ಲಿ ಬಹುಶಃ ಅನೌದಾರ್ಯ ಮತಭ್ರಾಂತಗಳನ್ನು ಪರಿಹಾರ ಮಾಡುವ ಬೋಧಪ್ರದ ಕಾರ್ಯಗಳು ಬೇಕಾಗಬಹುದು. ಆದ್ದರಿಂದ ಮಿತ್ರರೇ, ನೂತನ ಭಾರತರಾಷ್ಟ್ರ ಭವನ ನಿರ್ಮಾಣ ಕಾರ್ಯದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೌರವಪೂರ್ಣವಾದ ಸ್ಥಾನವಿದೆ; ಪ್ರತಿಯೊಬ್ಬರ ಸಾಹಸಕ್ಕೂ ಅವಕಾಶವಿದೆ.

ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಿ ಮುಂದುವರಿಯಬೇಕಾಗಿದೆ.

ನಮ್ಮಲ್ಲಿ ಅನೇಕರು ಸದ್ಯಃಫಲಾಕಾಂಕ್ಷಿಗಳು. ದೀರ್ಘಕಾಲ ಸಾಧನೆ ಮಾಡುವ ತಾಳ್ಮೆಯಿಲ್ಲ, ದೃಢಚಿತ್ತವಿಲ್ಲ. ಸತ್ಕರ್ಮ ಸತ್ಫಲವನ್ನು ತಂದೇ ತರುತ್ತದೆ ಎಂಬ ಸ್ರದ್ಧೆಯಿಲ್ಲ. ಗೀತೆಯಲಿ ಶ್ರೀ ಕೃಷ್ಣನು "ಪಾರ್ಥ, ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ। ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ॥ (೬-೪೦) ಪೃಥಾನಂದನನೆ,

ಇಹದಲ್ಲಿಯಾಗಲಿ ಪರದಲ್ಲಿಯಾಗಲಿ ಅವನಿಗೆ ವಿನಾಶವಿಲ್ಲ. ಎಳ್ಳನಿತಾದರೂ ಆಗಲಿ ಒಳ್ಳೆಯದನ್ನು ಮಾಡಿದವನಿಗೆ ದುರ್ಗತಿಯಿಲ್ಲ" ಎಂದು ಆಘೋಷಿಸಿದ್ದಾನೆ. ಮಹಾಫಲಕ್ಕೆ ಹೆಚ್ಚು ಕಾಲವೂ ಹೆಚ್ಚು ಸಾಧನೆಯೂ ಬೇಕಾಗುತ್ತದೆ. ಆದ್ದರಿಂದ ಅಲ್ಪಕಾಲದಲ್ಲಿ ಫಲ ಲಭಿಸದ್ದರೆ ಹತಾಶರಾಗದೆ ಮುಂದುವರಿಯುವ ಉಕ್ಕಿನಂತಹ ಚಿತ್ತದಾರ್ಢ್ಯವನ್ನು ನಾವು ಸಂಪಾದಿಸಬೇಕು. ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು; ಕಲ್ಲಿದ್ದಲ ಕಾವಾಗಬೇಕು.

ಸದ್ಯಃಫಲಾಕಾಂಕ್ಷೆಗಿಂತಲೂ ಕೀರ್ತಿಮೋಹದಿಂದ ಹೆಚ್ಚು ಅನಾಹುತವಾಗುತ್ತದೆ! 'ಕೀರ್ತಿ ಮಹಾಪುರುಷರಲ್ಲಿರುವ ಕಟ್ಟಕಡೆಯ ದೌರ್ಬಲ್ಯ' ಎಂಬುದಾಗಿ ಒಂದು ಸುಭಾಷಿತವಿದೆ. ಮಹಾಪುರುಷರಾದವರೇ ಈ ಯಶೋಲೋಭಕ್ಕೊಳಗಾದ ಮೇಲೆ ಸಾಮಾನ್ಯರ ಗತಿಯೇನು? ಆದರೂ ಮಹಾಪುರುಷರಲ್ಲಿರುವ ದೌರ್ಬಲ್ಯವನ್ನು ಸಾಮಾನ್ಯರೂ ಪೋಷಿಸಬೇಕೆಂಬ ನಿಯಮವಿಲ್ಲ. ಮಹಾಪುರುಷರಿಗೆ ಬಂದೊದಗುವ ಕೀರ್ತಿಯ ಪ್ರಭಾವದಿಂದಲೇ ಅದರ ಲೋಭವನ್ನು ಗೆಲ್ಲಲು ಅವರಿಂದ ಸಾಧ್ಯವಾಗದಿರಬಹುದು. ನಮಗೆ ಅದರ ಅಭಾವವೇ ಅದರ ಲೋಭದಿಂದ ಪಾರಾಗಲು ಸಹಾಯವಾಗುತ್ತದೆ. ಮಂದಿಯ ಕೈಚಪ್ಪಾಳೆ, ವೃತ್ತಪತ್ರಿಕೆಗಳ ಅಗ್ಗದ ಸ್ತುತಿ, ಬಿರುದು ಬಾವಲಿಗಳ ವ್ಯಾಮೋಹ ಇವುಗಳಿಗೆ ವಶನಾಗದೆ, ತಾನು ಹಿಡಿದ ಕೆಲಸವನ್ನು ಪಟ್ಟುಹಿಡಿದು ನಿಃಶಬ್ದವಾಗಿ ಮಾಡುವಾತನೇ ನಿಜವಾದ ಕರ್ಮಯೋಗಿ. ಸ್ವಾಮಿ ವಿವೇಕಾನಂದರು ಒಂದು ಕಡೆ ಈ ಅರ್ಥದ ಮಾತುಗಳನ್ನು ಹೇಳಿದ್ದಾರೆ: ಸಾವಿರಾರು ಜನರು ಸುತ್ತಲೂ ನೆರೆದು ಕರತಾಡನ ಮಾಡುವಾಗ, ಜಯಘೋಷದಿಂದ ಹುರಿದುಂಬಿಸುವಾಗ, ಸ್ಮಾರಕ ಸ್ತೂಪಗಳೂ ಜೀವನ ಚರಿತ್ರೆಗಳೂ ತನ್ನನ್ನು ಕೊಂಡಾಡುತ್ತವೆ ಎಂದು ಗೊತ್ತಾದಾಗ, ತನ್ನ ಮರಣವೇ ತನ್ನ ಯಶೋದುಂದುಭಿಯನ್ನು ಮೊಳಗುತ್ತದೆಂದು ತಿಳಿದಾಗ, ಯಾವ ಹೇಡಿ ತಾನೇ ಮುಂದುವರಿದು ರಣ ರಂಗದಲ್ಲಿ ಮಡಿಯಾಲಾರ? ಯಾವ ಕ್ರಿಮಿ ತಾನೆ ಸಾಹಸಿಯಾಗಲಾರದು? ಆದರೆ ಕೀರ್ತಿಯ ಕಿರಣಮಾತ್ರವೂ ಪ್ರಕಾಶಿಸದಿರುವಾಗ, ಪ್ರಶಂಸೆ ಮಾಡುವವರಾಗಲಿ ಹುರಿದುಂಬಿಸುವವರಾಗಲಿ ಒಬ್ಬರೂ ಇಲ್ಲದಿರುವಾಗ, ಬಹುಕಾಲದ ಪ್ರಯತ್ನದಿಂದಲೂ ಕಾರ್ಯಸಿದ್ಧಿಯಾಗದಿರುವಾಗ ದೃಢಚಿತ್ತನಾಗಿ ಶ್ರದ್ಧಾನ್ವಿತನಾಗಿ, ಮೌನಿಯಾಗಿ, ಹಲ್ಲುಕಚ್ಚಿಕೊಂಡು, ಹಣೆಸುಕ್ಕಿಕೊಂಡು, ಬೆವರು ಸುರಿಸುತ್ತಾ, ನಸುಬಾಗಿ, ಕಟ್ಟಕಡೆಯ ಕಲ್ಯಾಣದಲ್ಲಿ ನೆಚ್ಚಿಟ್ಟುಕೊಂಡು, ಈಶ್ವರನನ್ನು ನೆನೆದು ಕರ್ಮಪರ್ವತವನ್ನೇರುವವನೇ ಮಹಾತಪಸ್ವಿ, ಅವನಿಗಿಂತಲೂ ಹೆಚ್ಚಾದ ವಿಭೂತಿಗಳಿನ್ನಿಲ್ಲ. ಅವನ ಹೆಸರು ಪತ್ರಿಕೆಗಳಿಗೆ ಗೊತ್ತಿಲ್ಲದಿರಬಹುದು; ಆದರೆ ಈಶ್ವರನ ದೃಷ್ಟಿಯಲ್ಲಿ ಅವನು ಅಗ್ರಗಣ್ಯನಾಗುತ್ತಾನೆ.

ಆದ್ದರಿಂದ ಪ್ರತಿಯೊಬ್ಬ ಯುವಕನೂ ಅಂತಿಮದ ಅನಂತ ಕಲ್ಯಾಣದಲ್ಲಿ ಶ್ರದ್ಧೆಯಿಟ್ಟು ಕಾರ್ಯರಂಗಕ್ಕಿಳಿಯಬೇಕು. ತಾನು ರಂಗಕ್ಕಿಳಿದೊಡನೆಯೆ ಜಗತ್ತು ಉದ್ಧಾರವಾಗುತ್ತದೆ ಎಂದಾಗಲಿ, ಲೋಕಲೋಚನವಲಯಕ್ಕೆ ತಾನು ಕೇಂದ್ರವಾಗುತ್ತೇನೆಂದಾಗಲಿ, ಶಾಂತಿಸ್ಥಾಪನೆಗಾಗಿ ಕೊಡುವ ನೊಬೆಲ್ ಬಹುಮಾನ ತನಗೇ ಬರುತ್ತದೆ ಎಂದಾಗಲಿ ಹೊಂಗನಸುಗಳನ್ನೂ ಆಕಾಶಗೋಪುರಗಳನ್ನೂ ಕಟ್ಟಿಕೊಳ್ಳಬಾರದು.

ಇನ್ನು ನನಗೆ ಅತ್ಯಂತ ಪ್ರಿಯತಮವಾದ ಒಂದೆರಡು ವಿಷಯಗಳನ್ನು ಕುರಿತು ಪ್ರಸ್ತಾಪಿಸಿ ಉಪನ್ಯಾಸವನ್ನು ಕೊನೆಗಾಣಿಸುತ್ತೇನೆ. ಆ ವಿಷಯಗಳು ನಿಮ್ಮೆಲ್ಲರಿಗೂ ಕೂಡ ಪ್ರಿಯವಾಗಿರುತ್ತವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.

ಯುವಕರು ಕೈಕೊಳ್ಳಬೇಕಾಗಿರುವ ಅನೇಕ ಉದ್ಯಮಗಳಲ್ಲಿ ಭಾಷೆಯ ಅಭ್ಯುದಯವೂ ಸಾಹಿತ್ಯ ನಿರ್ಮಾಣ ಮತ್ತು ಪ್ರಚಾರಗಳೂ ಗಣ್ಯವಾಗಿವೆ. ಹಿಂದಿ, ಲ್ಯಾಟಿನ್, ಗ್ರೀಕ್, ಸಂಸ್ಕೃತ, ತೆಲುಗುಗಳನ್ನಲ್ಲ ನಾನು ಹೇಳುತ್ತಿರುವುದು: ಕನ್ನಡದ ಭಾಷೆ; ಕನ್ನಡ ಸಾಹಿತ್ಯ! ನಮ್ಮ ಮಾತೃಭಾಷೆ ಮತ್ತು ಅದರ ಸಾಹಿತ್ಯ!

ಜನಜೀವನವನ್ನು ಎಚ್ಚರಿಸುವ ತೂರ್ಯಧ್ವನಿ ಸಾಹಿತ್ಯದಿಂದ ಬರುತ್ತದೆ, ಸಾಹಿತ್ಯ ಜನಜೀವನದ ಇಂದಿನ ಸ್ಥಿಯನ್ನು ವರ್ಣಿಸಿ ಮುಂದಿನ ಗತಿಯನ್ನು ನಿರ್ಣಯಿಸುತ್ತದೆ. ಕೃತವಿದ್ಯರಾದ ಯುವಕರು ತಮ್ಮ ಆಶೆ ಆಕಾಂಕ್ಷೆಗಳನ್ನು ಬರೆದು ಓದಿ, ಮತ್ತೆ ಮತ್ತೆ ಹೇಳಿ ಹೇಳಿ, ಜನರ ಹೃದಯಗಳಲ್ಲಿ ಕಿಡಿಗಳನ್ನು ಬಿತ್ತಬೇಕು. ಈಗಾಗಲೆ ನಮ್ಮನಾಡಿನ ಜೀವನ ಕೃತಿಕಾ ದೀಪೋತ್ಸವದಂತೆ ಸಾವಿರಾರು ಸೊಡರ್ಮಾಲೆಗಾಗಿ ಉರಿಯುತ್ತಿರುವ ಮನೋಹರ ಭವ್ಯ ದೃಶ್ಯ ಕಂಗೊಳಿಸುತ್ತಿದೆ. ಎಲ್ಲೆಲಿಯೂ ಕರ್ಣಾಟಕ ಸಂಘಗಳೇಳುತ್ತಿವೆ.; ಕನ್ನಡದ ಪುನರುಜ್ಜೀವನಕ್ಕಾಗಿಯೂ ಉದ್ಧಾರಕ್ಕಾಗಿಯೂ ದೀಕ್ಷೆ ತೊಟ್ಟು ಸೊಂಟಕಟ್ಟಿ ಕಂಕಣಬದ್ಧರಾಗಿರುವ ಅನೇಕ ಪ್ರತಿಭಾಸಂಪನ್ನರಾದ ಮಹನೀಯರು ಕರ್ಣಾಟಕದಲ್ಲೆಲ್ಲ ಸಂಚರಿಸಿ ಹಣತಗಳನ್ನು ಹೊತ್ತಿಸುತ್ತಿದ್ದಾರೆ: ಕೇಂದ್ರಸಂಸ್ಥೆಯಾಗಿರುವ ಸಾಹಿತ್ಯ ಪರಿಷತ್ತು ತನ್ನ ಕೈಯಲ್ಲಾದ ಮಟ್ಟಿಗೆ, ಹುರುಪಿನಿಂದ ಕಾರ್ಯಸಾಧನೆ ಮಾಡುತ್ತಿದೆ; ವಿದ್ಯಾಭ್ಯಾಸದ ಇಲಾಖೆ ಕನ್ನಡದಲ್ಲಿಯೆ ಪಾಠ ಹೇಳುವ ಏರ್ಪಾಡು ಮಾಡುತ್ತಿದೆ; ವಿಶ್ವವಿದ್ಯಾನಿಲಯ ಕನ್ನಡಗ್ರಂಥ ಪ್ರಕಟನೆಗಳಿಂದ ತನ್ನ ಭಾಗದ ತೈಲವನ್ನು ಹೊಯ್ದು ಉರಿಯನ್ನು ಪೋಷಿಸುತ್ತಿದೆ. ಇಂತಹ ಮಹಾ ಸಾಹಿತ್ಯದ ದೀಪೋತ್ಸವದಲ್ಲಿ ನಾವೆಲ್ಲರೂ ಉತ್ಸಾಹದಿಂದ ಭಾಗಿಗಳಾಗದಿದ್ದರೆ ಅದು ನಮ್ಮದೆಯ ಕಗ್ಗವಿಯ ಗಾಢಾಂಧಕಾರವನ್ನು ಮಾತ್ರ ಸೂಚಿಸುತ್ತದೆ. ಇಲ್ಲಿ ನೆರೆದಿರುವವರಲ್ಲಿ ಯಾರ ಹೃದಯದಲ್ಲಿಯೂ ಅಂತಹ ಕಗ್ಗತ್ತಲಿಲ್ಲವೆಂದು ನಾನು ದೃಢವಾಗಿ ನಂಬುತ್ತೇನೆ.

ಮಹನೀಯರೇ, ಮತ್ತೊಮ್ಮೆ ಹೇಳುತ್ತೇನೆ. ಮೇಲೆ ಹೇಳಿದಂತೆ ಜೀವನದಲ್ಲಿ ಮುಂಬರಿಯಬೇಕಾದ ನಮ್ಮ ಹೃದಯದಲ್ಲಿ ಒಂದು ಶಕ್ತಿಯ ನಿಧಿಯನ್ನು ಶೇಖರಿಸಬೇಕು; ನಮ್ಮ ಆತ್ಮ ಓಜಸ್ವಿಯಾಗಬೇಕು; ನಾವೆಲ್ಲರೂ 'ನಿರಂಕುಶಮತಿ' ಗಳಾಗಿ 'ದರ್ಶನ' ದ್ರಷ್ಟಾರರಾಗಬೇಕು. ಧ್ಯಾನಮಯ ನಿರ್ಮಲ ಜೀವನದಿಂದ ಅಂತಹ ಓಜಸ್ಸು ಲಭಿಸುತ್ತದೆ. ಪುಣ್ಯ ಜೀವನವೆ ಪಾವನ ತಪಸ್ಸು.

ನಮ್ಮೆಲ್ಲರ ದಿವ್ಯ 'ದರ್ಶನಕ್ಕೆ' ಈ ಮಹಾಮಂತ್ರಗಳು ಅಡಿಗಲ್ಲುಗಳಾಗಿರಲಿ:

"ಏಕಂ ಸತ್ ವಿಪ್ರಾ ಬಹುಧಾ ವದಂತಿ".

ಇರುವುದೊಂದೇ ಸತ್ಯ; ತಿಳಿದವರು ಬೇರೆ ಬೇರೆ ರೀತಿಯಿಂದ ಹೇಳುತ್ತಾರೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ |
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಂ ||

ಚರಾಚರ ಜಗತ್ತೆಲ್ಲವನ್ನೂ ಈಶ್ವರನಿಂದ ಆವರಿಸು. ತ್ಯಾಗದಿಂದ ಅದನ್ನು ಅಸ್ವಾದಿಸು. ಇತರರ ಸಿರಿಗೆ ಅಳುಪದಿರು.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯರೇ ನರೇ॥

ಒಂದು ಶತಮಾನ ಬಾಳಬೇಕೆಂದು ಇಚ್ಛಿಸುವಾತನು ಕರ್ಮ ಮಾಡುತ್ತಲೇ ಬಾಳಬೇಕು. ಹಾಗೆ (ಜಗತ್ತೆಲ್ಲವನ್ನೂ ಈಶ್ವರನಿಂದ ಆವರಿಸಿ) ಬಾಳಿದರೆ ಕರ್ಮಲೇಪನವಿಲ್ಲ.

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ।
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ।
ವ್ಯಶೇಮ ದೇವಹಿತಂ ಯದಾಯುಃ॥

ಶುಭವಾದುದನ್ನೆ ನಮ್ಮ ಕಿವಿಯಾಲಿಸಲಿ. ಪೂಜಾರ್ಹವಾಗಿ ಮಂಗಳವಾದುದನ್ನೆ ನಮ್ಮ ಕಣ್ಣು ನೋಡಲಿ. ದೃಢದೇಹದಿಂದಲೂ ಆನಂದದಿದಲೂ ಜೀವಮಾನ ದೇವಹಿತವಾಗಿ ಸಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

## ಮಲೆನಾಡಿನ ಯುವಕರಲ್ಲಿ

ಯುವಕರಲ್ಲಿಯೂ ಮಹನೀಯರಲ್ಲಿಯೂ ವಿಜ್ಞಾಪನೆ,

ನಾನಿಂದು ಈ ಗೌರವ ಸ್ಥಾನದಲ್ಲಿ ನಿಂತಿರುವುದ ತಮ್ಮೆಲ್ಲರ ವಿಶ್ವಾಸದಿಂದಲೆ ಹೊರತು ನನ್ನ ಅರ್ಹತೆಯಿಂದಲ್ಲ. ಏಕೆಂದರೆ, ನನ್ನ ಜೀವನದಲ್ಲಿ ನಾನು ಕೈಕೊಂಡಿರುವ ವೃತ್ತಿಯ ವಲಯ ಅಷ್ಟೇನೂ ಹೆಚ್ಚು ವಿಸ್ತಾರವಾದುದಲ್ಲ; ಅದರಲ್ಲಿ ಲಭಿಸುವ ಅನುಭವಗಳೂ ಹೇಳಿಕೊಳ್ಳುವಷ್ಟು ಬಹುಮುಖವಾಗಿಲ್ಲ. ಸಾಹಿತ್ಯದ ವಿಚಾರವಾಗಿದ್ದರೆ, ಕವಿಗಳ ಮತ್ತು ಅವರ ಗ್ರಂಥಗಳ ವಿಚರವಾಗಿದ್ದರೆ, ಹೇಳಿಕೇಳಿದ ಎರಡು ಸಂಗತಿಗಳನ್ನು ಕುರುಡು ಕುರುಡಾಗಿ ಹೇಳಿ, ನಿಮ್ಮೆಲ್ಲರ ಪ್ರೀತಿ ದಾನಮಾಡುವ ಪ್ರಶಂಸೆಯಿಂದ ಸಮಾಧಾನ ಪಡೆಯಬಹುದಾಗಿತ್ತು. ಆದರೆ ನಾನಿಂದು ಶ್ರಮಜೀವಿಗಳೂ ನೇಗಿಲ ಯೋಗಿಗಳೂ ಆಗಿ, ಸಂಸಾರದ ನೂರು ಕೋಟಲೆಗಳನ್ನು ಸಹಿಸಿಕೊಂಡು, ಜೀವನಪರ್ವತವನ್ನು ಏದುತ್ತ ಏರುವ ಕಷ್ಟ ಜೀವಿಗಳಾಗಿರುವ ನಿಮ್ಮಗಳ ಮುಂದೆ ನಿಂತು ಉಪನ್ಯಾಸ ಮಾಡುವ ಸಾಹಸಕ್ಕೆ ಕೈಹಾಕಿದ್ದೇನೆ. ಇದು ಜೀವನದ ನಾನಾ ಮಾರ್ಗಗಳಲ್ಲಿ ನಡೆದು ಕಷ್ಟಸುಖಗಳನ್ನು ಅನುಭವಿಸಿ ಪರಿಪಕ್ವವಾಗಿರುವ ಅನುಭವಶಾಲಿಗಳಿಂದಲೆ ಹೊರತು ನನ್ನಂತಹ ಕೇವಲ ಬಿಸಿರಕ್ತದ ಭಾವಜೀವಿಯಾದ ಯುವಕನಿಂದ ಸಾಧ್ಯವಲ್ಲ. ಆದರೆ “ಯುವಕರ ಸಂಘ” ಎಂಬ ಹೆಸರನ್ನೂ, ನಿಮ್ಮೆಲ್ಲರ ವಿಶ್ವಾಸವನ್ನೂ ಆಶ್ರಯಿಸಿ, ನನಗೆ ಸೂಕ್ತವೆಮದು ತೋರಿಬರುವ ನಾಲ್ಕು ಮಾತುಗಳನ್ನು

ಹೇಳಿಬಿಡುತ್ತೇನೆ. ಅವುಗಳೆಲ್ಲವೂ ಸೂಚನೆಗಳೆ ಹೊರತು ಅಪ್ಪಣೆಗಳೂ ಅಲ್ಲ, ಉಪದೇಶಗಳೂ ಅಲ್ಲ. ಚೆನ್ನಾಗಿ ವಿಮರ್ಶೆ ಮಾಡಿ ನಿಮಗೆ ತೋರಿದಂತೆ ಆಚರಿಸಬೇಕೆಂದು ಪ್ರಾರ್ಥನೆ.

ಮಲೆನಾಡೆಂದರೆ ಕರ್ಣಾಟಕದ ಕಾಶ್ಮೀರ; ಪ್ರಕೃತಿಯ ಪರ್ಣಶಾಲೆ; ಅರಣ್ಯರಮಣಿಯ ವಿಲಾಸಕ್ಷೇತ್ರ. ದಿಗಂತದ ಮಹಾಸ್ವಪ್ನಗಳಂತೆ ಧೀರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು; ಆ ಪರ್ವತಗಳನ್ನು ಸರ್ವದಾ ಆಲಿಂಗಿಸಿರುವ ಚಿರಶ್ಯಾಮಲ ಕಾನನರಾಜಿ; ನಿಬಿಡ ನಿರಂತರ ತರುಚ್ಛಾಯಮಯವಾದ ಗಿರಿ ಶಿಖರಗಳಲ್ಲಿ ಆವಿರ್ಭವಿಸಿ ಅರೆಬಂಡೆಗಳ ವಕ್ರಪಥಗಳಲ್ಲಿ ಎಡೆಬಿಡದೆ ಪ್ರವಹಿಸುವ ಹೊಳೆತೊರೆಗಳು; ಗಿರಿಕಂದರಗಳಲ್ಲಿ ಕಂಗೊಳಿಸುವ ಅಡಕೆ ತೋಟಗಳು, ಬತ್ತದ ಗದ್ದೆಗಳು; ಗಿಳಿ, ಕಾಮಳ್ಳಿ, ಕಾಜಾಣ, ಪಿಕಳಾರ, ತೇನೆ, ಚೋರೆ, ಕೋಗಿಲೆ ಮೊದಲಾದ ಅಸಂಖ್ಯ ಜಾತಿಯ ಪಕ್ಷಿಗಳ ಕಲಗಾನ; ವಿಧವಿಧ ಜಾತಿಯ ಕಾಡಿನ ಮತ್ತು ನಾಡಿನ ಜಂತುಗಳು; ಪ್ರೇಮಲ ಸ್ವಭಾವದವರೂ ಶಾಂತಜೀವಿಗಳೂ ಉದಾರಿಗಳೂ ಆಗಿರುವ ಸರಳ ಹೃದಯದ ಒಕ್ಕಲು ಮಕ್ಕಳು; ಇವೆಲ್ಲದರ ಸಾನ್ನಿಧ್ಯದಿಂದ ಮಲೆನಾಡು ಅತ್ಯಂತ ರಮಣೀಯವೂ ಕಮನೀಯವೂ ಆಗಿದೆ.

ಹೀಗೆ ಕಾವ್ಯವಾಣಿಯಿಂದ ಮಲೆನಾಡನ್ನು ವರ್ಣಿಸಿ ವರ್ಣಿಸಿ ನಾನು ಮನಬಂದಂತೆ ಬಣ್ಣದ ಕನಸುಗಳನ್ನು ಕಟ್ಟುತ್ತಾ ಹೋಗಬಹುದು. ಆದರೆ ಇಂದು ನಾನು ಹೇಳಬೇಕೆಂದಿರುವ ವಿಷಯ ಬೇರೆಯದು. ಮಲೆನಾಡಿನ ಸೌಂದರ್ಯದ, ಮಾಧುರ್ಯದ, ಔದಾರ್ಯದ ವರ್ಣನೆಯನ್ನು ನಾವಾಗಲೆ ಕವನಗಳಲ್ಲಿ ಮಾಡಿದ್ದೇನೆ; ಮುಂದಯೂ ಮಾಡುವವನಿದ್ದೇನೆ. ಪ್ರಕೃತದಲ್ಲಿ ಜೀವನದ ಶುಕ್ಲಪಕ್ಷವೊಂದನ್ನೇ ನೊಡುತ್ತ ಹಾಡುತ್ತ ಹೊದರೆ ಸಾಲದು ಎಂದು ಭಾವಿಸಿ, ಅದರ ಕೃಷ್ಣಪಕ್ಷವನ್ನೂ ಗಮನಕ್ಕೆ ತಂದುಕೊಂಡು, ಅದರಿಂದುಂಟಾಗುವ ಪಾಪ ದುಃಖಗಳನ್ನು ಆದಷ್ಟು ಮಟ್ಟಿಗಾದರೂ ಕಡಿಮೆ ಮಾಡಲು ಯತ್ನಶೀಲರಾಗುವುದು ನಮ್ಮ ಕರ್ತವ್ಯ.

ಮಲೆನಾಡು ಮನೋಹರವಾಗಿದೆ: ಆದರೆ ಮಲೇರಿಯ ಪ್ರಾಣಹಾರಿಯಾಗಿದೆ! ಮಲೆನಾಡಿನಲ್ಲಿ ಮನುಷ್ಯರ ಹೊರತು ಉಳಿದುವೆಲ್ಲವೂ ಮಹತ್ತು ಬೃಹತ್ತುಗಳ ಪ್ರತಿನಿಧಿಗಳೆಂದು ನನಗೆ ಅನೇಕ ಸಾರಿ ತೋರಿಬಂದಿದೆ. ಹಾಗೆ ತೋರಿ ಬಂದಾಗಲೆಲ್ಲಾ ನಾನು ಮರುಗಿದ್ದೇನೆ. ನಾವು ಆರೋಗ್ಯಕ್ಕೆ ಹೆಚ್ಚು ಗಮನ ಕೊಡುತ್ತಿಲ್ಲ. ಆರೋಗ್ಯಭಾಗ್ಯ ನಮಗೆ ಬೇಡವಾಗಿದೆ ಎಂದು ನನ್ನ ಆಭಿಪ್ರಾಯವಲ್ಲ. ಎರಡನೆಯ ಸ್ವರ್ಗ ಎಂದೆನ್ನಬಹುದಾದ ಆರೋಗ್ಯ ಯಾರಿಗೆ ತಾನೆ ಬೇಡ! ಆದರೆ ಮೂರ್ಖತೆಯೂ ಅಜ್ಞಾನವೂ ಹಲಕೆಲವು ಗೊಡ್ಡು ಆಚಾರ ಮತ್ತು ಕುರುಡುನಂಬುಗೆಗಳೂ ನಮಗೂ ನಮ್ಮ ಆರೋಗ್ಯಕ್ಕೂ ಅಡ್ಡಬಂದುಬಿಟ್ಟಿವೆ. ಧರ್ಮ, ದೇವರು ಮತ್ತು ದೆವ್ವದ ಪೂಜೆ ಇವುಗಲ ಹೆಸರಿನಲ್ಲಿ ನಾವು ಅನಾಹುತಗಳನ್ನು ಮಾಡುತ್ತಿದ್ದೇವೆ. ಇವೆಲ್ಲದರ ಕೂಲಂಕಷವಾದ ವಿಮರ್ಶೆಯನ್ನು ಅನಂತರ ಮಾಡುವವನಿದ್ದೇನೆ. ಇಲ್ಲಿ ಸಂಕ್ಷೇಪವಾಗಿ ಒಂದೆರಡು ವಿಷಯಗಳನ್ನು ತಿಳಿಸಿ ಮುಂದುವರೆಯುತ್ತೇನೆ. ನಾನು ಹೇಳಲಿರುವ ವಿಷಯಗಳು ನಿಮಗೇನೂ ಹೊಸದಲ್ಲ. ಸ್ವಲ್ಪ ಆಲೋಚನೆಮಾಡಿದರೆ ಅವುಗಳನ್ನೆಲ್ಲ ನನಗಿಂತಲೂ ನೀವೇ ವಿಶದವಾಗಿ ತಿಳಿಸಿಬಿಡಲು ಸಮರ್ಥರಾಗಿದ್ದೀರಿ. ಏಕೆಂದರೆ ನಿಮ್ಮ ಅನುಭವದಲ್ಲಿ ಸಾವಿರಾರು ಉದಾಹರಣೆಗಳು ಸಿಕ್ಕುತ್ತವೆ. ರೋಗ ಬಂದರೆ ಅದನ್ನು ಪರಿಹರಿಸಿಕೊಳ್ಳಲು ಔಷಧಿ ತೆಗೆದುಕೊಳ್ಳುವುದು ವೈಜ್ಞಾನಿಕ ವಿಧಾನ. ಅದನ್ನು ಬಿಟ್ಟು ನಾವು ಭೂತಗಳಿಗೂ ಪಿಶಾಚಿಗಳಿಗೂ ಮೊರೆಯಿಡಲು ಹೊಗುತ್ತೇವೆ. ಕೋಳಿ ಕುರಿಗಳನ್ನು ಬಲಿ ಕೊಟ್ಟು ಲಂಚದಿಂದ ಅವುಗಳ ಮನಸ್ಸನ್ನು

ಶಮನಮಾಡಲು ಪ್ರಯತ್ನಿಸುತ್ತೇವೆ. ಭೌತಿಕ ಕಾರಣಗಳಿಂದ ಬಂದ ರೋಗ ದೈವಿಕ ಉಪಾಯಗಳಿಂದ ಇಳಿಮುಖವಾಗದೆ ಮತ್ತೂ ಹೆಚ್ಚಾದರೆ ಭಟ್ಟರು ಜೋಯಿಸರು ಇವರಲ್ಲಿಗೆ ಹೋಗಿ ನಿಮಿತ್ತ ಕೇಳಿಸುತ್ತೇವೆ. ಅವರು ಕೊಟ್ಟ ಚೀಟಿ ವಿಭೂತಿ ಮುಂತಾದವುಗಳನ್ನು ತಂದು ರೋಗಿಗೆ ಕಟ್ಟಿದ ಮೇಲೆ ರೋಗ ವಿಷಮಾವಸ್ಥೆಗೇರಿದರೆ ಆಗ ಆಸ್ಪತ್ರೆಗೆ ಹೋಗಿ ರೋಗಿಗೆ ಮುಂದೆ ಒದಗುವ ಅಪಾಯವನ್ನು ಡಾಕ್ಟರುಗಳ ಮೇಲೆ ಹೊರಿಸಿ, ಔಷಧಗಳಿಂದ ಏನೂ ಪ್ರಯೋಜನ ವಿಲ್ಲವೆಂದು ಸಾರುತ್ತೇವೆ. ಇದರಿಂದ ಧನ ಪ್ರಾಣ ಎರಡೂ ನಷ್ಟ. ಮಹನೀಯರೇ, ಇದನ್ನು ಚೆನ್ನಾಗಿ ವಿಚಾರಿಸಿ ನೋಡಿದರೆ, ನಾನು ಇಲ್ಲಿ ಸೂಚಿಸುವುದಕ್ಕಿಂತಲೂ ವಿಷಯ ಸಾವಿರ ಪಾಲು ಭಯಾನಕವಾಗಿರುತ್ತದೆಂದು ನಿಮಗೆ ಮನದಟ್ಟಾಗದೆ ಇರಲಾರದು. ಈ ಮೌಢ್ಯ ಪಿಶಾಚಿಗೆ ಎಷ್ಟು ಮಂದಿ ಸಹೋದರಿಯರನ್ನು ಬಲಿಕೊಡುತ್ತಿದ್ದೇವೆ ಎಂಬುದನ್ನು ಯೋಚಿಸಿದರೆ ಮೈ ನಡುಗದಿರುವುದಿಲ್ಲ!

ಆರೋಗ್ಯವುಳ್ಳವನು ಸದಾ ಸುಖಿ. ಅವನಿಗೆ ಬಾಳಿನಲ್ಲಿ ಬೇಸರವಿಲ್ಲ. ಎಷ್ಟು ಧನವಿದ್ದರೇನು? ಎಷ್ಟು ಗದ್ದೆ ತೋಡಗಳಿದ್ದರೇನು? ಆರೋಗ್ಯವಿಲ್ಲದಿದ್ದರೆ ಅವೆಲ್ಲವೂ ನೀರಿನಲ್ಲಿ ಮಾಡಿದ ಹೋಮ. ನಾವು ಆರೋಗ್ಯವಾಗಿದ್ದಾಗ ಕೃಪಣತೆಯಿಂದ ಸ್ವಲ್ಪ ವೆಚ್ಚಮಾಡಲು ಹಿಂಜರಿದರೆ, ಪುಷ್ಟಿಕರವೂ ಆರೋಗ್ಯಕಾರಿಯೂ ಆದ ಪದಾರ್ಥ ಗಳನ್ನುಳಿದು ಅಶುಚಿ ಜೀವನವನ್ನು ಬಾಳಿದರೆ, ರೋಗಬಂದಾಗ ನೂರಾರು ರೂಪಾಯಿಗಳನ್ನು ಖರ್ಚುಮಾಡಿದರೂ ಸಫಲವಾಗದೆ ಇರಬಹುದು. ಅಂತಹ ಘಟನೆಗಳನ್ನು ನಾನೆ ಕಣ್ಣಾರ ಕಂಡಿದ್ದೇನೆ. ನೀವೂ ಕಂಡಿರಲೇಬೇಕು. ಈ ದೇಹ ದೇವರ ಗುಡಿ. ಅದನ್ನು ಶುಚಿಯಾಗಿಡುವುದು ಪ್ರತಿಯೊಬ್ಬ ಮಾನವನ ಕರ್ತವ್ಯ. ಕೊಳಕಾದ ಗುಡಿಯಲ್ಲಿ ಈಶ್ವರನು ಪ್ರಕಾಶವಾಗನು; ದೆವ್ವ ದೇವರುಗಳಿಗೆ ಕಟ್ಟುವ ಕಾಣಿಕೆಯ ಹಣವನ್ನು ಎಣ್ಣೆ, ಸೀಗೆ, ಸಾಬೂನುಗಳಿಗೆ ಉಪಯೋಗಿಸಿದರೆ ಆತನು ನಮ್ಮನ್ನು ಇನ್ನೂ ಹೆಚ್ಚಾಗಿ ಒಲಿಯುತ್ತಾನೆ; ಏಕೆಂದರೆ, ಆತನಿಗೆ ಬೇಕಾದುದು ನಮ್ಮ ಹೃದಯದ ಸರಳ ಭಕ್ತಿ; ನಮ್ಮ ಕಬ್ಬಿಣದ ಪಿಠಾರಿಯ ದುಡ್ಡಲ್ಲ.

ಆರೋಗ್ಯಕ್ಕೆ ಹಾನಿತರುವ ಇನ್ನೆರಡು ವಿಷಯಗಳು ನಮ್ಮಲ್ಲಿವೆ. ಒಂದನೆಯದು ಮದ್ಯಪಾನ; ಎರಡನೆಯದು ಬಾಲ್ಯವಿವಾಹ. ಮದ್ಯಪಾನದಿಂದ ಮನುಷ್ಯನಿಗೆ ತಾತ್ಕಾಲಿಕ ಉತ್ಸಾಹ ಉಲ್ಲಾಸಗಳು ತೋರಿಬಂದರೂ ಪರಿಣಾಮದಲ್ಲಿ ಅದು ಅನರ್ಥಕಾರಿ. ದೇಹವನ್ನು ನಿರ್ವೀರ್ಯವನ್ನಾಗಿಯೂ ಮನಸ್ಸನ್ನು ನಿಸ್ತೇಜವನ್ನಾಗಿಯೂ ಮಾಡಿ ಆತ್ಮನಾಶಗೈಯುತ್ತದೆ. ಮದ್ಯಪಾನದಿಂದಾಗುತ್ತಿರುವ ಮಹಾ ಕಷ್ಟನಷ್ಟಗಳು ಪರಂಪರೆಗಳನ್ನು ಅರಿತು, ಮಹಾತ್ಮಾ ಗಾಂಧಿಯವರೇ ಮೊದಲಾದ ಮಹನೀಯರು ಅದನ್ನು ತೊಲಗಿಸಲು ಸರ್ವಪ್ರಯತ್ನ ಮಾಡುತ್ತಿದ್ದಾರೆ. ಸೆಕೆದೇಶದವರ ಮಾತಂತಿರಲಿ; ಚಳಿದೇಶದವರೂ ಕೂಡ ಮದ್ಯಪಾನದ ಪಿಶಾಚಿಯಿಂದ ಪಾರಾಗಲು ಹಾತೊರೆಯುತ್ತಿದ್ದಾರೆ. ಮದ್ಯಪಾನದಿಂದ ಮಾನ, ಪ್ರಾಣ, ಧನ ಎಲ್ಲವೂ ನಷ್ಟ. ಮದ್ಯಪಾಯಿಯ ಮನದಲ್ಲಿಯೂ ಶಾಂತಿಯಿರುವುದಿಲ್ಲ. ಆತನು ದಿನದಿನವೂ ಅಧೋಗತಿಗಿಳಿಯುತ್ತಾನೆ. ಆತನಿಗೆ ಸಂಭವಿಸುವ ಮಕ್ಕಳು ಕೂಡ ಮಂದ ಅಥವಾ ವಕ್ರಬುದ್ಧಿಗಳಾಗಿಯೂ ಅಬಲರಾಗಿಯೂ ಇರುತ್ತಾರೆ. ಆದ್ದರಿಂದ ಮದ್ಯಪಾಯಿಯ ಪಾಪ ಅವನೊಂದಿಗೇ ನಶಿಸುವುದಿಲ್ಲ; ಅದು ಆತನ ಸಂತಾನಕ್ಕೂ, ಅಲ್ಲಿಂದ ಸಮಾಜಕ್ಕೂ ಹಬ್ಬಿ ಕೇಡು ಮಾಡುತ್ತದೆ. ಆದ್ದರಿಂದ ತಮ್ಮ ಮತ್ತು ತಮ್ಮ ಜನಾಂಗದ ಶ್ರೇಯಸ್ಸನ್ನು ಬಯಸುವರೆಲ್ಲರೂ ಮದ್ಯಪಾನವೆಂಬ ಪಿಶಾಚಿಯನ್ನು ಸರ್ವಪ್ರಕಾರದಿಂದಲೂ ಸಂಹರಿಸುವುದಕ್ಕೆ ಪ್ರಯತ್ನಿಸಬೇಕು.

ಇನ್ನು ಬಾಲ್ಯ ವಿವಾಹ. ಇದರ ವಿಚಾರವಾಗಿ ಎಷ್ಟು ಹೇಳಿದರೂ ಸ್ವಲ್ಪವೇ ಸರಿ. ಇದರಿಂದ ನಮ್ಮ ಭಾರತವರ್ಷವೇ ದುರ್ಬಲವಾಗಿದೆ; ಇನ್ನೂ ಆಗುತ್ತಿದೆ. ಅಸಂಖ್ಯ ಬಾಲಬಾಲಿಕೆಯರು ಈ ಭೂತಕ್ಕೆ ವರ್ಷ ವರ್ಷವೂ ಬಲಿಯಾಗುತ್ತಿದ್ದಾರೆ. ಆಶಾಪೂರ್ಣವಾಗುರುವ ಜೀವಕುಸುಮಗಳು ಜೀವನ ಪ್ರಾರಂಭದಲ್ಲಿಯೇ ಬಾಲ್ಯವಿವಾಹ ಎಂಬ ವಿಷಕೀಟ ಗ್ರಸ್ತರಾಗಿ ಬಾಡಿ ಬಿದ್ದು ಹೋಗುವುದನ್ನು ಕಂಡರೆ ಯಾವನು ತಾನೆ ಮರುಗುವುದಿಲ್ಲ? ನನ್ನೊಡನೆ ಹುಟ್ಟಿ ಬೆಳೆದವರು, ನನ್ನ ತರುವಾಯ ಹುಟ್ಟಿ ಬಂದ ಕಿರಿಯರು, ಆಶಾಪೂರ್ಣ ಜೀವಿಗಳು ಬಾಲ್ಯ ವಿವಾಹಕ್ಕೆ ತುತ್ತಾಗಿ ಹತಚೇತಸರಾಗಿಯೋ ಅಥವಾ ಗತಪ್ರಾಣರಾಗಿಯೋ ಆಗಿರುವುದನ್ನು ನಾನು ನೋಡಿ ನೆನೆದು ಎದೆ ನೋಯುತ್ತಿದ್ದೇನೆ. ಕಣ್ಣಿನ ಕಾಂತಿ, ಮನಸ್ಸಿನ ಶಾಂತಿ, ಮುಖದ ತೇಜಸ್ಸು, ಓಜಸ್ಸು, ದೇಹದ ಉಲ್ಲಾಸ, ಹೃದಯದ ಉತ್ಸಾಹ ಎಲ್ಲವನ್ನೂ ಕಾಳೆದುಕೊಂಡು ಜೀವಶವಗಳಂತೆ ಇರುವವರಿಂದ ನಾಡಿಗಾದರೂ ಜನರಿಗಾದರೂ ಏನು ಉಪಯೋಗವಾದೀತು? ಆದ್ದರಿಂದ ಪ್ರಾಪ್ತ ವಯಸ್ಕರಾದ ಮೇಲೆಯೇ ಮಕ್ಕಳಿಗೆ ವಿವಾಹ ಮಾಡುತ್ತೇವೆ ಎಂಬುದು ನಿಮ್ಮೆಲ್ಲರ ಪ್ರತಿಜ್ಞೆಯಾದರೆ ಮಲೆನಾಡಿನ ಜೀವನ ಇನ್ನೂ ಹೆಚ್ಚು ಚೈತನ್ಯಮಯವಾಗುವುದರಲ್ಲಿ ಸಂದೇಹವಿಲ್ಲ.

ಮಲೆನಾಡಿನಲ್ಲಿ ಮಳೆಯಿಂದೆ, ಬೆಳೆಯಿದೆ. ಆದರೆ ಅನೇಕ ಮನೆತನಗಳ ಜೀವನ ನೆಮ್ಮದಿಯಾಗಿಲ್ಲ. ಯೋಗ್ಯ ವಸ್ತುಗಳಿಗಾಗಿ ಧನವ್ಯಯಮಾಡಲು ಹಿಂಜರಿದು, ಅಯೋಗ್ಯವೂ ಅಪ್ರಯೋಜಕವೂ ಆದವುಗಳಿಗಾಗಿ ಬಹಳ ವೆಚ್ಚ ಮಾಡುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಕೋರ್ಟು ವ್ಯವಹಾರ, ವಿವಾಹ, ಭೂತಾರಾಧನೆ ಮೊದಲಾದ ಕರಾಳ ಪೂಜಾ ಪದ್ಧತಿಗಳು — ಇವು ಮೂವರನ್ನು ಹೆಚ್ಚಾಗಿ ಗಮನಿಸಬೇಕು. ನಮ್ಮ ಸಂಪಾದನೆಯಲ್ಲಿ ಎಷ್ಟು ಭಾಗ ಕೋರ್ಟು ವ್ಯವಹಾರಕ್ಕಾಗಿ ಖರ್ಚು ಆಗುತ್ತಿದೆ? ನಮ್ಮ ಸಾಲದಲ್ಲಿ ಎಷ್ಟು ಭಾಗ ಕೋರ್ಟು ವ್ಯವಹಾರಕ್ಕಾಗಿಯೇ ಆಗಿದೆ? ಚೆನ್ನಾಗಿ ವಿಚಾರಿಸಿ ನೋಡಿ. ನ್ಯಾಯಪಡೆಯುವುದಕ್ಕಾಗಿ ಎಷ್ಟು ಖರ್ಚಾಗುತ್ತಿದೆ? ಅನ್ಯಾಯ ಸಾಧನೆಗಾಗಿ ಎಷ್ಟು ಖರ್ಚಾಗುತ್ತಿದೆ? ಮಾತ್ಸರ್ಯಕ್ಕಾಗಿಯೋ, ಛಲಕ್ಕಾಗಿಯೋ ಪ್ರತಿಹಿಂಸೆಯ ಸಲುವಾಗಿಯೋ ಜನರು "ಕೋರ್ಟುಮನೆ ಹತ್ತಿ" ತಮ್ಮ ಮನೆ ಹಾಳಾದುದನ್ನು ಲೆಕ್ಕಿಸದೆ ದಿಗ್ವಿಜಯಲೋಲುಪರಾಗಿರುವುದನ್ನು ನೀವೆಲ್ಲರೂ ನೋಡಿರಬಹುದು. ನಮ್ಮಲ್ಲಿ ಸದ್ಬುದ್ಧಿ, ಸ್ನೇಹ, ಔದಾರ್ಯಗಳು ಹೆಚ್ಚಾಗುವಂತೆ ಮಾಡಿಕೊಂಡಿರೆ ಈ ದುಂದುವೆಚ್ಚವನ್ನು ನಿಲ್ಲಿಸಿಬಿಟ್ಟು ಮನಃಕಷಾಯಗಳಿಂದಲೂ ವಿಮುಖರಾಗಿ ಧನ್ಯರಾಗಬಹುದೆಂಬುದು ನನ್ನ ದೃಢವಾದ ನಂಬುಗೆ. ದೇವರ ದಯೆಯಿಂದ ನಮ್ಮ ಸಂಘ ಒಂದಲ್ಲ ಒಂದು ದಿನ ನ್ಯಾಯಾಧೀಶರೂ ವಕೀಲರೂ ಮಾಡುವ ಕಲಸವನ್ನು ವೆಚ್ಚವಿಲ್ಲದೆ ಮಾಡಿ, ನಮ್ಮ ನಮ್ಮಲ್ಲಿ ತಲೆದೋರುವ ಭಿನ್ನಾಭಿಪ್ರಾಯಗಳಿಗೆ ಸ್ನೇಹಪೂರ್ವಕವಾಗಿ ತೀರ್ಪು ಕೊಡಲು ಸಮರ್ಥವಾಗಲಿ ಎಂಬುದು ನನ್ನ ಹಾರೈಕೆ.

ಹುಟ್ಟುವುದು ಸಾಯುವುದರಂತೆಯೆ ವಿವಾಹವೂ ಜೀವನದ ಮಹಾ ಘಟನೆಗಳಲ್ಲಿ ಒಂದಾಗಿದೆ. ಪ್ರೇಮಸೂತ್ರದಲ್ಲಿ ಬಂಧಿತರಾದ ತರುಣ ತರುಣಿಯರಲ್ಲಿ ಜೀವನದೃಷ್ಟಿಯೆ ಬದಲಾಯಿಸುತ್ತದೆ. ಆ ಬದಲಾವಣೆ ದುಷ್ಟವಾಗಬಹುದು, ಶಿಷ್ಟವಾಗಬಹುದು. ಉದಾರಿಗಳಾಗಿಯೂ ಅಕೃಪಣರಾಗಿಯೂ ಅನುಕಂಪ ಶೀಲರಾಗಿಯೂ ಇರುವವರು ತಮ್ಮಲ್ಲಿರುವ ತಾರುಣ್ಯ ಸಹಜವಾದ ದಿವ್ಯ ಗುಣಗಳನ್ನು ಕಳೆದುಕೊಂಡು ಅನುದಾರವೂ ಕೃಪಣವೂ ಕ್ರೂರವೂ ಆದ ಭಾವಗಾಳಿಗೆ ತಮ್ಮೆದೆಯಲ್ಲಿ ಎಡೆಗೊಟ್ಟು ಸಂಕುಚಿತ ಜೀವಿಗಳಾಗಬಹುದು ಅಥವಾ ಮೊದಲಿದ್ದ ಗುಣಗಳೇ ವಿಕಾಸಹೊಂದಿ ಸಮಾಜಕಲ್ಯಾಣ ಸಾಧಕಗಳಾಗಬಹುದು. ಇಲ್ಲಿ ವಿವಾಹದ ಗುಣಾವಗುಣಗಳನ್ನು ವರ್ಣಿಸುವುದಲ್ಲ ನನ್ನ ಉದ್ದೇಶ;

ವಿವಾಹವು ಜೀವನದಲ್ಲಿ ಒದಗುವ ಒಂದು ಮುಖ್ಯ ಸಂಧಿಯ ಕಾಲವೇಂದು ತಿಳಿಸುವುದೇ ನನ್ನ ಆಶಯ. ಆದ್ದರಿಂದಲೆ ಅಂದೊಂದು ಸಂಭ್ರಮದ ಸಮಯಾವಾಗಿದೆ. ಅಂತಹ ಸಮಯಗಳಲ್ಲಿ ಎಂದಿಗಿಂತಲೂ ಸ್ವಲ್ಪ ಹೆಚ್ಚಾಗಿ ಮೆರೆದರೆ, ಹಣ ವೆಚ್ಚಮಾಡಿದರೆ ಅದನ್ನೊಂದು ಮಹಾಪಾಪವೆಂದು ಯಾರೂ ಪರಿಗಣಿಸುವುದಿಲ್ಲ. ಆದರೆ ಸಂಭ್ರಮ ಭ್ರಮವಾಗಬಹುದು; ಪ್ರಮಾದಕ್ಕೆ ಈಡಾಗಬಾರದು, ಮದುವೆಮಾಡಿಕೊಳ್ಳವವರು ಮುಂದೆ ತಮಗೆ ಸುಖವಾಗುತ್ತದೆ ಎಂದೇ ಹಾಗೆ ಮಾಡುವರು. ಬರಿಯ ದುಃಖವಾಗುತ್ತದೆ ಎಂದು ತಿಳಿದಿದ್ದರೆ ಯಾರೂ ಅಂತಹ ಅವಿವೇಕಕ್ಕೆ ಕೈ ಹಾಕುತ್ತಿರಲಿಲ್ಲ. ಆದರೆ ವಿವಾಹಕಾಲದಲ್ಲಿ ಅತಿವ್ಯಯಮಾಡಿ ಸಂಸಾರ ಸರೋವರದಲ್ಲಿ ಜಲಿಕ್ರೀಡೆಯಾಡಲೆಂದು ಉಲ್ಲಾಸದಿಂದ ಧುಮುಕುವ ಅನುಭವ ಸಾಲದ ನವ ದಂಪತಿಗಳ ಕೊರಳಿನಲ್ಲಿ ಸಾಲವೆಂಬ ದೊಡ್ಡ ಅರೆಬಂಡೆಯನ್ನು ಕಟ್ಟಿಬಿಟ್ಟರೆ ಏನು ಗತಿ? ಮುಂದಿನ ಭಯಂಕರ ಚಿತ್ರಗಳ ಪರಂಪರೆಯನ್ನು ಊಹಿಸಿಕೊಳ್ಳಿ. ಅತ್ಯಂತ ಭಯಾನಕವೂ ಕರುಣಾಪೂರ್ಣವೂ ಶೋಕಮಯವೂ ರುದ್ರವೂ ಆದ ಹಲವು ಕೊಟಲೆಗಳ ಚಿತ್ರವನ್ನು ಒಂದು ಉಪಮಾನದಲ್ಲಿ ಹೇಳಿದ್ದೇನೆ. ಆ ಉಪಮಾನದ ಪರದೆಯ ಹಿಂದೆ ನೀವೇ ನರಕದರ್ಶನಮಾಡಿ. ನನಗೆ ಆ ನರಕವರ್ಣನೆ ಮಾಡಲು ಇಷ್ಟವೂ ಇಲ್ಲ, ಸಮಯವೂ ಇಲ್ಲ. ಈ ಎಲ್ಲ ಕಾರಣಗಳಿಗಾಗಿ ಮದುವೆ ಮಾಡಿಕೊಳ್ಳುವವರೂ, ಮಾಡಿಸುವವೆರೂ, ಮುಂದಿನ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಜಾಗರೂಕತೆಯಿಂದ ವರ್ತಿಸುವುದು ಒಳ್ಳೆಯದು. ಮದುವೆಗೆ ಮದುವೆಯ ಸಂಭ್ರಮವೇ ಗುರಿಯಲ್ಲ; ಮುಂದಿನ ಸುಖ, ಸಮಾಜಸೇವೆ ಇತ್ಯಾದಿಗಳು ಆದರ ಗುರಿ. ವಿವಾಹವು ನಡೆಯುವ ಹಾದಿಯೆ ಹೊರತು, ಸೇರುವ ಮನೆಯಲ್ಲ. ಆದ್ದರಿಂದ ಜನರು ವಿವಾಹ ಕಾಲದಲ್ಲಿ ಅಗುವ ದುಂದನ್ನು ಕಡಿಮೆ ಮಾಡಿ, ದಂಪತಿಗಳ ಜೀವನ ಮುಂದೆ ಋಣಭಾರದಿಂದ ಕುಗ್ಗಿ ಪಾತಾಳಗತವಾಗದಂತೆ ನೋಡಿಕೊಳ್ಳಬೇಕು.

ನಮ್ಮಲ್ಲಿ ಇನ್ನೊಂದು "ಶೂನ್ಯದ ಖಾತೆಯ ಖರ್ಚ"ದೆ. ಎಂದರೆ ಕೆಲಸಕ್ಕೆ ಬಾರದ ವೆಚ್ಚ ಇದೆ. ಅದರಿಂದ ನಷ್ಟವೊಂದಲ್ಲದೆ ಅಪಾಯವೂ ಸಂಭವಿಸುತ್ತದೆ. ಅಪಾಯವನ್ನು ಕುರಿತು ಹಿಂದೆಯೆ ಪ್ರಸ್ತಾಪಿಸಿದ್ದೇನೆ. ಭೂತ ಪಿಶಾಚಿಗಳ ಆರಾಧನೆಗೆ ಆಗುವ ವೆಚ್ಚ ಅಷ್ಟಿಷ್ಟಲ್ಲ. ದುಡ್ಡಿರುವ ದೊಡ್ಡವರಿಗಿಂತೂ ಅದೊಂದು ಮಹಾಭೋಗದ ವಿಷಯವಾಗಿಹೋಗಿದೆ. ಆದರೆ ದೊಡ್ಡವರನ್ನು ಅನುಸರಿಸುವ ಬಡವರ ಗತಿಯೇನು? ನೂರಾರು ರೂಪಾಯಿ ಸಾಲವಿರುವ ಬಡವರು ಭೂತ, ಪಂಜ್ರೋಳ್ಳಿ, ಜಕ್ಕಿಣಿ, ರಣ ಮುಂತಾದ ಅಸಂಖ್ಯ ಅಂತರ ಬೆಂತರಗಳ ಪೂಜೆಗಾಗಿ, ಸಾಲವನ್ನೂ ಮನೆಯ ದುರವಸ್ಥೆಯನ್ನು ಗಣನೆಗೆ ತಾರದೆ, ಸುಳ್ಳು ಭಯದಿಂದ ಪ್ರೇರಿತರಾಗಿ, ವರ್ಷ ವರ್ಷವೂ ಮರಗಳ ಬುಡದಲ್ಲಿರುವ ಕಲ್ಲುಗಳಿಗೆ ಕುರಿ ಕೋಳಿಗಳನ್ನು ಬಲಿ ಇತ್ತು ಸರ್ವನಾಶವಾಗುತ್ತಿದ್ದಾರೆ. ಈ ಮಾತನ್ನು ಕೇಳಿ ಹಣವಿರುವವರು "ಬಡವರು ಬಿಟ್ಟರೆ ಬಿಡಲಿ! ನಾವೇಕೆ ಬಿಡುವುದು? ನಮ್ಮಲ್ಲಿ ಧನವಿದೆ" ಎಂದು ಯೋಚಿಸಬಹುದು ಆದರೆ ಭೂತಾರಾಧನೆಯಿಂದ ಧನನಷ್ಟವೊಂದೇ ಅಲ್ಲದೆ ಆತ್ಮನಾಶವೂ ಅಗುತ್ತದೆ ಎಂಬುದನ್ನು ಮರೆಯದಿರಿ.

ಆದರ್ಶವಿರುವುದು ಅದರಂತಾಗುವುದಕ್ಕೆ; ಅದಾಗುವುದಕ್ಕೆ. ನಾವು ಯಾರನ್ನು ಗೌರವಿಸುತ್ತೇವೆಯೋ ಅವರ ಗುಣಗಳೆ ನಮ್ಮಲ್ಲಿ ಮೂಡುತ್ತವೆ. ನಾವು ಯಾರನ್ನು ಆರಾಧಿಸುತ್ತೇವೆಯೊ ಅವರಂತೆಯೆ ಆಗುತ್ತೇವೆ. ದೇವರನ್ನು ಪೂಜಿಸಿದರೆ ದೇವರಾಗುತ್ತೇವೆ. ದೈವಗಳನ್ನು ಪೂಜಿಸಿದರೆ ದೆವ್ವಗಳಾಗುತ್ತೇವೆ. ಇದನ್ನೇ ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನು ಹೀಗೆಂದು ಹೇಳಿದ್ದಾನೆ.:

ಯಾಂತಿ ದೇವವ್ರತಾ ದೇವಾ಼ ಪಿತೃನ್ ಯಾಂತಿ ಪಿತೃವ್ರತಾಃ
ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಪಿ ಮಾಮ್ ||

"ದೇವತೆಗಳನ್ನು ಪೂಜಿಸುವವರಿಗೆ ದೇವಲೋಕ ಲಭಿಸುತ್ತದೆ. ಪಿತೃ ಪೂಜಕರು ಪಿತೃಲೋಕವನ್ನೈದುತ್ತಾರೆ. ಭೂತಪ್ರೇತ ಪೂಜಕರು ಆ ಭೂತ ಪ್ರೇತಗಳ ಲೋಕವನ್ನೆ ಸೇರುತ್ತಾರೆ. ನನ್ನ ಪೂಜಕರು ನನ್ನಲ್ಲಿಗೆ ಬರುತ್ತಾರೆ."

ನಿಮಗೆ ಯಾರನ್ನು ಸೇರಲು ಇಷ್ಟವಿದೆ? ಜಗದೀಶ್ವರನೂ ಪರಮ ಕಲ್ಯಾಣಕರನೂ ಸರ್ವಶಕ್ತನೂ ಸಕಲೈಶ್ವರ್ಯ ಸಂಪನ್ನನೂ ಭಕ್ತವತ್ಸಲನೂ ಅಂತರ್ಯಾಮಿಯೂ ಅತೀತನೂ ಪುರುಷೋತ್ತಮನೂ ಆಗಿರುವ ಭಗವಾನ್ ಶ್ರೀಕೃಷ್ಣನನ್ನೆ? ಅಥವಾ ಕಾಡಿನ ಮರದಡಿಯಲ್ಲಿರುವ ಕಲ್ಲಿನ ಪಿಶಾಚವಾದ ಪಂಜ್ರೋಳ್ಳಿಯನ್ನೆ? ಬುದ್ಧಿವಂತರ ಉತ್ತರ ಎಲ್ಲರಿಗೂ ಗೊತ್ತೇ ಇದೆ. ನಾನು ವಿವರಿಸಿ ಹೇಳಬೇಕಾಗಿಲ್ಲ. ಸಗಣಿಯವನೊಡನೆ ಸರಸವಾಡುವುದಕ್ಕಿಂತ ಗಂಧದವನೊಡನೆ ಗುದ್ದಾಡುವುದು ಲೇಸು. ಸರಸವಾಡಿದರೂ ಸಗಣಿಯಿಂದ ನಮಗೆ ದೊರಕುವುದು ದುರ್ವಾಸನೆ; ಗುದ್ದಾಡಿದರೂ ಗಂಧದವನಿಂದ ಪರಿಮಳ ಲಭಿಸುತ್ತದೆ. ಆದ್ದರಿಂದ ದೆವ್ವಗಳೊಡನೆ ಸರಸವಾಡುವುದಕ್ಕಿಂತ ದೇವರೊಡನೆ ಗುದ್ದಾಡುವುದೇ ಲೇಸು. ಹಿರಣ್ಯಕಶಿಪು ನೃಸಿಂಹನೊಡನೆ ಗುದ್ದಾಡಿ ಮೋಕ್ಷ ಹೊಂದಲಿಲ್ಲವೇ? ಗುದ್ದಾಟವೆ ಮೋಕ್ಷದಾಯಕ ಎಂದ ಮೇಲೆ ಆರಾಧನೆ ಎಂತಹ ಸುಗತಿದಾಯಕವೊ ಅದನ್ನು ವರ್ಣಿಸಲಸಾಧ್ಯ. ನಿಮ್ಮಲ್ಲಿ ಕೆಲವರು ಹೇಳಿಕೊಳ್ಳುತ್ತಿರಬಹುದು, "ನಾವು ದೆವ್ವಗಳ ಜೊತೆಗೆ ದೇವರನ್ನೂ ಪೂಜಿಸುತ್ತೇವೆ" ಎಂದು. ಅಂತಹವರಿಗೆ ತ್ರಿಶಂಕು ಗತಿ! ಮಹಾತ್ಮಾ ಯೇಸುಕ್ರಿಸ್ತನು "ನೀವು ದೇವರನ್ನೂ ದೆವ್ವವನ್ನೂ ಒಟ್ಟಿಗೆ ಪೂಜಿಸಲಾರಿರಿ" ಎಂದುಸಾರಿಹೇಳಿದ್ದಾನೆ. ಅದು ಪರಮ ಸತ್ಯ ಮನುಷ್ಯರನ್ನು ವಂಚಿಸಬಹುದು. ಆದರೆ ಅಂತರ್ಯಾಮಿಯನ್ನು ವಂಚಿಸಲಾರಿರಿ. ಆದ್ದರಿಂದ ದೆವ್ವಗಳ ಆರಾಧನೆಯನ್ನು ಬಿಡಿ; ದೇವರನ್ನು ಮಾತ್ರ ಪೂಜಿಸಿ. ನಿಮಗೆ ಭಯ ಬೇಡ. ಏಕೆಂದರೆ, ನಿಮ್ಮ ಆರಾಧನೆಯ ಮಹೇಶ್ವರನು ಸರ್ವಶಕ್ತನು. ಆತನ ಇಚ್ಛೆಯಿಲ್ಲದೆ ಒಂದು ತೃಣವೂ ಅಲ್ಲಾಡದು. ಆತನ ಭಕ್ತಿ ನಮಗೆ ವಜ್ರಕವಚದಂತೆ. ಅದಕ್ಕಿಂತಲೂ ಅತಿಶಯವಾದ ರಕ್ಷಕವಚ ಬೇರೊಂದಿಲ್ಲ. ಇದನ್ನು ದೃಢವಾಗಿ ನಂಬಿದರೆ ಶ್ರೇಯಸ್ಸು ತಪ್ಪದು. ದೇವರಿಗೆ ಕೋಳಿ ಕುರಿಗಳ ಬಲಿಯೂ ಬೇಡ; ವಜ್ರದ ಕಿರೀಟಗಳೂ ಬೇಡ. ಆತನಿಗೆ ಬೇಕಾದುದು ಭಕ್ತಿ. ಭಕ್ತಿಯಿಂದ ತೃಣವನ್ನು ನಿವೇದಿಸಿದರೂ ಆತನು ಸಂತೃಪ್ತನು; ಅದಕ್ಕೆ ಭಗವಾನ್ ಶ್ರೀಕೃಷ್ಣನ ಈ ಗೀತಾವಾಕ್ಯವೆ ಮಹಾಸಾಕ್ಷಿ —

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾಪ್ರಯಚ್ಛತಿ
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ||

"ಒಂದು ಎಲೆಯನ್ನಾಗಲಿ ಒಂದು ಹೂವನ್ನಾಗಲಿ ಒಂದು ಹಣ್ಣನ್ನಾಗಲಿ ನನಗೆ ಯಾವನಾದರೂ ಭಕ್ತಿಪೂರ್ವಕವಾಗಿ ನಿವೇದಿಸಿದ್ದಾದರೆ ಆ ಭಕ್ತಿಯ ಕಾಣಿಕೆಯನ್ನು ನಾನು ಆನಂದದಿಂದ ಸ್ವೀಕರಿಸುತ್ತೇನೆ."

ಕೈಯಲ್ಲಿ ಕಾಸಿಲ್ಲದ ಬಡವನೂ ಈಶ್ವರನಲ್ಲಿ ಮಹಾಭಕ್ತಿಯನ್ನಿಡುವುದು ಸಾಧ್ಯವಾಗಿರುವಾಗ ಸಾಲಮಾಡಿ, ತಾಮಸ ಧನದಿಂದ ಕೊಂಡು ತಂದ ತಾಮಸ ನೈವೇದ್ಯಗಳನ್ನು ಭೂತಗಳಿಗರ್ಪಿಸಿ ಅಧೋಗತಿಗಿಳಿಯುವುದೇಕೆ? ಮೇಲೆ ಹೇಳಿದ ವಿಷಯಗಳನ್ನು ಚೆನ್ನಾಗಿ ಮನನಮಾಡಬೇಕೆಂದು ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆ.

"ದೇವರೊಬ್ಬನೆ ಜಗದ್ಗುರು" ಎಂದು ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದ್ದಾರೆ. ಮನುಷ್ಯರು ನಿಮಿತ್ತ ಮಾತ್ರ ಗುರುಗಳಾಗಬಹುದು. ಅವರನ್ನು ಚೆನ್ನಾಗಿ ಪರೀಕ್ಷಿಸಿ, ಒರೆಹಚ್ಚಿ ನೋಡಿ, ಅವರು ನಿಜವಾಗಿಯೂ ಈಶ್ವರನ ಮಹಾ ವಿಭೂತಿಯ ಪ್ರತಿನಿಧಿಗಳೆಂದಾಗಲಿ ಪ್ರತಿಬಿಂಬಗಳೆಂದಾಗಲಿ ತಿಳಿದರೆ ಆಗ ಸ್ವೀಕರಿಸಬೇಕು. ಹತ್ತುರೂಪಾಯಿಗಳನ್ನು ಮತ್ತೊಂದು ಸ್ಥಳಕ್ಕೆ ಕೊಟ್ಟು ಕಳುಹಿಸಬೇಕಾದರೆ ನಂಬಿಕೆಯಾದ ಆಳನ್ನು ಹುಡುಕುತ್ತೇವೆ. ಗುರುವಿನ ಕೈಗೆ ಅತ್ಯಮೂಲ್ಯವಾದ ನಮ್ಮ ಆತ್ಮವನ್ನೇ ಕೊಡುತ್ತೇವೆ. ಆದ್ದರಿಂದ ನಾವು ಇನ್ನೆಷ್ಟು ಎಚ್ಚರಿಕೆಯಿಂದರಬೇಕೆಂದು ನೀವೇ ಊಹಿಸಿ. ಬುದ್ಧಿಗೆಟ್ಟು ಕೆಲಸಮಾಡಿದರೆ ಆತ್ಮನಾಶಕ್ಕೆ ಕಾರಣವಾಗುತ್ತದೆ. ಗುರುವನ್ನಾದರೂ ಪರೀಕ್ಷಿಸಲು ಹಿಂತೆಗೆಯಬಾರದು. ಹೊಳೆಯಲ್ಲಿ ಪ್ರಯಾಣಮಾಡುವ ಮೊದಲು ದೋಣಿ ಸರಿಯಾಗಿದೆಯೆ ಬಿರುಕು ಬಿಟ್ಟಿದೆಯೆ ನೋಡಿಕೊಳ್ಳಬೇಕು. ನಡುಹೊಳೆಯಲ್ಲಿ ನೀರುತುಂಬಿ ದೋಣಿ ಮುಳುಗುವಾಗ ಗೋಳಾಡಿದರೆ ಪ್ರಯೋಜನವಿಲ್ಲ. ಶ್ರೀ ಸ್ವಾಮಿ ವಿವೇಕಾನಂದರು ಶ್ರೀ ರಾಮಕೃಷ್ಣ ಪರಮಹಂಸರನ್ನೂ ಚೆನ್ನಾಗಿ ಪರೀಕ್ಷಿಸಿಯೆ ಗುರುವೆಂದು ಸ್ವೀಕರಿಸಿದರು. ಶ್ರೀರಾಮಕೃಷ್ಣ ಪರಮಹಂಸರು ಕೂಡ ಹಾಗೆಯೇ ಮಾಡಬೇಕೆಂದು ಹೇಳಿದ್ದಾರೆ. ಪರೀಕ್ಷೆ, ವಿಮರ್ಶೆ, ವಿಚಾರ — ಇವೆಲ್ಲವೂ ನಮ್ಮ ಹುಟ್ಟು ಹಕ್ಕುಗಳು. ಇವುಗಳನ್ನು ಬಿಟ್ಟುಕೊಡಬಾರದು. ಅವುಗಳನ್ನು ಬಿಟ್ಟರೆ ಕಾರ್ಗಾಲದ ಅಮಾವಾಸ್ಯೆಯ ರಾತ್ರಿಯಲ್ಲಿ ಕೊರಕಲು ದಾರಿಯಲ್ಲಿ ಹಾದು ನಡೆಯುವರು ಕೈಯಲ್ಲಿರುವ ದೀಪವನ್ನು ಬಿಸಾಡಿದಂತಾಗುತ್ತದೆ. ಆ ದೀಪದಂತಿರುವ ನಮ್ಮ ಮತಿಯೂ ಈಶ್ವರಜ್ಯೋತಿಯ ಅಂಶವಾದುದರಿಂದ ಅದು ನಮಗೆ ಪೂಜ್ಯಗುರು. 'ನನಗೆ ನಮಸ್ಕಾರಮಾಡು. ನನ್ನನ್ನು ಮರೆಹೋಗು' ಎಂದು ಉತ್ತಮ ಪುರುಷ ಏಕವಚನದಲ್ಲಿ ಭಗವದ್ಗೀತೆಯನ್ನೆಲ್ಲಾ ಆಧಿಕಾರವಾಣಿಯಿಂದ ಬೋಧಿಸಿದ ತರುವಾಯ ಶ್ರೀ ಕೃಷ್ಣನು ಅರ್ಜುನನನ್ನು ಕುರಿತು:

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ
ವಿಮೃಷ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥

"ಗುಟ್ಟಿಗಿಂತಲೂ ದೊಡ್ಡ ಗುಟ್ಟಾಗುರುವ ಈ ಜ್ಞಾನವನ್ನು ನಾನು ನಿನಗೆ ಹೇಳಿದ್ದೇನೆ. ಅದನ್ನೆಲ್ಲಾ ಚೆನ್ನಾಗಿ ವಿಚಾರಮಾಡಿ ನಿನಗೆ ವಿಹಿತ ತೋರಿದಂತೆ ಮಾಡು" ಎಂದು ಬೋಧಿಸಿದ್ದಾನೆ. ಭಗವಂತನು ಕೂಡ ನರನಿಗೆ ವಿಮರ್ಶೆ ಮಾಡುವ ಸ್ವಾತಂತ್ರ್ಯವನ್ನು ವಹಿಸಿದ್ದಾನೆ. ಹಾಗೆಂದಮೇಲೆ ಯಾವ ಗುರುವಾದರೇನು? ಯಾವ ಮತಾಚಾರ್ಯನಾದರೇನು? ನಾವು ವಿಮರ್ಶೆಮಾಡಲೇಬೇಕು. ವಿಮರ್ಶಿಸಲು ಹಿಂಜರಿಯಬಾರದು. ಯಾವನೋ ಒಬ್ಬ ಸಂದೇಹಾಸ್ಪದವಾದ ಗುರುಲಕ್ಷಣಗಳುಳ್ಳ ನಮ್ಮಂತಹ ಮನುಷ್ಯ ಪ್ರಾಣಿಯನ್ನೇ ಸಂಪ್ರದಾಯದಿಂದ ಗುರುವೆಂದು ಭಾವಿಸಿ ನಮ್ಮ ಖಾಲಿ ಖಜಾನೆಯ ದಾರಿದ್ರ್ಯದಿಂದ ಸಾಲತಂದ ಹಣವನ್ನು ಕಾಣಿಕೆ ತೆತ್ತು ಅಪಾತ್ರ ದಾನವೆಂಬ ಪಾಪಕ್ಕೆ ಭಾಜನರಾಗುವುದಕ್ಕಿಂತ ದರಿದ್ರ ನಾರಾಯಣನ ಸೇವೆಗಾಗಲಿ ಅಜ್ಞಾನಿ ನಾರಾಯಣನ ಪೂಜೆಗಾಗಲಿ, ಎಂದರೆ ಬಡವರ ಉದ್ಧಾರಕ್ಕಾಗಲಿ, ವಿದ್ಯಾಪ್ರಚಾರಕ್ಕಾಗಲಿ ಆ ಹಣವನ್ನು ಅರ್ಪಿಸುವುದು ಶ್ರೇಯಸ್ಕರವೆಂದು ಮತ್ತೆ ಮತ್ತೆ

ಒತ್ತಿಯೊತ್ತಿ ಹೇಳಬೇಕಾಗಿಲ್ಲ. ಮಹನೀಯರೆ. ನನ್ನ ಭಾವ ನನ್ನ ಭಾಷೆಗಿಂತಲೂ ಆಳವಾಗಿದೆ. ವಿಸ್ತಾರವಾಗಿದೆ. ನೀವೆಲ್ಲರೂ ಅರಿತು ನಡೆಯಬೇಕೆಂದು ಬೇಡುತ್ತೇನೆ.

ಈಶ್ವರ ಮನುಷ್ಯನ ಆಮುಷ್ಮಿಕವಾದ ಗುರಿ; ಸಂಸ್ಕೃತಿ ಐಹಿಕವಾದ ಗುರಿ. ಇವೆರಡಕ್ಕೂ ವಿರುದ್ಧಭಾವವಿಲ್ಲ. ಒಂದಕ್ಕೊಂದು ಸೋಪಾನವಾಗಿದೆ, ಪೂರಕವಾಗಿದೆ. ಒಂದರಲ್ಲಿ ಇನ್ನೊಂದಿದೆ. ಎರಡೂ ಒಂದೇ ಎಂದರೂ ತಪ್ಪಾಗದು. ಸುಸಂಸ್ಕೃತಿಗೆ ಸದ್ವಿದ್ಯೆಯೆ ಸಾಧನ. ನಮ್ಮಲ್ಲಿ ಅಕ್ಷರ ವಿದ್ಯೆಯ ಆಭಾವವಾಗಿದೆ; ಕ್ಷಾಮವಾಗಿದೆ ಎಂದರೂ ಸುಳ್ಳಾಗದು. ಸರಕಾರದವರು ಕೊಡುವ ನೌಕರಿ ಚಾಕರಿಗಳಿಗಾಗಿ ಓದುವ ಕಾಲ ಹಿಂದಾಯಿತು. ಸಂಸ್ಕೃತಿಗೋಸ್ಕರವಾದರೂ ನಮ್ಮ ಬಾಲಕರು ಓದಬೇಕು, ಬಿ.ಎ., ಎಂ.ಎ., ಡಿಗ್ರಿಗಳನ್ನೇ ಪಡೆಯಬೇಕು ಎಂದು ನನ್ನ ಭಾವವಲ್ಲ. ಪಡೆದರೇನೊ ಸಂತೋಷವೆ. ಆದರೆ ನೆಮ್ಮದಿಯಾಗಿ ಮೌನವಾಗಿ ಚೋಕ್ಕಟವಾಗಿ ಇತರರಿಗೆ ಹಾನಿಕರವಾಗದಂತೆ ಸಣ್ಣ ಮನಸ್ಸನ್ನು ಆಚೆ ನೂಕಿ ಬದುಕನ್ನು ಸಾಗಿಸಲು ಎಷ್ಟು ವಿದ್ಯೆ ಬೇಕೊ ಅಷ್ಟನ್ನಾದರೂ ನಮ್ಮ ಬಾಲಕರಿಗೆ ನಾವು ನೀಡದಿದ್ದರೆ ಮಲೆನಾಡಿನಲ್ಲಿ ಮಲೆಗಳೇ ತಲೆಗಳಾಗುವ ಸಂಭವವುಂಟೆದು ನಾನು ಮನಸ್ಸಿಲ್ಲದ ಮನಸ್ಸಿನಿಂದ, ಆದರೂ ಸತ್ಯದೃಷ್ಟಿಯಿಂದ ತಮ್ಮ ಮುಂದೆ ಹೇಳಬೇಕಾಗಿದೆ. ಈ ವಿಚಾರದಲ್ಲಿ ಸ್ತ್ರೀಪುರುಷ ಭೇದವಿಲ್ಲದೆ ಕೆಲಸ ಸಾಗಬೇಕು. ಹಾಳು ಹವ್ಯಾಸಗಳಿಗಾಗಿ ವೆಚ್ಚವಾಗಿ ಸೂರೆಹೋಗುವ ಹಣದ ಹೊಳೆಯನ್ನು ಇತ್ತಕಡೆಗೆ ಸಾಗಿಸುವುದು ಯುವಕರೆಲ್ಲರ ಕರ್ತವ್ಯವಾಗಿರಬೇಕು; ವೃದ್ಧರೆಲ್ಲರ ವ್ರತವಾಗಿರಬೇಕು. ನಿಮ್ಮ ಕನ್ಯೆಯರಿಗೆ ಸೇರು ಬಂಗಾರದ ಕೊರಳ ಹಾರಕ್ಕಿಂತಲೂ ಮುದ್ದಾದ ಕನ್ನಡದ ಅಕ್ಷರಮಾಲೆಯೆ ರಮಣೀಯತರವಾದ ಅಲಂಕಾರವೆಂದೂ ನಾನು ಧೈರ್ಯವಾಗಿ ಹೇಳಬಲ್ಲೆ. ವಿದ್ಯೆಯ ಸೌಂದರ್ಯ ಸಜೀವ ಸೌಂದರ್ಯ; ಚಿನ್ನದ ಚೆಲುವು ಹೆಣದಂತೆ! ಬಣ್ಣಬಣ್ಣದ ಮಾರಂಚಿನ ಜರತಾರಿ ಸೀರೆಗಳು, ಸೇರು ಸೇರು ಚಿನ್ನ ಹೇರಿರುವ ನಯ ನಾಜೋಕುಗಳಿಲ್ಲದ ತೊಡಕಾದ ತೊಡವುಗಳು! ಇವುಗಳೆಲ್ಲಾ ಏಕೆ? ಯಾವ ಮೋಹಕ್ಕೆ? ಯಾವ ಶ್ರೇಯಸ್ಸಿಗೆ? ಯಾವ ದೇವರ ಪ್ರೀತಿಗೆ? ಅವುಗಳನ್ನು ನಿತ್ಯವೂ ಉಟ್ಟು ತೊಡುತ್ತಾರೆಯೆ? ವರ್ಷಕ್ಕೊಂದು ಸಾರಿ ಎಲ್ಲಿಗಾದರೂ ಮದುವೆ ಮನೆಗಳಿಗೆ ಹೋಗುವಾಗ ಕತ್ತಲೆ ಕೋಣೆಗಳಲ್ಲಿ ಬಚ್ಚಿಟ್ಟಿರುವ ಸಂದುಕಗಳಿಂದ ಹೊರಗೆ ತೆಗೆಯುತ್ತಾರೆ. ಗರ್ವ ಪೋಷಕವೇ ಹೊರತು ಉಟ್ಟುಕೊಂಡರೆ ಆದಾದರೂ ಸುಖ ವಾಗಿರುತ್ತದೆಯೆ? ಮರ್ಮರ ನಾದಮಾಡುವ ದೆವ್ವ ದೆವ್ವ ಬಣ್ಣದ ಮಾರಂಚಿನ ಸರಿಗೆ ಸೀರೆ ಲಲನೆಯರಿಗೆ ಸಹಜವಾದ ಕೋಮಲ ಚಲನ ಗಮನಗಳನ್ನು ರುದ್ಧಮಾಡಿ ಅವರಿಗೆ ತೊಂದರೆ ಕೊಡುವುದಲ್ಲದೆ ನೋಡುವವರಿಗೆ ಅವರನ್ನು ಮಾರ್ಕೆಟ್ಟಿನ ಸ್ಥೂಲ ವರ್ಣದ ಕುರುಚಿ ಸುಂದರವಾದ ಚಿತ್ರಗಳಂತೆ ಮೂಡಿಬಿಡುತ್ತದೆ. ನಮ್ಮ ಸಹೋದರಿಯರಿಗೆ ಇದನ್ನು ಚೆನ್ನಾಗಿ ತಿಳಿಸಬೇಕು. ಸೌಂದರ್ಯ ಈ ವಿಧವಾದ "ರಾಣಾರಂಪ"ದಿಂದ ಎಂದಿಗೂ ಹೆಚ್ಚಾಗುವುದಿಲ್ಲ. ಈ ವಿಚಾರದಲ್ಲಿಯೂ ಮಿತವೇ ವಿಹಿತವಾಗಿರುತ್ತದೆ. ಆಕಾಶಬಣ್ಣದ ಒಂದು ಖಾದಿ ಸೀರೆಯ ನಮ್ರ ಗಂಭೀರ ಸಂಯಮಪೂರ್ಣವಾದ ಸೌಂದರ್ಯ ಜರತಾರಿ ಸೀರೆಗಳ ಕೆಂಗೂಳು ಬಣ್ಣದ ರೌದ್ರದಿಂದ ಎಂದಿಗೂ ಸಾಧ್ಯವಲ್ಲ. ಅಗ್ಗದಿಂದಲೆ ಸೊಬಗಿನ ಸುಗ್ಗಿ ಸಾಧ್ಯವಾಗಿರುವಾಗ ಭಯಾನಕವರ್ಣ ಪ್ರದರ್ಶನದ ಹವ್ಯಾಸವೇಕೆ? ಶ್ರೀಮಂತರ ಮನೆಯ ಸ್ತ್ರೀಯರು ಹಾಕಿಕೊಟ್ಟ ಹಾದಿಯಲ್ಲಿ ಬಡವರ ಮನೆಯ ಹೆಂಗಸರೂ ಹೋಗುವುದರಿಂದ ಶ್ರೀಮಂತರು ಮೇಲೆ ಹೇಳಿದ ಮಾತುಗಳನ್ನು ಮುನಿಯದೆ ಮನನಮಾಡಿ ಸನ್ಮಾರ್ಗದರ್ಶಿಗಳಾಗಬೇಕೆಂದು ಪ್ರಾರ್ಥನೆ.

ಈಗೀರುವ ನಮ್ಮ ಭರತಖಂಡದ ದುಃಸ್ಥಿತಿಯಲ್ಲಿ ನಿಮ್ಮೆದರು ದೇಶಭಕ್ತಿಯ ವಿಚಾರವಾಗಿ ಒಂದೆರಡು ಮಾತುಗಳನ್ನಾದರೂ ಆಡದಿದ್ದರೆ ನನ್ನ ಭಾಷಣ ಮಂಗಳಸೂತ್ರವಿಲ್ಲದ ವಧುವಿನಂತೆ ಅವಲಕ್ಷಣವಾಗುತ್ತದೆ. ನಾವಿಂದು ನೋಡುತ್ತಿರುವುದು ಭಾರತ ವರ್ಷದ ಇತಿಹಾಸದಲ್ಲಿ ಒಂದು ಮಹಾ ಸಂಧಿಸಮಯವಾಗಿರುತ್ತದೆ. ಪ್ರತಿಯೊಬ್ಬ ಭಾರತೀಯನ ನಾಡಿಯಲ್ಲಿಯೂ ಒಂದು ಹೊಸ ಚೈತನ್ಯದ, ಹೊಸ ಆಸೆಯ, ಹೊಸ ದರ್ಶನದ ಸ್ಫೂರ್ತಿ ಪ್ರವಹಿಸುತ್ತಿದೆ. ಆ ಸ್ಫೂರ್ತಿಯನ್ನು ಅನುಭವಿಸದ ಪಾಪಿ "ಚಲಮಾನ ಶ್ಮಶಾನ" ಎಂದೇ ಹೇಳಬೇಕು. ನಮ್ಮೀ ಪೃಥ್ವಿಯ ಈ ಮಹಾ ಘಟನೆ ಸಫಲವಾಗುವಂತೆ ನಾವೆಲ್ಲರೂ ತಪಸ್ಸುಮಾಡಬೇಕು. ನಮ್ಮಲ್ಲಿ ಅತ್ಯಂತ ಕ್ಷುದ್ರತಮವಾದ ವ್ಯಕ್ತಿಯೂ ಕೂಡ ಈ ಮಹಾ ರಾಮಸೇತು ಬಂಧನದ ಕಾರ್ಯಕ್ಕೆ 'ಅಳಿಲ ಸೇವೆ' ಮಾಡಬಹುದು. ನಮ್ಮ ಸಂಪತ್ತು ನಮಲ್ಲಿಯೆ ಉಳಿದು, ಅರೆಹೊಟ್ಟೆ ಉಂಡು ಸಾಯುವ ಸಾವಿರಾರ ಜನರು ಬದುಕಿಕೊಳ್ಳುತ್ತಾರೆ. ಈ ವಿಷಯಗಳನ್ನೆಲ್ಲಾ ಓದುಬಲ್ಲವರು ಪತ್ತಿಕೆಗಳ ಮೂಲಕ ತಿಳಿದುಕೊಂಡು ಓದು ಬರದವರಿಗೆ ಹೇಳಬೇಕು. ಮಲೆನಾಡಿನಲ್ಲಿ ಬೆಟ್ಟ ಕಣಿವೆ ಕಾಡುಗಳಲ್ಲಿ ಎಲ್ಲಿಯೋ ದೂರ ದೂರದಲ್ಲಿ ಒಂದೊಂದು ಮನೆಯಿರುವುದರಿಂದ, ಆ ಒಮ್ಮನೆಯ ಹಳ್ಳಿಗಳಿಗೆ ಹೊರಗಿನವರು ಬರದಿರುವುದರಿಂದ, ಹಳ್ಳಿಯವರು ಹೊರಗಿನ ಜಗತ್ತಿನ ವಿಚಾರವನ್ನು ತಿಲಮಾತ್ರವೂ ತಿಳಿಯದೆ ಹೋಗುವ ಸಂಭವವುಂಟು. ಆದ್ದರಿಂದ ಓದುಬಲ್ಲ ಮನೆತನದವರೆಲ್ಲರೂ ಪತ್ರಿಕೆಗಳನ್ನೂ ತರಿಸಲೇಬೇಕು. ತಮ್ಮ ಸಂಕುಚಿತ ಜೀವನದ ಬಿಂದುಗಳನ್ನು ಬಾಹ್ಯ ಜಗಜ್ಜೀವನದ ಮಹಾ ಸಿಂಧುವಿನಲ್ಲಿ ಲಗ್ನಮಾಡಬೇಕು. ನಾನೆಷ್ಟೋ ಮನೆಗಳನ್ನು ನೋಡಿದ್ದೇನೆ. ಅವರಿಗೆ ಓದುವಷ್ಟು ಮಟ್ಟಿನ ವಿದ್ಯೆವಿದ್ದರೂ ಪತ್ರಿಕೆಗಳ ಮುಖವನ್ನೇ ಕಾಣದೆ, ಹೊರಗಿನ ಪ್ರಪಂಚದ ವಿಚಾರದಲ್ಲಿ ಸಂಪೂರ್ಣವಾಗಿ ಅಜ್ಞರಾಗಿರುತ್ತಾರೆ. ಅವರ ಗೊಬ್ಬರದ ಗುಂಡಿಯಲ್ಲಿ ಇರುವ ಹುಳುವಿಗೆ ಮಹಾತ್ಮಾ ಗಾಂಧಿಯವರ ವಿಚಾರ ಎಷ್ಟು ಗೊತ್ತೋ ಅವರಿಗೂ ಅಷ್ಟೇ ಗೊತ್ತಿರುತ್ತದೆ. ಅಡಕೆಯ ಧಾರಣೆಯನ್ನು ಎಷ್ಟು ಮುತುವರ್ಜಿ ವಹಿಸಿ ಕೂತೂಹಲದಿಂದ ತಿಳಿಯುತ್ತೀರಿ? ಆ ಕುತೂಹಲದಲ್ಲಿ ವೀಸ ಪಾಲನ್ನಾದರೂ ರಾಷ್ಟ್ರಜೀವನದ ಕಡೆಗೆ ತಿರುಗಿಸಬಾರದೆ? ತಿರುಗಿಸಿ ನೋಡಿ. ಅದರಲ್ಲೂ ಆನಂದವಿದೆ. ಜೀವನದ ಅನುಭವವಲಯ ವಿಶಾಲವಾಗಿ, ಕೆಟ್ಟುಸಿರು ತುಂಬಿರುವ ಕೋಣೆಯ ಕಿಟಕಿ ಬಾಗಿಲು ತೆರೆದು ಹೊಸದಾದ ತಂಗಾಳಿ ಬೀಸಿದಂತಾಗುತ್ತದೆ.

ಇದೇ ಸಮಯದಲ್ಲಿ ಇನ್ನೊಂದು ಬಹು ಮುಖ್ಯ ವಿಚಾರವನ್ನು ಪ್ರಸ್ತಾಪಿಸಬೇಕೆಂದು ಇದ್ದೇನೆ. ಇದನ್ನು ಚೆನ್ನಾಗಿ ಗಮನಿಸಬೇಕೆಂದು ಕೈಮುಗಿದು ಪ್ರಾರ್ಥಿಸುತ್ತೇನೆ. ಅದು ಪುಸ್ತಕಗಳ ವಿಚಾರ. ಇತರ ಪುಸ್ತಕಗಳ ಮಾತಂತಿರಲಿ, ಕಡೆಗೆ ನಮ್ಮ ಜನಪ್ರಿಯ ಕಾವ್ಯಗಳಾದ ಭಾರತ, ರಾಮಾಯಣ, ಭಾಗವತ, ಜೈಮುನಿ ಭಾರತ ಇವುಗಳಾದರೂ ಮನೆಮನೆಯಲ್ಲಿರಬೇಡವೆ? ಆತ್ಮಕಲ್ಯಾಣಕ್ಕಾದರೂ ಅವುಗಳನ್ನು ಓದಬೇಡವೆ? ಯಾವ ಮನೆಯಲ್ಲಿ ಪ್ರತಿದಿನವೂ ಅರ್ಧಗಂಟೆಯ ಮಟ್ಟಿಗಾದರೂ ಕಾವ್ಯ ವಾಚನವಾಗುವುದಿಲ್ಲವೊ, ಯಾವ ಮನೆಯ ಮಂದಿ ಸ್ವಲ್ಪಕಾಲವಾದರೂ ತಮ್ಮ ಮನಸ್ಸನ್ನು ಗದ್ದೆ, ಗೊಬ್ಬರ, ಹಣ, ತೋಟ ಇವುಗಳಿಂದ ಬೇರೆಮಾಡಿ, ರಾಮ, ಕೃಷ್ಣ, ಧರ್ಮರಾಯ, ನಳ, ಹರಿಶ್ಚಂದ್ರ, ವ್ಯಾಸ, ವಾಲ್ಮೀಕಿ ಇತ್ಯಾದಿ ಮಹಾವ್ಯಕ್ತಿಗಳಿರುವ ಭಾವನಾ ಪ್ರಪಂಚಕ್ಕೆ ಕೊಂಡೊಯ್ಯದಿರುವರೊ, ಯಾವ ಮನೆಯಲ್ಲಿ ಜನರ ಆತ್ಮಗಳು ಪರಮಾತ್ಮನ ಪರವಾದ ಭಕ್ತಿಯನ್ನು ತುಸುವಾದರೂ ಸವಿಯದಿರುವುವೋ ಅಂತಹ ಮನೆ ಸುಡುಗಾಡಿಗಿಂತಲೂ ಕೀಳು; ಅಲ್ಲಿರುವವರು ಪ್ರೇತಗಳಿಗಿಂತಲೂ ಮೇಲಲ್ಲ. ಆ ಮಹಾಕಾವ್ಯಗಳನ್ನಾಗಲಿ ಅಥವಾ ಇತ್ತೀಚೆಗೆ ಉತ್ಪನ್ನವಾಗಿರುವ ಗ್ರಂಥಗಳನ್ನಗಲಿ ಕೊಂಡುಕೊಳ್ಳಲು ಹೆಚ್ಚು ಹಣ ವೆಚ್ಚ ಮಾಡಬೇಕಾಗಿಲ್ಲ. ಪ್ರತಿ ವರ್ಷವು

ಐದು ಅಥವಾ ಹತ್ತು ರೂಪಾಯಿಗಳನ್ನು ವೆಚ್ಚಮಾಡಿದರೆ ಹತ್ತು ಹದಿನೈದು ವರ್ಷಗಳಲ್ಲಿ ಮನೆಯಲ್ಲೊಂದು ದೊಡ್ಡದಾದ ಪುಸ್ತಕ ಭಂಡಾರವೆ ಆಗಿಬಿಡುತ್ತದೆ. ಮನೆಯಲ್ಲಿರುವ ಮಕ್ಕಳಿಗೂ ಅದರಿಂದ ಉಪಕಾರವಾಗುತ್ತದೆ.ದುರ್ವಿಷಯಗಳ ಕಡೆ ತಿರುಗುವ ಮನಸ್ಸು ಕಾವ್ಯಗಳಲ್ಲಿ ವಿಹರಿಸುವುದರಿಂದ ಸಾತ್ವಿಕವಾಗುತ್ತದೆ. ಒಂದು ಒಳ್ಳೆಯ ಗ್ರಂಥವನ್ನು ಓದಿದರೆ ಒಬ್ಬ ಮಹಾತ್ಮನ ಸ್ನೇಹಲಾಭದಿಂದ ಉಂಟಾಗುವ ಪರಿಣಾಮವಾಗುತ್ತದೆ, ಏಕೆಂದರೆ ಕಾವ್ಯ ಕವಿಯ ಜೀವನಸಾರದ ಸರ್ವಸ್ವ. ಆದು ನಮ್ಮದಾಗುವುದರಿಂದ ನಮ್ಮ ದೃಷ್ಟಿ ವಿಶಾಲವೂ ಶಾಂತಿಪೂಣವೂ ಆಗುತ್ತದೆ. ಬಾಳಿನ ಚೇಳಿನ ಬಾಲದ ಕೊಂಡಿ ಮುರಿದು ಬೀಳುತ್ತದೆ. ಜೀವನ ಸುಖ ಸುವರ್ಣಕ್ಕೆ ಪುಟವಿಟ್ಟಂತಾಗಿ ಆತ್ಮ ಓಜಸ್ವಿಯಾಗುತ್ತದೆ; ಆದ್ದರಿಂದ ಮನೆಯಲ್ಲಿ ಒಂದು ಒಳ್ಳೆಯ ಪತ್ರಿಕೆ, ಕೆಲವು ಒಳ್ಳೆಯ ಗ್ರಂಥಗಳು ಇರಬೇಕಾದುದು ಸದ್ಗೃಹದ ಸಲ್ಲಕ್ಷಣ.

ದೇವರು, ಧರ್ಮ, ಭಕ್ತಿ, ಪೂಜೆ, ಇಹ, ಪರ ಮೊದಲಾದ ವಿಚಾರಗಳನ್ನು ತಿಳಿದುಕೊಳ್ಳಲು ಎಲ್ಲರಿಗೂ ಸಾಧ್ಯ. ದೆವ್ವದ ಪೂಜೆ, ಒಣಕಲು ಆಚಾರ ಇವುಗಳನ್ನು ತ್ಯಜಿಸಬೇಕಾದರೆ, ಸುಳ್ಳು ಭಯದಿಂದ ಪಾರಾಗಬೇಕಾದರೆ ಅವುಗಳ ಜ್ಞಾನ ಎಲ್ಲರಿಗೂ ಬೇಕು. ಈ ವಿಚಾರಗಳನ್ನು ಬುಹು ಸುಲಭವಾಗಿ ಲೋಕಕ್ಕೆ ತಿಳಿಸಿದವರು ಒಬ್ಬರು ಮಹಾತ್ಮಾರಿದ್ದಾರೆ. ಭಗವಾನ್ ಶ್ರೀರಾಮಕೃಷ್ಣಪರಮಹಂಸರು ಓದು ಬರೆಹ ಚನ್ನಾಗಿ ತಿಳಿದವರಲ್ಲ, ಆದರೂ ಪಾಶ್ಚಾತ್ಯ ದೇಶಗಳಿಂದ ಪಂಡಿತವರ್ಯರಾಗಿ ಬಂದವರೂ ಕೂಡ, ಅವರ ಪದತಲದಲ್ಲಿ, ನಿರಕ್ಷರಕುಕ್ಷಿಗಳಾದ ಸಾಮಾನ್ಯರೊಡನೆ ಕುಳಿತು, ಅವರ ಉಪದೇಶಾಮೃತವನ್ನು ಸವಿದರು. ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು ಯೂರೋಪು ಅಮೆರಿಕಾಗಳಿಗೆ ಹೋಗಿ ವೇದಾಂತ ಬೋಧೆಮಾಡಿ ಜಗದ್ವಿಖ್ಯಾತರಾದುದಲ್ಲದೆ, ನಮ್ಮ ದೇಶ ಮತ್ತು ಧರ್ಮಗಳಿಗೆ ಕೀರ್ತಿಯ ಕಲಶವನ್ನಿಟ್ಟರು. ಆ ಮಹಾ ಶಿಷ್ಯರ ಉಪದೇಶಗಳು ವಿಶಾಲವಾಗಿವೆ; ಸರ್ವಜನಾದರಣೀಯವಾಗಿವೆ; ಸರ್ವಮತ ಗ್ರಾಸಿಯಾಗಿವೆ. ಪರಮಹಂಸರ ಉಪದೇಶ 'ಶ್ರೀ ರಾಮಕೃಷ್ಣ ವಚನವೇದ' ಎಂಬ ಪುಸ್ತಕದಲ್ಲಿ ಅಡಕವಾಗಿದೆ. ಆಕ್ಷರಸ್ಥರೆಲ್ಲರೂ ಅದನ್ನು ಓದಬೇಕು. ಅದನ್ನು ಓದಿದಮೇಲೆ ನೀವು ಬೇರೆಯ ವ್ಯಕ್ತಿಗಳಾಗುತ್ತೀರಿ ಎಂದು ನಾನು ಶಪಥಮಾಡಿ ಹೇಳುತ್ತೇನೆ. ಎಂದರೆ, ನೀವೆಲ್ಲರೂ ಸಂನ್ಯಾಸಿಗಳಾಗಿತ್ತೀರಿ ಎಂದರ್ಥವಲ್ಲ. ನಿಮಗೆ ಆ ಭಯ ಬೇಡ. ಶ್ರೀ ರಾಮಕೃಷ್ಣಪರಮಹಂಸರೂ ಮದುವೆಯಾಗಿದ್ದರು. ನಿಮ್ಮ ಜೀವನದಲ್ಲಿ ಶಾಂತಿ, ಶಕ್ತಿ, ಭಕ್ತಿ, ವಿವೇಕ, ಸುಖ ಎಲ್ಲವೂ ಅದರಿಂದ ಹೆಚ್ಚಾಗುತ್ತವೆ. ಆ ಮಹಾಪುರುಷರ ಅನುಗ್ರಹದಿಂದ ನಿಮ್ಮೆಲ್ಲರಲ್ಲಿಯೂಬೆಳಕು ಉದಯಿಸಲಿ, ನಿಮ್ಮ ಬದುಕು ಸುಖ ಶಾಂತಿ ಮಯವಾಗಲಿ!

## ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ

ತರುಣ ಮಿತ್ರರಲ್ಲಿ ವಿಜ್ಞಾಪನೆ,

ಈ ವಿದ್ಯಾರ್ಥಿನಿಲಯದ ಇಂದಿನ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆವಹಿಸಿ ತಮಗೆ  ಒಂದೆರಡು ಹಿತದ ಮಾತು ಹೇಳಬೇಕೆಂದು ನನ್ನ ತರುಣ ಮಿತ್ರರು ನನ್ನನ್ನು ಕೇಳಿಕೊಂಡರು. ವಾರ್ಷಿಕೋತ್ಸವಗಳೂ ಅಧ್ಯಕ್ಷತೆಗಳೂ ನವೀನ ಸಂಪ್ರದಾಯದ ನೀರಸ ಪದ್ಧತಿಗಳಾಗಿ ಹೋಗಿವೆ ಎಂದು ನನಗೆ ಗೊತ್ತಿದ್ದರೂ ನಾನು ಹೇಳಿದೆ:

“ಹಿತೋಪದೇಶಕ್ಕೆ ಏನು ಬರಗಾಲ? ಉಪನ್ಯಾಸಗಳಿಗೇನು ಕಡಿಮೆ? ಎಷ್ಟೊಂದು ಸಂಘಗಳಿವೆ? ಎಷ್ಟೊಂದು ಭಾಷಣಗಳಾಗುತ್ತವೆ? ಅದರಲ್ಲಿಯೂ ನಾನು ಹೊಸದಾಗಿ ಹೇಳುವುದೇನಿದೆ? ಹಾಗೆ ನೋಡಿದರೆ, ನಾನು ಹೇಳುವುದನ್ನೆಲ್ಲ ನಿಮ್ಮಲ್ಲಿಯೆ ಅನೇಕರು ಚೆನ್ನಾಗಿ ಹೇಳಬಲ್ಲವರಿದ್ದಾರೆ”.

ನಾನು ಏನು ತತ್ತ್ವ ಹೇಳಿದರೂ ಅವರ ವಿನಯಪೂರ್ವಕವಾದ ಬಲತ್ಕಾರದ ಮುಷ್ಟಿ ಸಡಿಲಲಿಲ್ಲ. ನನಗೂ ಕವಿಸಹಜವಾದ ಸವಿಯ ಭ್ರಾಂತಿ, ಒಪ್ಪಿಕೊಂಡೆ.

ನನ್ನ ಸಮ್ಮತಿಗೆ ಮತ್ತೊಂದು ರಹಸ್ಯದ ಕಾರಣವಿತ್ತು. ಕೆಲವು ದಿನಗಳಿಂದ ನನ್ನ ಮನಸ್ಸಿನಲ್ಲಿ ಒಂದು ಚಿಂತೆ ಸೇರಿಕೊಂಡು ಕೊರೆಯುತ್ತಿತ್ತು; ಅದನ್ನು ಹೊರಗೆಡಹಿ ಮನಃಶಾಂತಿ ಮಾಡಿಕೊಳ್ಳಲು ಅವಕಾಶ ಸಿಕ್ಕಿತೆಂದು ಈ ಅಧ್ಯಕ್ಷ ಸ್ಥಾನಕ್ಕೆ ಒಪ್ಪಿಕೊಂಡೆ.

ಬಹುಶಃ ನನ್ನ ಮಿತ್ರರು ತಮ್ಮ ದಿಗ್ವಿಜಯಕ್ಕೆ ತಾವೆ ಆಶ್ಚರ್ಯಪಟ್ಟು ಬೆನ್ನು ತಟ್ಟಿಕೊಂಡು ಹೋದರೆಂದು ತೋರುತ್ತದೆ. ಆದರೆ ಅವರಿಗೆ ಎಚ್ಚರಿಕೆ ಹೇಳುತ್ತೇನೆ! ನನ್ನ ಮೆದುಳಿನ ಚಿಂತೆಯನ್ನು ಅವರ ಮೆದುಳಿಗೆ ಅಂಟಿಸಲು ಬದ್ಧಕಂಕಣನಾಗಿ ಬಂದಿದ್ದೇನೆ. ಸಾಧ್ಯಾವಾದರೆ ತಪ್ಪಿಸಿಕೊಳ್ಳಲಿ!

ಇಂದಿನ ಉಪನ್ಯಾಸದ ವಿಷಯಕ್ಕೆ ‘ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ’ ಎಂದು ಹಣೆಹೆಸರಿಟ್ಟಿದ್ದೇನೆ. ಆ ಹಣೆಹೆಸರಿನ ಭಾವ ನಿಮಗೆ ವೇದ್ಯವಾಗುತ್ತದಾದರೂ ಅದನ್ನು ಸ್ವಲ್ಪ ವಿವರಿಸಿದರೆ ನನ್ನ ಉದ್ದೇಶ ನಿಮಗೆ ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ.

‘ಗುರು’ ಲಘು’ ಎಂಬ ಪದಗಳ ಪರಿಚಯ ನಿಮಗೆ ಈಗಾಗಲೆ ಆಗಿರಬೇಕು. ಛಂದಸ್ಸಿನ ಪಾಠ ಹೇಳುವಾಗ. ‘ಗುರು’ ಎಂದರೆ ಎರಡು ಮಾತ್ರೆಯ ಅಕ್ಷರವಾಗುತ್ತದೆ; ‘ಲಘು’ ಎಂದರೆ ಒಂದು ಮಾತ್ರೆಯ ಅಕ್ಷರ. ಹಾಗೆಯೆ, ಹಗುರ, ಚಟುವಟಿಕೆ, ಶೀಘ್ರಚಲನೆ, ನಿಸ್ಸಾರತೆ, ಟೊಳ್ಳು, ಗಾಂಭೀರ್ಯರಾಹಿತ್ಯ ಮೊದಲಾದ ಅರ್ಥಗಳಲ್ಲಿ ‘ಲಘು’ ಎಂಬ ಪದ ಪ್ರಯೋಗವಾಗುತ್ತದೆ. ಪದಾರ್ಥ ಲಘುವಾಗಿದೆ ಎಂದರೆ ಹಗರುವಾಗಿದೆ; ಲಗುಬಗೆಯಿಂದ ನಡೆದನು, ಎಂದರೆ ಚಟುವಟಿಕೆಯಿಂದ ನಡೆದನು; ಅವನದು ತುಂಬಾ ಲಘು ಬುದ್ಧಿ, ಎಂದರೆ ಅವನ ಬುದ್ಧಿಯಲ್ಲಿ ಸಾರವಿಲ್ಲ, ಗಾಂಭೀರ್ಯವಿಲ್ಲ; ಟೊಳ್ಳು ಎಂದರ್ಥವಾದರೂ ಆಗಬಹುದು; ಅಥವಾ ಅವನು ಯಾವಗಲೂ ಗಂಭೀರ ವಿಷಯಗಳಲ್ಲಿ ಪ್ರವೃತ್ತನಾಗದೆ ಹಗುರ ಹಾಸ್ಯ ಶೀಲತೆಯಲ್ಲಿಯೆ ಕಾಲ ಕಳೆಯುತ್ತಾನೆ ಎಂದಾದರೂ ಅರ್ಥವಾಗಬಹುದು. ‘ಲಘು’ ವಿನಿಂದ ಲಾಘವ, ‘ಗುರು’ ವಿನಿಂದ ‘ಗೌರವ’ ಹುಟ್ಟುತ್ತವೆ. ‘ಲಾಘವ’ ಎಂದರೆ ಪೊಳ್ಳು, ತೂಕವಿಲ್ಲದಿರುವಿಕೆ! ‘ಗೌರವ’ ಎಂದರೆ ದೊಡ್ಡತನ, ಗಾಂಭೀರ್ಯ, ಗಟ್ಟಿ, ತೂಕ, ಪವಿತ್ರತೆ, ಪೂಜ್ಯತೆ. ಸಾವಾನ್ಯವಾಗಿ ಬಳಕೆಯಲ್ಲಿರುವ ‘ಹಸ್ತಲಾಘವ’ ಮತ್ತು ‘ಆತ್ಮಗೌರವ’ ಎಂಬ ಮಾತುಗಳಲ್ಲಿ ಮೊದಲನೆಯದು ಸಂತೋಷ ಪ್ರಕಾಶನಕ್ಕಾಗಿ ಕೈ ಕುಲಕಿಸುವುದನ್ನೂ, ಎರಡನೆಯದು ತನ್ನ ಆತ್ಮದ ಸ್ಥಾನಕ್ಕೂ ಮಾನಕ್ಕೂ ನ್ಯೂನತೆಯುಂಟಾಗದ ರೀತಿಯಲ್ಲಿ ವರ್ತಿಸುವುದು ಎಂಬರ್ಥದಲ್ಲಿಯೂ ಬರುತ್ತವೆ. ನಾಟಕದ ವಿದೂಷಕನ ದೇಹದ ಗಾತ್ರ ಮತ್ತು ಭಾರಗಳಲ್ಲಿ ಗೌರವ ಎಂದರೆ ಗುರುತ್ವ

ಕಂಡು ಬಂದರೂ ಅದನ್ನು "ಡೊಳ್ಳು" ಎಂದು ಕರೆಯುತ್ತಾರೆ; ಅದು ನಗೆಗೀಡಾಗುತ್ತದೆ. ಅವನು ಲಘುವ್ಯಕ್ತಿ; ಅವನಲ್ಲಿರುವುದು ಆತ್ಮಲಾಘವ. ಪೂಜ್ಯರಾದ ಮಹಾತ್ಮ ಗಾಂಧಿಯವರ ಶರೀರದ ಗಾತ್ರ ಮತ್ತು ತೂಕಗಳಲ್ಲಿ ಲಘುತ್ವ ಕಂಡುಬಂದರೂ ಅವರು ಗುರು ವ್ಯಕ್ತಿ; ಅವರಲ್ಲಿರುವುದು ಆತ್ಮ ಗೌರವ.

ಗುರಿಯ ಹಿರಿಮೆ, ಉದ್ದೇಶದ ಶ್ರೇಷ್ಠತೆ, ಪ್ರಯತ್ನದ ಪರಿಶುದ್ಧತೆ, ಸಾಧನದ ಸಾಹಸ, ಇಷ್ಟಸಿದ್ಧಿಗಾಗಿ ಮಾಡುವ ತ್ಯಾಗ ಮತ್ತು ಕೈಕೊಳ್ಳುವ ತಪಸ್ಸು, ಶ್ರೇಯಃಪೂರ್ಣವಾದ ಚಿರಕಾಲಿಕ್ಕಾಗಿ ರುಚಿಕರವಾದ ತಾತ್ಕಾಲಿಕವನ್ನು ವಿಸರ್ಜಿಸುವ ವಿಚಾರಶಕ್ತಿ ಮತ್ತು ವಜ್ರದೃಢತೆ ಇತ್ಯಾದಿ ಗುಣಗಳೆಲ್ಲ ಧ್ವನಿತವಾಗುವಂತೆ 'ಮತಿಗೌರವ' ಎಂಬ ಪದವನ್ನು ಪ್ರಯೋಗಿಸಿದ್ದೇನೆ. ವಿದ್ಯಾರ್ಥಿಯಾದವನಿಗೆ ಅಂತಹ 'ಮತಿಗೌರವ' ಅವಶ್ಯಕ ಎಂಬುದನ್ನು ಸಮರ್ಥಿಸುವುದೆ ನನ್ನ ಇಂದಿನ ಉಪನ್ಯಾಸದ ಗುರೂದ್ದೇಶ.

"ವಿಷಯವನ್ನು ಎಲ್ಲರೂ ಒಪ್ಪವಾಗ ಸಮರ್ಥನೆಯ ಸಾಹಸವೇಕೆ?" ಎಂದು ಯಾರಾದರೂ ಕೇಳಬಹುದು. ಆದರೆ ವಿಷಯಕ್ಕೆ ಎಲ್ಲರ ಒಪ್ಪುಗೆಯೂ ಉಂಟೆಂಬುದು ಸಂದೇಹಾಸ್ಪದವಾಗಿದೆ. ಬಾಯೊಪ್ಪಿಗೆ ಕೊಟ್ಟರೂ ಅನೇಕರಲ್ಲಿ ಮನಸೊಪ್ಪಿಗೆ ಇಲ್ಲದಿರಬಹುದು. ವಿದ್ಯಾರ್ಥಿಗಳಲ್ಲಿ ಅನೇಕರ ನಿತ್ಯಜೀವನವನ್ನೂ, ಅವರು ಪ್ರದರ್ಶಿಸುವ ಅಭಿರುಚಿಗಳನ್ನೂ, ಅವರಲ್ಲಿ ಹೆಚ್ಚು ಹೆಚ್ಚಾಗಿ ಉಕ್ಕಿ ಕಾಣುತ್ತಿರುವ ಕೋಲಾಹಲ ಪ್ರಿಯತೆಯನ್ನೂ ಮತ್ತು ಸುಲಭ ಯಶೋಭಿಲಾಷೆಯಿಂದ ಅವರು ಕೈಗೊಳ್ಳುವ ವಿಕಾರ ವಿಧಾನಗಳನ್ನೂ ವಿಚಾರಪೂರ್ವಕಾಗಿ ಗನಿಸಿದರೆ ಅವರಲ್ಲಿ, — ಎಲ್ಲರಿಗಲ್ಲದಿದ್ದ ಪಕ್ಷದಲ್ಲಿ ಬಹುಮಂದಿಗಾದರೂ — 'ಮತಿಗೌರವ'ವುಂಟೆಂದು ಸಾಧಿಸುವುದು ಕಷ್ಟವಾಗುತ್ತದೆ. ಹೊಟ್ಟೆ ಬಟ್ಟೆಗಳಿಗೆ ಕಷ್ಟವಿಲ್ಲದಿರುವ ಶ್ರೀಮಂತ ಕುಮಾರರನೇಕರಿಗೆ ವಿದ್ಯಾನಿಕೇತನಗಳೆಂದರೆ ಲಘುಜೀವನದ ಕ್ರೀಡಾ ಶಾಲೆಗಳಾಗಿವೆ; ಒಂದು ತರಹದ 'ಕ್ಲಬ್ಬು'ಗಳಾಗಿವೆ. ಒಂದೇ ತರಗತಿಯಲ್ಲಿ ಅವರು ನಾಲ್ಕಾರು ವರ್ಷಗಳಾದರೂ ನೆಮ್ಮದಿಯಿಂದಿರುತ್ತಾರೆ. ಅಂತಹವರ ಭಾಗಕ್ಕೆ ವಿದ್ಯಾನಿಲಯ ಆಟದ ಮೈದಾನಕ್ಕೊ ಅಥವಾ ತಿಂಡಿಯ ಹೋಟಲಿಗೂ ತಗಲಿಕೊಂಡಿರುವ ಒಂದು ಕಟ್ಟಡ ಮಾತ್ರ. ಎಷ್ಟೋ ಆಲಸಮನಸ್ಕರು ಬರಿಯ ಪೊಳ್ಳಾಗಿರುವ ತಮ್ಮ ಲಘುಪ್ರಕೃತಿಗೆ ಲೀಲಾಶೀಲತೆ ಎಂಬ ಅಭಿಧಾನದ ಸೋಗು ತೊಡಿಸಿ ಮೆರೆಯುತ್ತಾ. ತಮ್ಮ ಸಹಾಧ್ಯಾಯಿಗಳಾದ ಗುರುಪ್ರಕೃತಿಯ ವಿದ್ಯಾರ್ಥಿಗಳನ್ನು ಮಂದಹಾಸ್ಯದಿಂದ ಹೀಯಾಳಿಸುತ್ತಾರೆ. ಟೀಕುಟಾಕಾದ ಪೋಷಾಕಿಗೂ ಕೋಲಾಹಲ ಕಂಠಕ್ಕೂ ಮನ್ನಣೆ ದೊರೆಯುವುದನ್ನು ನೋಡಿ ಗೌರವಮತಿಯ, ಮೌನಪ್ರಕೃತಿಯ ಗಂಭೀರ ವಿದ್ಯಾರ್ಥಿಯೂ ತನ್ನ ಮತಿಯ ಗೌರವದ ವಿಚಾರದಲ್ಲಿ ಸಂಶಯಪಟ್ಟುಕೊಳ್ಳುವಂತಾಗುತ್ತದೆ. ಅಂತಹ ಗುರುಪ್ರಕೃತಿಯ ವಿದ್ಯಾರ್ಥಿಯನ್ನು ಸಮರ್ಥಿಸಿ, ಆತನ ಬೆನ್ನುತಟ್ಟಿ ಧೈರ್ಯ ಹೇಳದೆ ಹೋದರೆ ಆತನೂ ಬಹುಸಂಖ್ಯೆಯ ಆಶ್ರಯದಲ್ಲಿ ರಕ್ಷಣೆ ಹೊಂದುವ ಅನರ್ಥಕ್ಕೆ ಗುರಿಯಾಗುವ ಸಂಭವವಿದೆ.

ಆದ್ದರಿಂದ ಗುರುಪ್ರಕೃತಿಯ ಮತ್ತು ಗೌರವಮತಿಯ ವಿದ್ಯಾರ್ಥಿ ವರ್ಗಕ್ಕೆ ಮಾತ್ರ ಈ ಉಪನ್ಯಾಸದಲ್ಲಿ ನನ್ನ ಸಂಬೋಧನೆ.

ವಿದ್ಯಾರ್ಥಿಯ ಜೀವನವೂ ಒಂದು ತಪಸ್ಸಾಧನೆ; ಪ್ರತಿಯೊಬ್ಬ ದಿಟವಾದ ವಿದ್ಯಾರ್ಥಿಯೂ ಒಬ್ಬ ಗೌರವತಪಸ್ವಿ. ವಿದ್ಯಾರ್ಜನೆಯ ಸಮಯವೆಂದರೆ ಆತ್ಮಶಕ್ತಿ ಸಂಗ್ರಹದ ಕಾಲ. ಬುದ್ಧಿಯನ್ನು ಮಸೆದು, ಭಾವವನ್ನು ಕಡೆದು, ಕವಿಗಳ ಕಾವ್ಯಗಳಲ್ಲಿಯೂ ತತ್ತ್ವಜ್ಞರ ದರ್ಶನಗಳಲ್ಲಿಯೂ ವೈಜ್ಞಾನಿಕರ ಸಂಶೋಧನೆಗಳಲ್ಲಿಯೂ ರಾಷ್ಟ್ರರಚನಾ ಸಮರ್ಥರ ರಾಜಕೀಯ ಶಾಸ್ತ್ರಗಳಲ್ಲಿಯೂ ಮನಸ್ಸನ್ನು ಹದಗೊಳಿಸಿ, ಚಿರಕಾಲವೂ ಶ್ರೇಯಸ್ಕರವಾದ ಸಂಸ್ಕೃತಿಯ ದೇವತೆಯನ್ನು ರಚಿಸಿ, ಆಕೆಯನ್ನು ಮನೋಮಂದಿರದಲ್ಲಿ ಸ್ಥಾಪಿಸಲು ಬದ್ಧಕಂಕಣರಾಗಿ ಬಂದಿರುವ ನೀವು, ಅಂತಹ ಇಚ್ಛೆಯಾಗಲಿ ಶಕ್ತಿಯಾಗಲಿ ಇಲ್ಲದ ಇತರರಂತೆ, ಬಣ್ಣಗುಳ್ಳೆಯ ಹವ್ಯಾಸಗಳಲ್ಲಿ ಕಾಲಹರಣ ಮಾಡಬೇಡಿ. ನಾಡಿನ ಮುಂದಣ ಏಳ್ಗೆಗೂ ಕಲ್ಲುಹಾಕಿ, ನಿಮ್ಮ ಅಭ್ಯುದಯದ ಭೇರಿಗೂ ಬಿಸಿನೀರು ಹೊಯ್ದುಕೊಳ್ಳಬೇಡಿ. ವೆಂಕನ ಹೆಸರು ಮುಂದಕ್ಕೆ ಬಂದಿದೆ; ಸೀನನ ಹೆಸರು ಪತ್ರಿಕೆಗಳಲ್ಲಿ ಅಚ್ಚಾಗಿದೆ; ಎಲ್ಲರ ಬಾಯಲ್ಲಿಯೂ ನಾಣಿಯ ನಾಮಸಂಕೀರ್ತನೆಯಾಗುತ್ತಿದೆ; ನಾನು ಮಾತ್ರ ಹಿಂದುಳಿದುಬಿಟ್ಟೆ, ಅಪ್ರಸಿದ್ಧನಾದೆ, ಆದ್ದರಿಂದ ಕೆಲಸಕ್ಕೆ ಬಾರದವನಾದೆ ಎಂದು ಕೈ ಹಿಸುಕಿಕೊಳ್ಳುವುದು ಬೇಡ. ಹೆಸರು, ಹೊರತಿಲ್ಲದೆ, ಎಲ್ಲಾ ಕಾಲದಲ್ಲಿಯೂ ಯೋಗ್ಯತೆಗೆ ಅಳತೆಯಾಗುವುದಿಲ್ಲ. ಅಲ್ಲದೆ ಒಮ್ಮೊಮ್ಮೆ ಅಯೋಗ್ಯತೆಗೆ ಅಳತೆಯಾಗುವುದೂ ಉಂಟು. ನಿಮಗೆ ನಿಜವಾದ ಸಿಂಹಾಸನ ಬೇಕಾದರೆ ಈ ನಾಟಕದ ಸಿಂಹಾಸನಗಳಿಗಾಗಿ ಪರದಾಡಬೇಡಿ. ಅನಾಮಧೇಯದ ಆಜ್ಞಾತದ ಅಖ್ಯಾತಿಯ ನೀರವ ಪರ್ಣಶಾಲೆಯಲ್ಲಿ ನಿರಾಲಸ್ಯದಿಂದ ತಪೋಜೀವನದಲ್ಲಿ ನಿರತರಾದರೆ ಮುಂದೆ ನಿಮಗೆ ರಸಸಿದ್ಧಿ ಕಟ್ಟಿಟ್ಟ ಬುತ್ತಿಯಂತೆ ಕೈಗೂಡುತ್ತದೆ. ಹೀಗೆಂದು ಮಹಾಪುರಷರೆಲ್ಲರ ಜೀವನ ಚರಿತ್ರೆಗಳೂ ಸಾರುತ್ತಿವೆ.

ಅಲಂಕಾರದ ಮಾತಿನಲ್ಲಿ ಹೇಳಿದರೆ ನಿಮ್ಮೆಲ್ಲನೇಕರಿಗೆ ಭಾವವಾಗದಿರಬಹುದು; ಅಥವಾ ತಪ್ಪುಭಾವನೆಯುಂಟಾದರೂ ಆಗಬಹುದು. ಏನೋ ಪರ್ಣ ಶಾಲೆಯಂತೆ! ನೀರವ ತಪಸ್ಸಂತೆ! ಸಿಂಹಾಸನವಂತೆ! — ನಾನಿರುವುದು ಸಂತೆ ಪೇಟೆಯಲ್ಲಿ; ಪರ್ಣಶಾಲೆಗೆ ಎಲ್ಲಿ ಹೋಗಲಿ? ಆ ದವಸ ಧಾನ್ಯದ ಮಾರಾಟದ ಹೋರಾಟದ ಗಲಿಬಿಲಿಯಲ್ಲಿ, ತಪಸ್ಸಿನ ಮಾತಂತಿರಲಿ, ನೀರವತೆಯನ್ನು ಎಲ್ಲಿಂದ ತರಲಿ? ನಾನು ತಿಂಗಳಿಗೆ ಒಂದು ರೂಪಾಯಿ ಬಾಡಿಗೆಗಿರುವ ಆ ಚಟ್ಟದಷ್ಟಗಲದ ಕತ್ತಲೆಯ ಕೊಠಡಿಯಲ್ಲಿ ಹಾಸಿಕೊಳ್ಳುವುದಕ್ಕೆ ಹರಕಲು ಮುರುಕಲು ಚಾಪೆಗೂ ಗತಿಯಿಲ್ಲದಿರುವಾಗ ಸಿಂಹಾಸನದ ಮಾತು ನನಗೇಕೆ? ಎಂದು ಮೊದಲಾಗಿ ಆಲೋಚಿಸಿ ಯಾರೂ ನಿರಾಶೆಯಿಂದ ನಗದಿರಲಿ. ಏಕೆಂದರೆ ಸಂತೆ ಪೇಟೆಯಲ್ಲಿಯೆ ಪರ್ಣಶಾಲೆಯನ್ನೂ, ವ್ಯಾಪಾರದ ಗಲಾಟೆಯಲ್ಲಿಯೆ ತಪೋನೀರವತೆಯನ್ನೂ, ಹರಿದ ಮಂದಲಿಗೆಯಲ್ಲಿಯೆ ಸಿಂಹಾಸನವನ್ನು ಮೀರುವ ದಿವ್ಯ ವೇದಿಕೆಯನ್ನೂ ಪಡೆಯಲು ಸಾಧ್ಯ.

ಕಾದಂಬರೀ ಕಾವ್ಯದಲ್ಲಿ ಮಹಾಶ್ವೇತೆಯ ಸಂದರ್ಶನದ ಭಾಗವನ್ನಾಗಲಿ, ವರ್ಡ್ಸ್‌ವರ್ತ್ ಕವಿಯ 'ಟೆಂಡರ್ನ್ ಅಬೆ' ಯಂತಹ ಕವನಗಳನ್ನಾಗಲಿ ತಲ್ಲೀನತೆಯಿಂದ ಓದುವಾತನು ಎಲ್ಲಿದ್ದರೇನು? ಕಾನನ ಸರೋವರ ಮುದ್ರಿತವಾದ ಪರ್ಣಶಾಲೆಯಲ್ಲಿ ಋಷಿಯಾಗಿರುತ್ತಾನೆ. ಒಡಲು ಸಂತೆಪೇಟೆಯಲ್ಲಿದ್ದರೂ ಅವನ ಕಲ್ಪನೆ ಅಚ್ಛೋದ ಸರಸ್ತೀರಗಾಮಿ. ಅಲ್ಲಿ "ಕುಮುದ ರಜಂಗಳೊಳ್ ಪೊರೆದು ವಾಃಕಣಜಾಲಮನಾಂತು, ಕೂಡೆ ವಿಶ್ರಮಿಸಿ ತರಂಗಮಾಲಿಕೆಗಳೊಳ್, ಕಲಹಂಸನಿನಾದ ಬಂಭ್ರದ್ ಭ್ರಮರ ರವಂರಗಳೊಳ್ ಬೆರಸಿ" ಮನುಜೇಂದ್ರ ಚಂದ್ರಾಪೀಡನನ್ನು "ಅಮರ್ದೊಸೆದಪ್ಪಿಕೊಂಡು ಕರೆವಂತೆವೋಲ್ ತೀಡಿದ" ಆ ಪುಣ್ಯ ಸಮೀರಣನು ಒಯ್ಯೊಯ್ಯನೆ ಬಂದು ಈತನನ್ನೂ

ಅಪ್ಪಿ ಕೊಂಡುಹೈಮಾಚಲೋನ್ನತಿಗೆ ಕರೆದೊಯ್ಯುತ್ತಾನೆ. ಪಟ್ಟಣದ ಗಡಿಬಿಡಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹೇಗೆ ತನ್ನ ಕಲ್ಪನೆ ಸಂತೆಯ ನಡುವೆಯೆ ಪರ್ಣಶಾಲೆಯನ್ನು ರಚಿಸಿತೆಂಬುದನ್ನು ವರ್ಡ್ಸ್‌ವರ್ತ್ ಕವಿ ಹೀಗೆ ವರ್ಣಿಸಿದ್ದಾನೆ:

These beauteous forms,
Through a long absence, have not been to me
As is a landscape to a blind man's eye:
But oft, in lonely rooms, and'mid the din
Of towns and cities, I have owed to them,
In hours of weariness, sensations sweet,
Felt in the blood, and felt along the heart:
And passing even into my purer mind,
With tranquil restoration: —

ಆ ಅಮರಲೋಕಕ್ಕೆ ದಿನಸಿಯ ಮಾರಾಟದ ಗಡಿಬಿಡಿ ತಟ್ಟುವುದಿಲ್ಲ. ಕಾವ್ಯಧ್ಯಾನ ನಿರತನಾದವನು ಕೂತಿರುವ ಹರಕಲು ಚಾಪೆ ಕ್ರವರ್ತಿಯ ಸಿಂಹಾಸನಕ್ಕಿಂತಲೂ ದಿವ್ಯ. ರಾಮಾಯಣ ಮಹಾಕಾವ್ಯ ರಚನೆಯ ಕಾಲದಲ್ಲಿ ಋಷಿಕವಿ ವಾಲ್ಮೀಕಿ ಉಪಯೋಗಿಸುತ್ತಿದ್ದ ಕುಶಾಸನದ ಬೆಲೆ ಯಾವ ಸಿಂಹಾಸನಕ್ಕಿದೆ? — ಗೌರವಮತಿಯ ವಿದ್ಯಾರ್ಥಿಗೆ ಅಸಾಧ್ಯವಾಗುವುದಿಲ್ಲ, ನಾನು ಸೂಚಿಸಿದ ರಸತಪಸ್ಸು.

ಹಾಗಾದರೆ ವಿದ್ಯಾರ್ಥಿಯಾದವನು ಸದಾ ಅಂತರ್ಮುಖಿಯಾಗಿ ಕೊಠಡಿಯಲ್ಲಿ ಕುಳಿತು ಕನಸುಣಿಯಾಗಬೇಕೆ? ಅವನಿಗೆ ಆಟ ಬೇಡವೆ? ವ್ಯಾಯಾಮ ಬೇಡವೆ? ವಿನೋದ ಬೇಡವೆ? ಎಂದು ಯಾರೂ ಪ್ರಶ್ನಿಸದಿರಲಿ. ಏಕೆಂದರೆ ಅವು ಬೇಡವೆಂದು ನಾನು ಹೇಳಿಯೂ ಇಲ್ಲ; ನನ್ನ ಮಾತಿನಲ್ಲಿ ಸೂಚನೆಯೂ ಆಗಿಲ್ಲ.

ಬಹಿರ್ಮುಖತೆಯಿಲ್ಲದ ಅಂತರ್ಮುಖತೆ ಭ್ರಾಂತಿವಿಲಾಸವಾಗುತ್ತದೆ. ವ್ಯಾಯಾಮ ಜನ್ಯವಾದ ದೃಢಾರೋಗ್ಯವಿಲ್ಲದವನ ಓದು ಮನೋವಿಕೃತಿಯಾಗಿ ಪರಿಣಮಿಸುತ್ತದೆ. ಪ್ರಕೃತಿಸಂಪರ್ಕವಿಲ್ಲದವನ ಕಾವ್ಯರಸಾಸ್ವಾದನ ಅಸ್ವಾಭಾವಿಕವಾದ ಅಸಹ್ಯಕರ್ಮ ವಾಗುತ್ತದೆ. ಅದರಿಂದ ತಾತ್ಕಾಲಿಕವಾಗಿ ಉಂಟಾಗುವ ಸುಖ ತನ್ನನ್ನು ಕೊಲ್ಲುವ ಕ್ಷಯಕ್ರಿಮಿಗಳಿಗೆ ತಾನೆ ಜನಕನಾಗುತ್ತದೆ. ಗಾಳಿ, ಬೆಳಕು, ಅರಣ್ಯ, ಆಕಾಶ, ಸೂರ್ಯ, ಚಂದ್ರ, ಹಕ್ಕಿ, ಚುಕ್ಕಿ ಮೊದಲಾದವುಗಳ ಸಂಗ ಸಹಾವಾಸವಿಲ್ಲದವನ ಓದಿನ ಮೊಟ್ಟೆಯಿಂದ ಗೂಬೆ ಮೂಡಬಹುದು; ಕೋಗಿಲೆ ಎಂದಿಗೂ ಹಾಡಲಾರದು. ಉತ್ತಮ ಸಾಹಿತ್ಯ ನಮ್ಮನ್ನು ಎಷ್ಟು ಅಂತರ್ಮುಖಿಗಳನ್ನಾಗಿ ಮಾಡುತ್ತದೆಯೊ ಆಷ್ಟೆ ಬಹಿರ್ಮುಖಿಗಳ ನ್ನಾಗಿಯೂ ಮಾಡುತ್ತದೆ. ಅವುಗಳೆರಡರ ಸಮತೂಕ ಮತ್ತು ಸುಮನ್ವಯದಿಂದಲೆ 'ಮತಿಗೌರವ' ಸಾಧ್ಯ. ಪುಸ್ತಕಕೀಟವನ್ನು ಆದರ್ಶದೇವತೆಯೆಂದು ನಿಮಗೆಂದಿಗೂ ನಾನೊಡ್ಡುವುದಿಲ್ಲ.

ಅನುಭವವಲಯವನ್ನು ಅಗಲಗೊಳಿಸಿ, ಆಳಗೊಳಿಸಿ, ಅದಕ್ಕೆ ಅರ್ಥಗಾಂಭೀರ್ಯವನ್ನು ದಯಾಪಾಲಿಸುವ ಬಹಿರ್ಮುಖಕರ್ಮಗಳೂ ವಿದ್ಯಾರ್ಥಿಯ ಮತಿಗೌರವವನ್ನು ಹೆಚ್ಚಿಸುತ್ತವೆ. ವಾಸ್ತವದ ದವಡೆಯಲ್ಲಿ ಚೆನ್ನಾಗಿ ಕಡಿದು ಮೆಲಕು ಹಾಕುವುದರಿಂದ ಕಲ್ಪನೆಯಲ್ಲಿ ಮೇದ ಮೇವು ಮೈಗೆ ಹಿಡಿಯುತ್ತದೆ. ಗ್ರಾಮ ಸೇವೆ, ಭಾಷಾಸೇವೆ, ಜ್ಞಾನಪ್ರಸಾರ, ಸಾಹಿತ್ಯಪ್ರಚಾರ, ವೈದ್ಯ ಸಹಾಯ, ರೋಗಶುಶ್ರೂಷೆ ಇತ್ಯಾದಿ ಅಲಘು ಕಾರ್ಯಗಳಲ್ಲಿ ಪಾಲುಗೊಳ್ಳುವ ವಿದ್ಯಾರ್ಥಿಯ ಮತಿ ಸಜೀವವೂ ಸುಪುಷ್ಟವೂ ಆಗುತ್ತದೆ; ಮುಂದಿನ ಜೀವನ ಸಂಗ್ರಾಮದಲ್ಲಿ ಕೆಚ್ಚಿನಿಂದ ಭಾಗವಹಿಸಲು ಅವನು ಹೆಚ್ಚು ಹೆಚ್ಚು ಸಜ್ಜುಗೊಳ್ಳುವಂತಾಗುತ್ತದೆ.

ಅಂತಹ ಸತ್ಕಾರ್ಯಗಳ ವಿಚಾರದಲ್ಲಿಯೂ, ಅವುಗಳಲ್ಲಿ ಆಸಕ್ತಿ ವಹಿಸುವ ವಿದ್ಯಾರ್ಥಿಗಳ ವಿಷಯದಲ್ಲಿಯೂ ಶ್ಲಾಘನೆಯಲ್ಲದೆ ಅನ್ಯಭಾವಕ್ಕೆ ನನ್ನಲ್ಲಿ ಒಂದಿನಿತೂ ಎಡೆಯಿಲ್ಲ. ವಿದ್ಯಾರ್ಜನೆಗಾಗಿ ಬಂದವನು ಲೋಕಸೇವೆ ಪರೋಪಕಾರಗಳನ್ನು ಕಲಿಯಾಬಾರದೆಂದಲ್ಲ; ವಿದೆಯನ್ನೂ ಚೆನ್ನಾಗಿ ಸಂಪೂರ್ಣವಾಗಿ ಆರ್ಜಿಸಬೇಕು, ಎಂಬುದು ನನ್ನ ಆಕಾಂಕ್ಷೆ.

ಅದೂ ಅಲ್ಲದೆ ಲೋಕಸೇವೆ ಪರೋಪಕಾರಗಳೂ ಕೂಡ ಒಂದು ವಿಧವಾದ ಅಡ್ಡಕಸುಬಿನ ಷೋಕಿಗಳಾಗುವ ಸಂಭವವೂ ಇರುತ್ತದೆ. ನಾಲ್ಕು ಮಂದಿಯ ಕಣ್ಣಿಗೆ ಬೀಳಬೇಕೆಂಬ ಚಪಲತೆಗಾಗಿಯೊ, ತಾನು ಕೈಕೊಂಡ ವಿದ್ಯಾರ್ಜನೆಯಲ್ಲಿ ಆಸಕ್ತಿ ಇಲ್ಲದುದರಿಂದ ಉಂಟಾಗುವ ಬೇಜಾರಿನ ಪರಿಹಾರಕ್ಕಾಗಿಯೊ ಅಥವಾ ಯಾವುದೋ ಸಂಘಕ್ಕೆ ಕಾರ್ಯದರ್ಶಿಯಾಗಬೇಕು, ಆಧ್ಯಕ್ಷನಾಗಬೇಕು, ಚುನಾವಣೆಯಲ್ಲಿ ಗೆಲ್ಲಬೇಕು ಎಂಬಿವೆ ಮೊದಲಾದ ಚಪಲ ಪ್ರಕೃತಿಯ ಅಭಿಸಂಧಿಗಾಗಿಯೊ, ಸೇವಾಕಾರ್ಯಗಳಲ್ಲಿ ತನ್ನನ್ನು ತಾನೆ ಮೆರೆಯುವ ಹವ್ಯಾಸಕ್ಕೆ ಗೌರವಮತಿಗಳಾದ ವಿದ್ಯಾರ್ಥಿಗಳು ಹೋಗದಿರುವುದು ಲೇಸೆಂದು ನನಗೆ ತೋರುತ್ತದೆ. ಏಕೆಂದರೆ ವಿದ್ಯೆ ಭೂಮವಾಗಿದೆ; ಸಮಯ ಸ್ವಲ್ಪವಾಗಿದೆ.

ನಾನು ಹೇಳುತ್ತಿರುವುದು ಎಲ್ಲವಿದ್ಯಾರ್ಥಿಗಳಿಗೂ ಅನ್ವಯಿಸುವುದಿಲ್ಲ ಎಂಬುದನ್ನು  ಈ ಮೊದಲೆ ಸೂಚಿಸಿದ್ದೇನೆ. ಅದನ್ನೆ ಈಗ ಸ್ಪಷ್ಟಪಡಿಸುತ್ತೇನೆ. ವಿದ್ಯಾರ್ಜನೆಗಾಗಿ ಬಂದ ವಿದ್ಯಾರ್ಥಿಗೆ ಅದರಲ್ಲಿ ಪೂರ್ಣಾಸಕ್ತಿ ತೋರದಿದ್ದರೆ ಬೀದಿ ಬೀದಿ ಅಲೆಯುವುದಕ್ಕಿಂತಲೂ ಯಾವುದಾದರೂ ಸಂಘಸೇವಾಕಾರ್ಯದಲ್ಲಿ ತೊಡಗುವುದು ಪರಮಲೇಸು. ಕಡೆಗೆ ಅಧ್ಯಕ್ಷತೆ, ಕಾರ್ಯದರ್ಶಿತ್ವ, ಕ್ರೀಡಾಸ್ಪರ್ಧೆ, ಚರ್ಚಾಕೋಲಾಹಲ ಗಳಲ್ಲಿಯಾದರೂ — ಚಿಂತೆಯಿಲ್ಲ, ಮನಸ್ಸೋಡಿಸುವುದು ಶ್ರೇಯಸ್ಕರ. ಆದರೆ ನನ್ನ ಗಮನದಲ್ಲಿರುವ ಗಂಭೀರಪ್ರಕೃತಿಯ ಗೌರವಮತಿಯ ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ಸ್ವಲ್ಪ ಬಿಗಿಹಿಡಿಯಬೇಕಾಗುತ್ತದೆ. ಗಾಜನ್ನೆ ಮಾಣಿಕ್ಯವೆಂದು ಕೊಂಡಾಡುವ ಅಭಿರುಚಿಯ ಸಂತೆಗೆ ನಿಜವಾದ ಮಾಣಿಕ್ಯವೆ ಹೋಗುವ ಪಕ್ಷದಲ್ಲಿ ಅದು ಜನಸ್ತುತಿಯನ್ನು ಸೂರೆಗೊಳ್ಳಬಹುದಾದರೂ ಮುಂದೆ ರತ್ನ ಪರೀಕ್ಷಕರ ಗೋಷ್ಠಿಯಲ್ಲಿ ತನಗೊದಗುವ ಅನರ್ಘ್ಯ ಬೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅದು ಅಗ್ಗದ ಸಂತೆಯಿಂದ ದೂರವಾಗಬೇಕು. ಗೋಪ್ಯವಾಗಿ ತನ್ನ ಉಜ್ವಲತೆಯನ್ನು ಹೆಚ್ಚಿಸಿ ಕೊಳ್ಳುತ್ತಿರಬೇಕು; ಮಂದಿ ಕಿಕ್ಕಿರಿದು ಚಪ್ಪಾಳೆ ಹೊಡೆಯುತ್ತಾ ನೋಡುತ್ತಿರುವ ಗಣೆಡೊಂಬನ ಕೊರಳ ಕವಡೆಯಾಗಲಿಕ್ಕಲ್ಲ; ರಾಜರಾಜೇಶ್ವರಿಯ ಕೀರಿಟದಲ್ಲಿ ದೇವ ಮಣಿಯಾಗುವುದಕ್ಕೆ.

ನಾನು ನಿರ್ದೇಶಿಸಿ ಮಾತನಾಡುತ್ತಿರುವ ಗೌರವಮತಿಯ ವಿದ್ಯಾರ್ಥಿಗೆ ಪರೀಕ್ಷೇಗಳಲ್ಲಿ ತೇರ್ಗಡೆ ಹೊಂದುವುದು ಕಷ್ಟವಲ್ಲ. ಆತನು ಸಹಜವಾಗಿ ಇತರರಿಗಿಂತಲೂ ಪ್ರತಿಭಾಶಾಲಿಯೂ ಮೇಧಾವಿಯೂ ಆಗಿರುವುದರಿಂದ ಸಾಮಾನ್ಯ ವಿದ್ಯಾರ್ಥಿಗಳಿಗಾಗಿ ವಿದ್ಯಾಸಂಸ್ಥೆಗಳು ಒಡ್ಡುವ ಒರೆಗಲ್ಲಿನಲ್ಲಿ ಆತನ ಸತ್ತ್ವದ ಗೆರೆ ಉಜ್ವಲತರವಾಗಿ ಮಿಂಚುತ್ತದೆ. ಆದರ ಪರಿಣಾಮವಾಗಿ ಅವನಿಗೆ ಶಹಭಾಸುಗಳೂ ಕರಗತವಾಗಬಹುದು. ತಾನು ಲೋಕವಂದ್ಯವಾದ ಉತ್ತಮಾದರ್ಶದ ಗಿರಿ ಶಿಖರಕ್ಕೇರಿದೆನೆಂದು ಭಾವಿಸಿ ಹಿಗ್ಗಬಹುದು. ಹಾಗೇನಾದರೂ ಆದರೆ ಅದು ಶೋಚನೀಯವೆ ಸರಿ. ರತ್ನದ ಗಣಿಗೆ ಇಳಿಯುವವನು ದಾರಿಯಲ್ಲಿ ಕಂಡುಬಂದ ಕಾಗೆ ಬಂಗಾರದ ಹಳುಕುಗಳಿಗೆ ಮೋಹಿತನಾಗಿ, ಅವುಗಳನ್ನು ಮೂಟೆ ಕಟ್ಟಿ ಹೊತ್ತು ಹಿಂತಿರುಗಿದಂತಾಗುತ್ತದೆ.

ಆದ್ದರಿಂದ ಪ್ರತಿಭಾಶಾಲಿಯಾದ ವಿದ್ಯಾರ್ಥಿಯ ಲಕ್ಷ್ಯ ಅಂತರಿಕ್ಷೋನ್ನತ ವಾಗಿರಬೇಕು; ವಿಶ್ವವ್ಯಾಪಿಯಾಗುವ ಅನಂತ ಸಾಹಸದಲಿ ನಿರಂತರ ನಿರತವಾಗಿರಬೇಕು. ಅವನ ಮತಿ ಪರೀಕ್ಷೇಗಳಲ್ಲಿ ತೇರ್ಗಡೆ ಹೊಂದುವ ಮತ್ತು ಪಾರಿತೋಷಕಗಳನ್ನು ಪಡೆಯುವ ಅಲ್ಪತೃಪ್ತಿಯ ಉಸುಬಿನಲ್ಲಿ ಹೂತು ನಡೆಗೆಡಬಾರದು. ಪಠ್ಯ ಪುಸ್ತಕಗಳ ಮಿತವಲಯದಲ್ಲಿ ಸೆರೆಯಾಗಿರದೆ ವಾಙ್ಮಯ ಜಗತ್ತಿನ ವಿಶ್ವವಿಶಾಲತೆಯಲ್ಲಿ ರಸಯಾತ್ರಿಯಾಗಬೇಕು. ಅಲ್ಲಿಯ ಮಹದ್ ವ್ಯಕ್ತಿಗಳೊಡನೆ ಸ್ನೇಹ ಬೆಳಸಬೇಕು; ಅವರೊಡನೆ ಹೋರಾಡಬೇಕು; ಅವರಿಗೆ ಶರಣು ಹೋಗಬೇಕು; ಪೂಜೆ ನಮಸ್ಕಾರಗಳಿಂದಲೆ ಅವರನ್ನು ಗೆದ್ದು,, ಅವರ ಐಶ್ವರ್ಯವನ್ನು ದೋಚಬೇಕು; ಅವರ ಗರಡಿಯಲ್ಲಿ ಅವರೊಡನೆಯೆ ಸಾಧನೆಮಾಡಿ ಜಗಜಟ್ಟಿಗಳಾಗಬೇಕು; ಅಲ್ಲಿಯ ಗರಡಿಯಾಚಾರ್ಯರಲ್ಲಿ ಕೃಪಣತೆಯಿಲ್ಲ, ಕರುಬಿಲ್ಲ. ತೆರೆದ ಮನೆಯಂತೆ, ಬಿಚ್ಚಿದ ಕೈಯಂತೆ, ಅಕ್ಷಯ ಪಾತ್ರೆಯಂತೆ ಅವರು ಉದಾರಿಗಳು. ಅಂತಹ ಮಹಾಮಹಿಮರೊಡನೆ ವಿಹರಿಸಲು ಶಕ್ತಿಯನ್ನು ಅಸಕ್ತಿಯನ್ನೂ ಪಡೆದ ವಿದ್ಯಾರ್ಧಿ ಅಗಸ್ತ್ಯಭ್ರಾತನ ಉಪನ್ಯಾಸಕ್ಕೆಂದು , ದೇವದತ್ತನ ಕ್ರೀಡಾ ಕಸರತ್ತಿಗೆಂದು, ಸಿನಿಮಾತಾರೆಗಳ ಕೋಲಾಹಲಪೂಜೆಗೆಂದು ಹೊತ್ತು ಕಳೆದರೆ ಮುಖ ಮುಚಿಕೊಳ್ಳವಂತಾಗುತ್ತದೆ, ಕಣ್ಣೀರಿಡುವಂತಾಗುತ್ತದೆ.

ಉಳದೆ, ಬಿತ್ತದೆ, ಬೆಳೆಯದೆ ಪೈರು ಕೊಯ್ಲಿಗೆ ಬರುವುದಿಲ್ಲ. ಬೆವರು ಸುರಿಸದೆ ಸಿರಿ ಕೈ ಸೇರುವುದಿಲ್ಲ. ವಿದೇಯ ಲೋಕದಲ್ಲಿ ಧನಿಕರಾಗಲು ಸುಲಭೋಪಾಯಗಳಿಲ್ಲ. ಅಲ್ಲಿ ಯಾರೂ ವಂಚನೆಯಿಂದ ಸಂಪತ್ತು ಗಳಿಸಲಾರರು. ಅಲ್ಲಿ ದುಡಿಮೆಯಂತೆ ಪಡಿ. ಅಲ್ಲಿ ಕಳ್ಳರುಜುಗಳಿಗೂ ಸುಳ್ಳುಪತ್ರಗಳಿಗೂ ಚಿರಂಜೀವವಿಲ್ಲ. ಅಲ್ಲಿ ಯಾವನೂ ಬರಿಯ ದಳ್ಳಾಳಿತನ ಮಾಡಿ ಶ್ರೀಮಂತನಾಗಲಾರನು. ಅದು, ವಿರೋಧಾಭಾಸವಾಗಿ ಕಂಡು ಬಂದರೂ , ಸಮತವಾದ ಚಕ್ರಾಧಿಪತ್ಯ! ದುಡಿಯುವವರಿಗೆ ಮಾತ್ರ ಅಲ್ಲಿಗೆ ಪ್ರವೇಶ. ಆದರೆ ಯಾರೂ ಬೇಕಾದರೂ ಅಲ್ಲಿಗೆ ಹೋಗಿ ದುಡಿಯಬಹುದು. ಕೂಲಿಯಾಳಾಗದೆ ಅಲ್ಲಿಗೆ ಹೋಗಲಿಲ್ಲ; ಹೊಕ್ಕ ಮೇಲೆ ಅಲ್ಲಿ ಎಲ್ಲರೂ ಚಕ್ರವರ್ತಿಗಳೆ! ಅಷ್ಟೆ ಅಲ್ಲ; ಚಕ್ರವರ್ತಿಯಲ್ಲದವನಿಗೆ ಅಲ್ಲಿ ಕೂತುಕೊಳ್ಳಲೂ ಸ್ಥಳವಿಲ್ಲ; ಏಕೆಂದರೆ ಅಲ್ಲಿ ಸಿಂಹಾಸನಗಳಲ್ಲದೆ ಬೇರೆ ಪೀಠಗಳಿಲ್ಲ.

ಸಿಂಹಾಸನದ ವರ್ಣನೆಯನ್ನು ಕೇಳಿದರೆ ಯಾರು ತಾನೆ ಅದನ್ನೇರಲು ಕಾತರರಾಗುವುದಿಲ್ಲ? ಆ ಆನಂದಸಾಮ್ರಾಜ್ಯದ ಸಾಮ್ರಾಟನಾಗಲು ಯಾರು ತಾನೆ ಬಯಸುವುದಿಲ್ಲ? ಆದರೆ ಆ ಸಿಂಹಾಸನ ದುರ್ಗಮಪರ್ವತಾಗ್ರದಲ್ಲಿರುವ ದುರ್ಗದ ಒಳಗಡೆ ಭದ್ರವಾಗಿದೆ. ಇಷ್ಟ, ಧೈರ್ಯ, ಶ್ರಮ, ಸಾಹಸ ಮತ್ತು ತ್ಯಾಗಗಳಿಲ್ಲದೆ ಕೋಟೆಯ ಬಾಗಿಲು ತೆರೆಯುವುದಿಲ್ಲ;

ಗೊಡೆ ಬಿರಿಯುವುದಿಲ್ಲ; ಸಿಂಹಾಸನಕ್ಕೆ ಕೈವಶವಾಗುವುದಿಲ್ಲ. ಉದ್ದಾಮ ಕಾವ್ಯಗಳ ರಸರಾಷ್ಟ್ರಗಳನ್ನು ಸ್ವಾಧೀನ ಮಾಡಿಕೊಳ್ಳುವುದು ದುರ್ಗಜಯಕ್ಕಿಂತಲೂ ಹೆಚ್ಚೇನೂ ಸುಲಭತರವಲ್ಲ.

ಪ್ರೀತಿಯ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕಾಗಿ ಹಸಿದಿರಬೇಕಾಗುತ್ತದೆ; ಅವುಗಳನ್ನೋದಿ ಜಯಿಸುವುದಕ್ಕಾಗಿ ನಿದ್ದೆಗೆಡಬೇಕಾಗುತ್ತದೆ; ಬೆವರು ಸುರಿಸಬೇಕಾಗುತ್ತದೆ; ಎಣ್ಣೆ ಉರಿಸಬೇಕಾಗುತ್ತದೆ; ಎಷ್ಟೋ ಮನೋರಂಜನೆಗಳನ್ನೂ ತ್ಯಾಗಮಾಡಿ ಅಧ್ಯಯನ ತಪಸ್ಸಿನಲ್ಲಿ ಮಗ್ನವಾಗಬೇಕಾಗುತ್ತದೆ. ವ್ಯಾಕರಣದ ನೀರಸತೆಯನ್ನು ಸಹಿಸಿ, ನಿಘಂಟುವಿನ ಹೇರಡವಿಯಲ್ಲಿ ಬೇಸರಗೊಳ್ಳದೆ ತೊಳಲಿ, ಟೀಕೆ ಟಿಪ್ಪಣಿ ವಿಮರ್ಶೆ ವ್ಯಾಕ್ಯಾನಗಳನ್ನು ತಡಕಿ ಹುಡುಕಿ ಸಂಗ್ರಹಿಸಬೇಕಾಗುತ್ತದೆ. ಇಷ್ಟನ್ನೂ ಹಲ್ಲು ಕಚ್ಚಿಕೊಂಡು ದೃಢಮನಸ್ಸಿನಿಂದ ಸಾಧಿಸುವ ಮತಿಗೌರವವಿಲ್ಲದಿದ್ದರೆ, ಸಾಮಾನ್ಯ ಬುದ್ಧಿಯ ಮಾತಂತಿರಲಿ, ಪ್ರತಿಭೆಯೂ ಕೂಡ, ಮರಳುಗಾಡಿನಲ್ಲಿ ಅರತು ಹೋಗುವ ಮಹಾನದಿಯಂತೆ, ಕೃಷಿಯಿಲ್ಲದೆ ಕೃಶವಾಗಿ ವ್ಯರ್ಥವಾಗುತ್ತದೆ.

ಇದುವರೆಗೆ ನಾನುನೀರಸವಾದ ಗದ್ಯದಲ್ಲಿ ಹೇಳಲು ಪ್ರಯತ್ನಿಸುತ್ತಿದ್ದುದನ್ನೆ ರಸಪೂರ್ಣವಾದ ಕಾವ್ಯವಾಣಿಯಲ್ಲಿ ಸಂಗ್ರಹವಾಗಿ ಹೇಳಿದ್ದಾನೆ ಇಂಗ್ಲಿಷ್ ಕವಿ ಮ್ಯಾತ್ಯೂ ಆರ್ನಾಲ್ಡ್. 'ರಗ್ಬಿ ಚಾಪೆಲ್ ' ಎಂಬ ತನ್ನ ಭವ್ಯ ಕವನದಲ್ಲಿ ಗೌರವಮತಿಯ ಭೀಷಣತಪಸ್ಸಾಧನೆಯನ್ನು ಅನನುಕರಣೀಯ ಶೈಲಿಯಲ್ಲಿ ವರ್ಣಿಸಿದ್ದಾನೆ. ಜಗತ್ತಿನ ಸಾಹಿತ್ಯದ ಅಪಾರವಾದ ಚಿತ್ರಶಾಲೆಯಲ್ಲಿ ಇಂತಹ ಭೀಷ್ಮಾದ್ಭುತ ಚಿತ್ರಗಳು ಅಪೂರ್ವ:

What is the course of the life
Of mortal men on the earth?
Most men eddy about
Here and there — eat and drink,
Chatter and love and hate,
Gather and squander, are raised
Aloft, are hurled in the dust,
Striving blindly, achieving
Nothing: and then they die —
Perish! and no one asks
Who or what they have been,
More than he asks what waves,
In the moonlit solitudes mild
Of the midmost Ocean, have swell'd,
Foam'd for a moment, and gone,
And there are some, whom a thirst
Ardent, undquenchable, fires,
Not with the crowd to be spent —
Not without aim to go round
In an eddy of purposeless dust,
Effort unmeaning and vain.
Ah yes, some of us strive
Not without action to die

Fruitless, but something to snatch
From dull oblivion, nor all
Glut the devouring grave!
We, we have chosen our path —
Path to a clear-purposed goal,
Path of advance! — but it lcads
A long, steep journey, through sunk
Gorges, o'er mountains in snow!
Cheerful, with friends, we set forth —
Then, on the height, comes the storm!
Thunder crashes from rock
To rock, the cataracts reply;
Lightnings dazzle our eyes:
Roaring torrents have breach'd
The track — the stream-bed descends
In the place where the wayfarer once
planted his footstep — the spray
Boils o'er its borders! aloft,
The unseen snow-beds dislodge
Their hanging ruin; — alas,
Havoc is made in our train!
Friends who set forth at our side
Falter, are lost in the storm!
We, we only, are left.
With frowning foreheads, with lips
Sternly compress'd, we strain on,
On — and at nightfall, at last,
Come to the end of our way,
To the lonely inn'mid the rocks;
Where the gaunt and taciturn host
Stands on the threshold, the wind
Shaking his thin white hairs —
Holds his lantern to scan
Our storm-beat figures, and asks:
Whom in our party we bring?
Whom we have left in the snow?
Sadly we answer: we bring
Only ourselves! we lost
Sight of the rest in the storm!
Hardly ourselves we fought through,
Stripp'd without friends, as we are!
Friends, companions, and train
The avalanche swept from outside.

ಗಿರಿನೆತ್ತಿಯ ಮಂದಿರಕ್ಕೆ, ಆ ನರೆಗೂದಲಿನ ಮಹರ್ಷಿಯ ಬಳಿಗೆ, ಎಲ್ಲರೂ ಬರುವುದಿಲ್ಲ. ಸಾಹಸಿಗಳಲ್ಲಿ ಅನೇಕರು ಮಳೆಗಾಳಿಗೆ ಸಿಕ್ಕಿ ಬಟ್ಟೆಗೆಡುತ್ತಾರೆ. ಹೊರಡುವ ಗೆಳೆಯರೆಲ್ಲರೂ ಜೋತೆಗೆ ಬಂದರೆ ಸಂತೋಷ. ಅವರು ಬರದಿದ್ದರೆ, ಬರಲೊಲ್ಲದಿದ್ದರೆ, ಬರಲಾರದಿದ್ದರೆ ನೀವಾದರೂ ಮುಂದುವರಿಯಬೇಕಾಗುತ್ತದೆ. ಭಯಂಕರವಾದರೂ ಚಿಂತೆಯಿಲ್ಲ. ಏಕಾಂಗಿಯಾದರೂ ಹೆದರದೆ ಹಿಂಜರಿಯದೆ ಗಿರಿಶಿಖರಕ್ಕೇರಿ ಗುರಿಮುಟ್ಟಿದರೆ ನಿಮಗೂ ಗುರುದರ್ಶನವಾಗುತ್ತದೆ. ಇತರರಿಗೂ ಮಾರ್ಗದರ್ಶನ ಕಾರಿಯಾದರೂ ಆಗಬಹುದು, ನಿಮ್ಮ ಜೀವನಯಾತ್ರೆ.

## ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ ?

೧

ವಿದ್ಯಾರ್ಥಿಗಳಲ್ಲಿ ವಿದ್ಯಾರ್ಥಿಯೊಬ್ಬನ ವಿಜ್ಞಾಪನೆ,

ಶ್ರೀ ರಾಮಾಯಣದಲ್ಲಿ ಒಂದು ಮಹದರ್ಥದ ಸನ್ನಿವೇಶವನ್ನು ಚಿತ್ರಿಸಿದ್ದಾನೆ ಕವಿಋಷಿ ವಾಲ್ಮೀಕಿ:

ಚಿತ್ರಕೂಟದ ಶಿಖರಾರಣ್ಯದ ಮುನಿವಸತಿಯಲ್ಲಿ ವನವಾಸದ ಪ್ರಾರಂಭ ಸಮಯನ್ನು ಕಳೆಯುತ್ತಿದ್ದ ಶ್ರೀ ರಾಮಚಂದ್ರನಲ್ಲಿಗೆ ಭರತದೇವನು ಯಾತ್ರೆ ಹೋಗುತ್ತಾನೆ, ಅಣ್ಣನನ್ನು ಅಯೋಧ್ಯೆಗೆ ಕರೆತರಲೆಂದು. ಆದರೆ ಆತನ ಆಶಾವಿಫಲತೆ ಅನಿವಾರ್ಯವಾಗುತ್ತದೆ. ಅಣ್ಣನಿಗೆ ಬದಲಾಗಿ ಅಣ್ಣನ ಪಾದುಕೆಗಳನ್ನು ತಲೆಯಲ್ಲಿ ಹೊತ್ತು ಅಯೋಧ್ಯಾಭಿಮುಖನಾಗಿ ಹಿಂತಿರುಗುತ್ತಾನೆ. ಆದರೆ ಅಯೋಧ್ಯೆಯ ಬಳಿಸಾರಿದ ಭರತನಿಗೆ ಆ ರಾಮಶೂನ್ಯ ರಾಜಧಾನಿಯನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲ. ಅಲ್ಲಿಗೆ ಸ್ವಲ್ಪ ದೂರದಲ್ಲಿದ್ದ ನಂದಿಗ್ರಾಮಕ್ಕೆ ನಡೆದು, ಅಲ್ಲಿ ರಾಮಪಾದುಕೆಗಳನ್ನು ಸಿಂಹಾಸನದಲ್ಲಿಟ್ಟು ಪೂಜಿಸುತ್ತಾ ಸೀತಾನಾಥನ ಪುನರಾಗಮನದ ನಿರಂತರ ನಿರೀಕ್ಷಣೆಯ ತಪಸ್ಸಿನಲ್ಲಿ ನಿರತನಾಗುತ್ತಾನೆ.

ಮನು ರಚಿಸಿದ ಅಯೋಧ್ಯೆ. ಇಕ್ಷ್ವಾಕು ರಘು ದಿಲೀಪಾದಿ ಲೋಕವಿಖ್ಯಾತರಾದ ರವಿವಂಶದ ಚಕ್ರೇಶ್ವರರು ಆಳಿಬಾಳಿದ ಮಹಾನಗರ. ಅದರ ಐಶ್ವರ್ಯ ಅಚ್ಚಳಿಯದಿದೆ. ಅರಮನೆಗಳೇನು, ಸೌಧಗಳೇನು, ರಾಜವೀಧಿಗಳೇನು, ಉದ್ಯಾನಗಳೇನು, ರತ್ನಗೋಪುರಗಳೇನು, ಹೊಂಗಳಸಗಳೇನು — ಎಲ್ಲವೂ ಇದ್ದವು, ಎಲ್ಲ ಸುಖಗಳಿಗೂ ನೆಲೆವೀಡಾದ ಆ ನಗರದಲ್ಲಿ. ಹೀಗಿದ್ದರೂ ಭರತನೇಕೆ ಅದನ್ನು ಪ್ರವೇಶಿಸಲಿಲ್ಲ? ಆ ಮಹಾನಗರದ ವಿಚಾರವಾಗಿ ಅವನ ಮನಸ್ಸಿನಲ್ಲಿ ಏನು ಜುಗುಪ್ಸೆ ಉಂಟಾಯಿತು? ಏಕೆ?

ಹಾ ಭಾಗ್ಯಹೀನ ದೀನ ಅಯೋಧ್ಯೆ,
ನಿನಗುಂ ಅರಣ್ಯಗತಿಯಾಯ್ತುಲಾ ರಾಮನಾ
ವನವಾಸದಿಂ, ದಶರಥನ ನಿಧನದಿಂದಂತೆ
ಭರತನ ಪರಿತ್ಯಾಗದಿಂ! ಶ್ರೇಷ್ಠರಿಲ್ಲದಿರೆ,
ಏನಿರ್ದರೇನಂತೆ, ಮಸಣಮಾ ಪತ್ತನಂ
ತತ್ತ್ವ ವಿದ್ಯಾ ಕಲಾ ಸಂಗೀತ ಸಾಹಿತ್ಯ
ಸಕಲ ಸಂಸ್ಕೃತಿಗೆ. ಬಿತ್ತರದ ಬೀದಿಗಳೆರಡು
ಕೆಲದಿ ಮುಗಿಲಂ ಮುಟ್ಟಿ ಮೆರೆದೊಡೇಂ ಸ್ಪರ್ಧೆಯಾ
ಪ್ರಾಸಾದ ಪಂಕ್ತಿ? ರಂಜಿಸಿದೊಡೇಂ ರಂಜನಿಯಂ
ಪಗಲುಗೈದಾಗಸದ ಚುಕ್ಕಿಗಳನೇಳಿಸುತೆ
ಕಿಕ್ಕಿರಿದು, ಕಣ್ಬೆರಗುಗೊಳಿಸಿ, ಗೊಂಚಲ್ಗೊಂಡು
ಉರಿವ ವಿದ್ಯುದ್ದೀಪರಾಜಿ? ಬಣ್ಣದ ಬುಗ್ಗೆ,
ಕಣ್ಗೆ ಕಾಮನಬಿಲ್ಗಳಂಗನೆಯರಾಟವೆನೆ
ಸಾಲ್ಗೊಂಡು ವಿವಿಧಗತಿಯಾ ಕಲಾಕೃತಿಯಿಂದೆ,
ರಂಗುರಂಗಿನ ತೋಂಟ ರಂಗದಿ ಮನಂಗೊಳಿಸಿ
ಕುಣಿದೊಡೇಂ? ಪ್ರಾಸಛಂದಃಪೂರ್ಣಮಪ್ಪುದೇಂ
ಪುರುಷಾರ್ಥ ಶಾಶ್ವತದ ರಾಸಲೀಲಾ ಬೃಂದೆ?
ಮನಮನೋಮಂದಿರದ ಸುಸ್ವಪ್ನಗೋಪುರದ
ಕಲಶಂ ನಭಶ್ಚುಂಬಿಯಾಗದಿರೆ, ಋಷಿಹೃದಯ
ಮಂಗಳರತಿ ಬಾಳಿನಂಧತೆಯನಳಿಸದಿರೆ,
ಕವಿಕೃತಿಯ ವರ್ಣಗಾನಂ ಮಹನ್ ನಿತ್ಯತಾ
ಸ್ವರ್ಣಸುಂದರ ಇಂದ್ರಿಯಾತೀತ ನಂದನದಿ
ನವರಸಾಪ್ಸರಿಯರಂ ನರ್ತನಂಗೈಸದಿರೆ,
ಏನಿರ್ದುಮೇನ್ ಅನಾಗರಿಕತಾಶ್ರೀ, ದಿಟಂ
ಮಸಣಮಾ ಪತ್ತನಮಯೋಧ್ಯೆ ತಾನಾದೊಡಂ।
ಪ್ರೇತವನಮಂ ಪುಗುವನೇಂ ಪೂಜ್ಯಪಾದುಕಾ
ಚೇತನಂ? ಪಾಳ್ ಮಸಗಿದಾ ದುಸ್ಕೃತಿಯ ನಿಧಿಗೆ
ಬೆಂದಿರುಹಿ, ಬಳಿಯ ನಂದಿಗ್ರಾಮಕೈತಂದು,
ಪಾದುಕಾ ಪಟ್ಟಾಭಿಷೇಕಮಂ ಗೈದದಂ
ಪೂಜ್ಯಾಗ್ರಜಂಗೆತ್ತು, ರಾಜ್ಯಭಾರವ್ರತದಿ

ನಿಂದನೈ ಭರತನನಿಶಂ ರಾಮ ಸುಕ್ಷೇಮ
ಚಿಂತನಾ ಪ್ರಾರ್ಥನೆಗೆ ತೆತ್ತು ತನ್ಮಾತ್ಮಮಂ.

ಶ್ರೀರಾಮ ಶೂನ್ಯವಾದ ಅಯೋಧ್ಯೆ ಭರತನಿಗೆ ಪ್ರೇತವನದಂತೆ ಕಾಣಿಸಿತು. ಏನಿದ್ದರೇನು ಅನಾಗರಿಕತಾಶ್ರೀ? ನಗರ ಅಯೋಧ್ಯೆಯೆ ಆದರೂ ರಾಮನಿಲ್ಲದ ಮೇಲೆ ಭರತನಿಗೆ ಅದು ಮಸಣಕೆಣೆಯಾಯ್ತು.

ಈ ಕಥೆ ಎಂದೋ ನಡೆದುದಾಗಿದ್ದರೆ ನಾನಿಲ್ಲಿ ಇಂದು ಅದನ್ನು ಪ್ರಸ್ತಾಪಿಸುತ್ತಿರಲಿಲ್ಲ. ಅದು ಇಂದಿಗೂ ನಡೆಯುತ್ತಿದೆ, ಬೇರೆ ರೀತಿಯಲ್ಲಿ. ಈವೊತ್ತಿಗೂ ನಮ್ಮಲ್ಲಿ ಕೆಲವು ಹಿರಿಯ ಜನರು ನವೀನನಾಗರಿಕತೆ ಕಾಡಿಗಟ್ಟಿರುವ ಆತ್ಮಶ್ರೀ ಶ್ರೀರಾಮನನ್ನು ಏಕಾಂತದಲ್ಲಿ, ಧ್ಯಾನದಲ್ಲಿ, ಗಿರಿವನಗಳಲ್ಲಿ ಸಂಧಿಸಿ, ಅವನನ್ನು ಮರಳಿಸುವುದಕ್ಕಾಗದಿದ್ದರೂ ಅವನ ಪಾದುಕೆಗಳನ್ನಾದರೂ ಹೊತ್ತು ತರುವ ಪುಣ್ಯ ಸಾಹಸಮಾಡಿ ನಗರಗಳಿಗೆ ಹಿಂತಿರುಗುತ್ತಾರೆ. ಆದರೆ ಆತ್ಮಶ್ರೀ ಶೂನ್ಯವಾದ ನಗರನಾಗರಿಕಾ ಪ್ರವೇಶ ಅವರಿಗೆ ಸಾಧ್ಯವಾಗದೆ, ಅಂದು ಭರತದೇವನು ನಂದಿಗ್ರಾಮದಲ್ಲಿ ನಿಂತಂತೆ ಇಂದು ಒಂದು ಸೇವಾಗ್ರಾಮದಲ್ಲಿಯೊ, ಒಂದು ಶಾಂತಿನಿಕೇತನದಲ್ಲಿಯೋ, ಒಂದು ಪಾಂಡಿಚರಿಯಲ್ಲಿಯೋ ಅಥವಾ ಒಂದು ಅರುಣಾಚಲದಲ್ಲಿಯೊ ತಂಗುತ್ತಾರೆ. ಮತ್ತೆ ಕೆಲವರು ಜೀವನಸಂಪಾದನೆಯ ಅನಿವಾರ್ಯಲೌಕಿಕಕ್ಕೊಳಗಾಗಿ ದೇಹದಲ್ಲಿ ನಗರಪ್ರವೇಶ ಮಾಡಿದರೂ ಆತ್ಮದಲ್ಲಿ ತಮ್ಮದೇ ಪ್ರತ್ಯೇಕವಾದ ನಂದಿಗ್ರಾಮಗಳನ್ನು ನಿರ್ಮಿಸಿಕೊಂಡು ಯಂತ್ರನಾಗರಿಕತೆಗೆ ಆತ್ಮಸಂಸ್ಕೃತಿ ಪುನರಾಗಮಿಸುವ ಮಂಗಳಮುಹೂರ್ತವನ್ನೆ ಎದುರು ನೋಡುತ್ತಾ ಹಂಬಲಿಸುತ್ತಾ ಹಾರೈಕೆಯಲ್ಲಿಯೆ ಬದುಕಿ ತೀರುತ್ತಾರೆ. ಈ ನಗಗರಗಳ ಗಡಿಬಿಡಿಯಲ್ಲಿ ಈ ಯಂತ್ರಗಳ ಕೋಲಾಹಲದಲ್ಲಿ, ಈ ನಾಗರಿಕತೆಯ ಅನಾಗರಿಕತೆಯ ಅನಾಗರಿಕ ರಜೋಮಯತೆಯಲ್ಲಿ ಅಂತಹವರ ಇರವು ಅಲಕ್ಷಿತವಾಗಿ ಅವರ ಅವುಭವವೂ ನಿರ್ಲಕ್ಷಿತವಾಗುತ್ತದೆ. ಒಂದು ವೇಳೆ ಅವರಲ್ಲಿ ಯಾರಾದರೊಬ್ಬಿಬ್ಬರು ಸುಮ್ಮನಿರಲಾರದ ಸಂಕಟದಿಂದಲೊ ಅಥವಾ ಭೂತದಯೆಯಿಂದಲೊ ಏನಾದರೂ ಎಚ್ಚರಿಕೆ ಹೇಳುವ ಅಥವಾ ಹಿತೋಪದೇಶ ಮಾಡುವ ಅನುಚಿತ ಸಾಹಸಕ್ಕೆ ಕೈಹಾಕಿದರೆ — ' ಮಹಾಜನಃ ಸ್ಮೇರಮುಖೋ ಭವಿಷ್ಯತಿ' — ನಗರ ನಿವಾಸಿಗಳ ಮುಗುಳುನಗೆಯ ತಿರಸ್ಕೃತಿಗೆ ಪಕ್ಕಾಗಬೇಕಾಗುತ್ತದೆ. ನವೀನ ನಾಗರಿಕತೆಯ ಕೆಚ್ಚಲ ಕಳ್ಳನ್ನು ಅಮೃತವೆಂದು ಭ್ರಮಿಸಿ ಹೀರುತ್ತಾ ಮೈಮರೆತಿರುವ ಅಪರಿಣತ ವತ್ಸರರಂತೂ ಅವರ ಕಾಮಧೇನು ವ್ಯಾಘ್ರಮುಖಿ ಎಂಬ ಸತ್ಯವನ್ನು ಕೇಳಿದರೆ, ಹೇಳಿದಾತನ ಮೇಲೆ ಹುಲಿವೋಗುವ ಸಂಭವವೂ ಉಂಟು. ಪರಿಸ್ಥಿತಿ ಹೀಗಿರುವಾಗ ನಾವಿಂದು ನಿಮ್ಮ ಮುಂದೆ ಹೇಳಿರುವ ವಿಷಯ ನಿಮಗೆಷ್ಟರಮಟ್ಟಿಗೆ ರುಚಿಸುತ್ತದೆಯೊ ನಾನರಿಯೆ.

೧

ಭಾಷಣದ ವಿಷಯವೇನೆಂದು ತಿಳಿಯಲು ನಿಮಗೆ ಕುತೂಹಲವಿರಬಹುದು. ನಾನೂ ಕುತೂಹಲಿ, ನನಗು ತಿಳಿದಿಲ್ಲ. ಆದರೆ ವಿಷಯದ ಹೆಸರನ್ನಲ್ಲದಿದ್ದರೂ ಅದರ ಉಸಿರನ್ನಾದರೂ ಸೂಚಿಸಬೇಕಾದ್ದು ನನ್ನ ಕರ್ತವ್ಯ.

ಯಾವುದು ಇಲ್ಲದಿದ್ದರೆ ಯಾರೂ ಉಸಿರಾಡುವುದೂ ಸಾಧ್ಯವಿಲ್ಲವೊ, ಯಾವುದು ಇರುವುದರಿಂದ ಯಾರೂ ಅದು ಇದೆ ಎಂದು ನೆನೆಯುವುದಿಲ್ಲವೊ ಅದು ಈ ದಿನದ ಭಾಷಣದ ವಿಷಯ. ಗಾಳಿ ಎಂದು ಯಾರದರೂ ಸೂಚಿಸಬಹುದು. ಆದರೆ ನಾನು ಮಾತಾಡುವುದು ವಾಯುವನ್ನು ಕುರಿತಲ್ಲ. ವಾಯುವಿಗೆ ಉಪಮೇಯ ವಾಗಬಹುದಾದುದನ್ನು ಕುರಿತು. ಗಾಳಿ ಇಲ್ಲದೆಹೋದಾಗಲೆ ಅದರ ಅಸ್ತಿತ್ವದ ಮಹತ್ತು ನಮಗೆ ಪ್ರತ್ಯಕ್ಷವಾಗುತ್ತದೆ, ಉಸಿರುಕಟ್ಟಿ ಗೋಳಾಡುವಾಗ. ಅದು ಇರುವಾಗ ನಿರಂತರವಾಗಿ ಉಸಿರೆಳೆದುಕೊಂಡು ಬದುಕುತ್ತೇವೆಯಾದರೂ ಅದನ್ನು ಸದಾ ನಮ್ಮ ಪ್ರಜ್ಞೆಯಲ್ಲಿಟ್ಟಿಕೊಂಡು ನೆನೆಯುತ್ತಿರುವುದಿಲ್ಲ. ಊಟ, ತಿಂಡಿ, ಉಡುಗೆ, ತೊಡುಗೆ ಮೊದಲಾದವು ನಮ್ಮ ಬದುಕಿಗೆ ಎಷ್ಟು ಅವಶ್ಯಕ ಎಂದು ಭಾವಿಸಿ ಅದಕ್ಕಾಗಿ ಹೇಗೆ ಹೋರಾಡಿ ದುಡಿಯುತ್ತೇವೆಯೊ ಹಾಗೆ, ಸಾಧಾರಣವಾಗಿ, ನಾವು ಗಾಳಿಗಾಗಿ ದುಡಿದು ಹೋರಾಡುವುದಿಲ್ಲ. ಅದಕ್ಕಾಗಿ ಅಂಗಡಿ ತೆರೆಯುವುದಿಲ್ಲ ರೇಷ್ ಕಾರ್ಡಿನಲ್ಲಿ ಅದಕ್ಕೆ ಸ್ಥಾನವಿಲ್ಲ. ಆದರೂ ಅದು ನಮ್ಮ ಬದುಕಿಗೆ ಅತ್ಯಂತಾವಶ್ಯಕ ಎಂಬುದನ್ನು ಬಲ್ಲವರು ಬಲ್ಲರು. ಅದು ಇಲ್ಲದಾಗುವ ಮಾತಿರಲಿ, ಕೊಂಚ ಕಲುಷಿತವಾದರೂ ಆರೋಗ್ಯ ಕೆಟ್ಟು ಬದುಕು ದುಃಖಮಯವಾಗುತ್ತದೆ.

ಪ್ರಾಚೀನರು ವಾಯುವನ್ನು ಬ್ರಹ್ಮ ಎಂದು ಆರಾಧಿಸಿದ್ದಾರೆ. "ನಮಸ್ತೇ ವಾಯೋ, ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ. ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ." ವಾಯು ನಮ್ಮ ಒಡಲ ಬಾಳಿಗೆ ಹೇಗೆ ಆವಶ್ಯಕವೊ ಹಾಗೆಯೆ ನಮ್ಮ ಅಂತರ್ಜೀವನಕ್ಕೆ ಆಧಾರವೂ ಆವಶ್ಯಕವೂ ಆದ ಒಂದು ತತ್ವವಿದೆ. ಆ ಚೈತನ್ಯವನ್ನು ಆತ್ಮ, ಅಂತರಾತ್ಮ , ಪರಮಾತ್ಮ , ದೇವರು, ಬ್ರಹ್ಮ ಎಂದು ನಾನಾ ವಿಧವಾಗಿ ಕರೆದಿದ್ದಾರೆ. ಆದರ ಅನುಸಂಧಾನದಲ್ಲಿ ಬದುಕಿನ ಪರಮ ಪುರುಷಾರ್ಥವಿದೆಂದೂ ಆದರ ಸಾಕ್ಷಾತ್ಕಾರವೆ ಪರಮ ಸುಖಶಾಂತಿದಾಯಕವೆಂದೂ ಸರ್ವಜೀವಿತದ ಸರ್ವೋತ್ಕೃಷ್ಟವಾದ ಚರಮ ಸಿದ್ಧಿಯೆಂದೂ ಸಾರಿದ್ದಾರೆ.

ಯಾವ ಪುರುಷಾರ್ಥದ ಅನುಸಂಧಾನದ ಜೀವನದ ಸಕಲ ಕರ್ಮಗಳೂ, ಇದು ಸಣ್ಣದು ಇದು ದೊಡ್ಡದು, ಇದು ಕೀಳು ಇದು ಮೇಲು ಎಂಬ ಭೇದವಿಲ್ಲದೆ ಎಲ್ಲವೂ ಉತ್ತಮ ಪುರುಷಾರ್ಥಗಳಾಗಿ ಪರಿಣಮಿಸುತ್ತವೆಯೊ ಆ ಪುರುಷಾರ್ಥದ ಅನುಸಂಧಾನಕ್ಕೆ ಇಂದಿನ ವಿದ್ಯಾರ್ಥಿ ಜೀವನದಲ್ಲಿ ಯಾವ ಸ್ಥಾನ ದೊರೆತಿದೆ? ವಿದ್ಯಾರ್ಥಿ ಜೀವನವನ್ನು ರೂಪುಗೊಳಿಸುತ್ತಿರುವ ಇಂದಿನ ವಿದ್ಯಾಸಂಸ್ಥೆಗಳಲ್ಲಿ ಅದಕ್ಕೇನಾದರೂ ಗೌರವಸ್ಥಾನವಿದೆಯೆ? ಆ ವಿದ್ಯಾಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಸಂಕುಲದ ಹೃದಯಪಥಕ್ಕೆ ಮಾರ್ಗದರ್ಶಿಗಳಾಗಿ, ಮನೋರಥಕ್ಕೆ ಸಾರಥಿಗಳಾಗಿ ಶ್ರಮಿಸುತ್ತಿರುವವರ ಬದುಕಿನಲ್ಲಿ ಅದಕ್ಕೆ ಯಾವ ಪುರಸ್ಕಾರವಿದೆ?

ಆತ್ಮಾನುಸಂಧಾನದ ಪ್ರಶ್ನೆ ಮತಸಂಸ್ಥೆಗಳಿಗೆ ಸಂಬಂಧಪಟ್ಟುದೆಂದೂ, ನಾಗರಿಕ ಜೀವನಕ್ಕೆ ಬೇಕಾಗುವ ಬುದ್ಧಿಪರಿಷ್ಕರಣ ಮತ್ತು ಭವ ಸಂಸ್ಕರಣ ಇವು ಮಾತ್ರವೆ ಸೇರಿದುವೆಂದೂ ವಿದ್ಯಾಸಂಸ್ಥೆಗಳು ವಿದ್ಯಾರ್ಥಿಗಳ ಧರ್ಮಸಾಧನೆಯ ಗೋಜಿಗೆ ಹೋಗುವುದಿಲ್ಲ. ಹೆಚ್ಚೆಂದರೆ ನೀತಿಶಾಸ್ತ್ರ, ತತ್ವಶಾಸ್ತ್ರ, ಮತಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ ಎಂದು ಮೊದಲಾಗಿ ಅವುಗಳನ್ನು ಶಾಸ್ತ್ರೀಯ ದೃಷ್ಟಿಯಿಂದಲೂ ವೈಜ್ಞಾನಿಕವಾಗಿಯೂ ಅಧ್ಯಯನಮಾಡಲು ಅವಕಾಶ ಕಲ್ಪಿಸಿಕೊಡಬಹುದು. ಹಾಗೆಯೆ ಕಲ್ಪಿಸಿಯೂ ಕೊಟ್ಟಿವೆ. ನಮ್ಮ ದೇಶದ ಇಂದಿನ ರಾಜಕೀಯ ಸ್ಥಿತಿಯನ್ನೂ ಮತವೈಷಮ್ಯದ ಗೊಂದಲವನ್ನೂ ಗಮನಿಸಿದರೆ ವಿದ್ಯಾಸಂಸ್ಥೆಗಳು ಅದಕ್ಕಿಂತಲೂ ಹೆಚ್ಚು

ಮುಂದುವರಿಯುವುದು ಸಾಧ್ಯವಿಲ್ಲವೆಂದೆ ತೋರುತ್ತದೆ. ಅಂತಹ ಉದಾತ್ತ ಧ್ಯೇಯಕ್ಕೆ ಔಪಚಾರಿಕವಾಗಿಯಾದರೂ ಸೇವೆ ಸಲ್ಲಿಸುತ್ತೇವೆ ಎಂದು ವಿದ್ಯಾಸಂಸ್ಥೆಯ ಅಧಿಕಾರಿಗಳು ಮಾಡಿದ ಪ್ರಯತ್ನ ವಿವಿಧ ಪಂಗಡ ವಿದ್ಯಾರ್ಥಿಗಳಲ್ಲಿ ಸಮರಸವನ್ನುಂಟುಮಾಡುವ ಬದಲು ವಿರಸವನ್ನೆ ಉದ್ರೇಕಿಸಿರುವ ಎಷ್ಟೋ ಪ್ರಸಂಗಗಳು ಈಗಾಗಲೆ ಅನೇಕರ ಅನುಭವಕ್ಕೆ ಬಂದಿವೆ.

ಇಷ್ಟವಿದ್ದರೂ ವಿದ್ಯಾಸಂಸ್ಥೆಗಳಿಗೆ ಕಷ್ಟಸಾಧ್ಯವಾಗಿ ತೋರುತ್ತಿರುವ ಆ ಕಾರ್ಯವನ್ನು ಮತಸಂಸ್ಥೆಗಳಾದರೂ ಕೈಕೊಂಡು ವಿದ್ಯಾರ್ಥಿಜೀವನವನ್ನು ತೋಜೋಮಯವನ್ನಾಗಿ ಮಾಡುತ್ತಿವೆ? ದೇವಸ್ಥಾನಗಳಿವೆ, ಮಸೀದಿಗಳಿವೆ, ಚರ್ಚುಗಳಿವೆ, ಮಠಗಳಿವೆ. ವಿದ್ಯಾರ್ಥಿಗಳು ತಮ್ಮ ಆತ್ಮಾನುಸಂಧಾನಕ್ಕೂ ಧರ್ಮಸಾಧನೆಗೂ ಅದಕ್ಕೇ ಮೀಸಲಾಗಿರುವ ಆ ಮತಸಂಸ್ಥೆಗಳಿಗೇಕೆ ಹೋಗಬಾರದು, ರೋಗ ಬಂದರೆ ಆಸ್ಪತ್ರೆಗೆ ಹೋಗುವಂತೆ? ಆಸ್ಪತ್ರೆಯನ್ನು ಕಾಲೇಜಿನ ಅಂಗವನ್ನಾಗಿ ಮಾಡಲು ಹೇಗೆ ಸಾಧ್ಯವಿಲ್ಲವೊ ಹಾಗೆಯೆ ಚರ್ಚು, ಮಸೀದಿ, ದೇವಾಲಯಗಳನ್ನೂ ಕಾಲೇಜಿನ ಅಂಗಳದಲ್ಲಿ ಕಟ್ಟಲು ಸಾಧ್ಯವಿಲ್ಲ. ಆಸ್ಪತ್ರೆಯನ್ನಾದರೂ ಕಾಲೇಜಿನ ಅಂಗವನ್ನಾಗಿ ಮಾಡಲು ಸಾಧ್ಯವಾಗಬಹುದೋ ಏನೊ, ಮತಸಂಸ್ಥೆಗಳನ್ನು ಹಾಗೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ಮಲೇರಿಯಾ ಕಾಯಿಲೆ ಮುಸಲ್ಮಾನನಿಗೆ ಬೇರೆ, ಹಿಂದುವಿಗೆ ಬೇರೆ ಅಲ್ಲ. ನಿಜವಾಗಿ ನೋಡಿದರೆ ದೇವರೂ ಹಾಗೆಯೆ. ಆದರೂ ಆ ವಿಚಾರದಲ್ಲಿ ಅಜ್ಞಾನವೂ ವೈರಭಾವವೂ ಇರುವ ತನಕ ಪ್ರತ್ಯೇಕತೆ ತೊಲಗುವುದಿಲ್ಲ. ಜ್ಞಾನದ ವಿಚಾರದಲ್ಲಿ ಐಕ್ಯಭಾವವನ್ನೆ ಪ್ರಮುಖ ಲಕ್ಷ್ಯವನ್ನಾಗಿ ಇಟ್ಟುಕೊಂಡಿರುವ ವಿದ್ಯಾಸಂಸ್ಥೆಗಳಿಗೆ ಮತಸಂಸ್ಥೆಗಳಲ್ಲಿರುವ ಪ್ರತ್ಯೇಕತೆಯ ಮನೋಧರ್ಮ ಹೊಂದುವುದಿಲ್ಲ.

ಹಾಗಾದರೆ ಈಗಿರುವ ಬೇರೆಬೇರೆ ಮತಸಂಸ್ಥೆಗಳಿಗೇ ಆ ಕಾರ್ಯವನ್ನು ಬಿಟ್ಟುಬಿಡುವದೇ ಹೇಗೆ?

ವಿದ್ಯಾರ್ಥಿಗಳು ಆ ಮತಸಂಸ್ಥೆಗಳ ಪ್ರಯೋಜನವನ್ನು ಎಷ್ಟರಮಟ್ಟಿಗೆ ಪಡೆಯುತ್ತಿದ್ದಾರೆ? ಪಡೆಯದಿದ್ದರೆ ಏಕೆ ಪಡೆಯುತ್ತಿಲ್ಲ? ಯಾವ ಕಾರಣಗಳಿಂದ ಅವರು ಆ ಸಂಸ್ಥಗಳಿಗೆ ವಿಮುಖರಾಗಿದ್ದಾರೆ? ಎಂಬ ಗಾಢಪ್ರಶ್ನೆಗಳು ಸದ್ಯಕ್ಕೆ ಒತ್ತಟ್ಟಿಗಿರಲಿ, ಅವರೆಲ್ಲರೂ ಆ ಸಂಸ್ಥೆಗಳಿಗೆ ಹೋಗುತ್ತಿದ್ದಾರೆಂದೇ ಇಟ್ಟುಕೊಂಡರೂ ಅಲ್ಲಿ ಅವರಿಗೆ ದೊರೆಯುವ ಅರಿವಿಗೂ ವಿದ್ಯಾಸಂಸ್ಥೆಗಳಲ್ಲಿ ಲಭಿಸುವ ಸಕ್ರಮ ಮತ್ತು ಪ್ರಾಯೋಗಿಕ ಜ್ಞಾನಕ್ಕೂ ಏನಾದರೂ ಸಮನ್ವಯವಿರುತ್ತದೆಯೆ? ಒಂದು, ಬುದ್ಧಿಯ ವೈಶಾಲ್ಯವನ್ನು ಬೋಧಿಸಿದರೆ ಇನ್ನೊಂದು, ಹೃದಯದ ಸಂಕುಚಿತ ಭಾವವನ್ನೆ ಬೆಳೆಸುತ್ತದೆ. ಈ ಹಿಗ್ಗಲು ಕುಗ್ಗಲಾಟಕ್ಕೆ ಸಿಕ್ಕಿ ವಿದ್ಯಾರ್ಥಿಯ ಮನಸ್ಸು ಏನಾಗಬೇಕು? ತನ್ನ ವ್ಯಕ್ತಿತ್ವ ಬಿರಿಯದಂತೆ ನೋಡಿಕೊಳ್ಳಬೇಕಾದರೆ ಅವನು ಅದನ್ನು ತಿರಸ್ಕರಿಸಬೇಕು ಇಲ್ಲವೆ, ಬಹುಜನರು ಮಾಡುತ್ತಿರುವಂತೆ, ಒಂದಕ್ಕೊಂದು ಹೊಂದದ ಎರಡನ್ನೂ ಹೇಗೋ ಹೊತ್ತುಕೊಂಡು ಸೀಳುಬಾಳು ಬಾಳಬೇಕು.

ಆದರೆ ಸಮನ್ವಯದೃಷ್ಟಿಯ ದರ್ಶನ ಜ್ಯೋತಿಯಿಂದ ದೀಪ್ತವಾದ ವ್ಯಕ್ತಿತ್ವದ ಪರಿಪೂರ್ಣತೆ ಯಾರ ಅಪೇಕ್ಷೆಯೂ ಆದರ್ಶವೂ ಆಗಿರುತ್ತದೆಯೋ ಅಂತಹವರಿಗೆ ಸೀಳುಬಾಳು ಸಂಕಟಕರವಾಗುತ್ತದೆ. ಒಂದು ವೇಳೆ ತಾರುಣ್ಯದ ನವೋಲ್ಲಾಸಭರದಲ್ಲಿಯೂ ಯೌವನದ ಬಹಿರ್ಮುಖ ಆವೇಗದಲ್ಲಿಯೂ ಆ ಅತೃಪ್ತಿ ಚಿತ್ತದ ತಳಾತಳಕ್ಕೆ ಮುಳುಗಿ

ಗುಪ್ತವಾಗಿದ್ದರೂ ತರುವಾಯವಾದರೂ ಅದರ ಸುಪ್ತಿಗೆ ಭಂಗಬರದಿರವುದಿಲ್ಲ. ಆಗ ಜೀವನದಲ್ಲಿ ತಲೆದೋರುವ ಜುಗುಪ್ಸೆ, ಅಶಾಂತಿ, ನಿರಾಶೆ, ಅಸಾರ್ಥಕತೆ ಇವು ಅಸಹನೀಯವಾಗುತ್ತವೆ. ಅದರಿಂದ ಪಾರಾಗುವುದಕ್ಕಾಗಿ ಮನುಷ್ಯ ಎಂತಹ ಮೌಢ್ಯವನ್ನಾದರೂ ಒಪ್ಪಿ ಅಪ್ಪಿಕೊಳ್ಳುತ್ತಾನೆ. ವಿವೇಚನೆಗೆ ಆಗ ಅವಕಾಶವಿರುವುದಿಲ್ಲ. ಅಂತಹ ಸ್ಥಿತಿ ಅತ್ಯಂತ ಶೋಚನೀಯ. ಅದರಿಂದ ಪಾರಾದವರು ಇತರರನ್ನೂ ಆ ಮುಕ್ತಿಯ ಶಾಂತಿಗೆ ಒಯ್ಯಬೇಕೆಂದು ಹಂಬಲಿಸುತ್ತಾರೆ:

ದುರ್ಜನಃ ಸಜ್ಜನೋ ಭೂಯಾತ್ ಸಜ್ಜನಃ ಶಾಂತಮಾಪ್ನುಯಾತ್
ಶಾಂತೋ ಮುಚ್ಯೇತ ಬಂಧೇಭ್ಯೋ ಮುಕ್ತಶ್ಚಾನ್ಯಾನ್ ವಿಮೋಚಯೇತ್ ॥

ದುರ್ಜನರು ಸಜ್ಜನರಾಗಲಿ, ಸಜ್ಜನರಿಗೆ ಶಾಂತಿ ಲಭಿಸಲಿ, ಶಾಂತರು ಬಂಧಮುಕ್ತರಾಗಲಿ, ಮುಕ್ತರು ಇತರರನ್ನೂ ಮುಕ್ತರನ್ನಾಗಿ ಮಾಡಲಿ.

೩

ವಿದ್ಯಾರ್ಥಿಗಳಿಗೇಕೆ ಈ ಆತ್ಮಾನುಸಂಧಾನದ ಕೋಟಲೆ ಎಂದು ಯಾರಾದರೂ ಪ್ರಶ್ನಿಸಬಹುದು. ಆತ್ಮಶ್ರೀಯ ಪ್ರಶ್ನೆ ಬಾಳಿನ ತುದಿಗೆ ಸೇರಿದುದೆಂದು ಕೆಲವರ ಅಭಿಪ್ರಾಯ. ಅದನ್ನು ಬಾಳಿನ ಮೊದಲಿಗೆ ವರ್ಗಾಯಿಸಿದರೆ ಅನರ್ಥಕರವಾಗಿ ಅನಾವಶ್ಯಕವಾದ ಕ್ಲೇಶಕ್ಕೆ ಕಾರಣವಾಗಬಹುದೆಂದು ಹಲವರ ಭಯ. ಅಂಗ ವ್ಯಾಯಾಮ ಸಾಧನೆಯನ್ನು ಎಲ್ಲರಿಗೂ ಬೋಧಿಸಿದರೆ ಎಲ್ಲರೂ ಪೈಲ್ವಾನರಾಗಿ ಉಳಿದ ಜೀವನ ವ್ಯಾಪಾರಗಳಿಗೆ ಜನರಿಲ್ಲದೆ ಹೋಗಬಹುದೆಂಬ ಭಯದಂತೆ ಈ ಭಯವೂ ನಗೆಗೆ ಈಡಾಗುತ್ತದೆ. ಎಲ್ಲರ ವಿಷಯದಲ್ಲಿಯೂ ಅಂಗಸಾಧನೆಯ ಗುರಿ ಅಂಗಸಾಧನೆಯೇ ಹೇಗೆ ಆಗುವುದಿಲ್ಲವೋ ಹಾಗೆಯೆ ಅಂಗಸಾಧನೆಯೇ ಪರಮ ಗುರಿಯಾಗತಕ್ಕವರು ಎಲ್ಲಿಯೋ ಅತಿಸ್ವಲ್ಪ ಮಂದಿ. ಎಲ್ಲರೂ ಪರಮಹಂಸರಾಗಿ ಎಲ್ಲರೂ ಅರವಿಂದ ಯೋಗಿಗಳಾಗಿ, ಎಲ್ಲರೂ ರಮಣಮಹರ್ಷಿಗಳಾಗಿ, ಎಲ್ಲರೂ ಮಹಾತ್ಮರಾಗಿ ಎಂದು ಬೋಧಿಸುವುದಲ್ಲ ಇಂದಿನ ಉಪನ್ಯಾಸದ ಉದ್ದೇಶ; ಅಂತಹ ಬೋಧನೆ ಇಲ್ಲಿ ಸಂಪೂರ್ಣವಾಗಿ. ನಿಷ್ಪ್ರಯೋಜಕ ಎಂಬುದನ್ನೂ ನಾನು ಬಲ್ಲೆ. ಯಾರ ಬೋಧನೆಯಿಂದಲೂ ಅಂತಹ ಮಹದ್ವ್ಯಕ್ತಿಗಳ ನಿರ್ಮಾಣವಾಗಲಾರದೆಂಬುದೂ ಸ್ವವಿದಿತ. ಅಂಗಸಾಧನೆ ಮಾಡಿದವರೆಲ್ಲ. ಗರಡಿಗಳನ್ನು ತೆರೆದು ಗರುಡಿಯಾಚಾರ್ಯ ರಾಗಬೇಕೆಂಬುದಲ್ಲ. ಅಂಗಸಾಧನೆಯನ್ನು ಬೋಧಿಸುವುದರ ಉದ್ದೇಶ. ಅಂಗಸಾಧನೆಯಿಂದ ಉಂಟಾಗುವ ದೇಹದಾರ್ಢ್ಯ ಅದನ್ನು ಸಂಪಾದಿಸಿದ ವ್ಯಕ್ತಿಗೆ ಜೀವನದ ಸರ್ವ ವ್ಯಾಪಾರಗಳಲ್ಲಿಯೂ ಸಹಾಯವಾಗುತ್ತದೆ. ಸತ್ಯಾಗ್ರದಲ್ಲಾಗಲಿ ಧನಸಂಗ್ರದಲ್ಲಾಗಲಿ ಅಂಗಸಾಧನೆಯಿಲ್ಲದ ದೃಢಕಾಯನಿಗಿಂತ ಅಂಗಸಾಧನೆಯಿಂದ ದೃಢಕಾಯನಾದವನು ಯಾವಾಗಲೂ ಮೇಲುಗೈಯಾಗುತ್ತಾನೆ. ಆತ್ಮಸಾಧನೆಯ ವಿಚಾರವೂ ಅಂಥಾದ್ದೆ. ಯಾವಾತನು ಅಂತಸ್ಸಾಧನೆಯಿಂದ ಆತ್ಮಶ್ರೀ ಸಮನ್ವಿತನಾಗಿರುತ್ತಾನೆಯೋ ಅಂಥವನು ಬುದ್ಧಿಯಲ್ಲಿ, ಭಾವದಲ್ಲಿ ದೇಹದಲ್ಲಿ, ಜೀವನ ಸಂಗ್ರಾಮದಲ್ಲಿ ಆತ್ಮಶ್ರೀ ವಿಹೀನನಿಗಿಂತಲೂ ನಿಸ್ಸಂದೇಹವಾಗಿ ಮೇಲುಗೈಯಾಗುತ್ತಾನೆ. ಸೋಲು, ನಿರಾಶೆ, ಅವಮಾನ ಮೊದಲಾದ ದುರಂತ ಸನ್ನಿವೇಶಗಳು ಒದಗಿದಾಗಲೂ ಅವನ ಶಾಂತಿ, ಅವನ ಧೈರ್ಯ, ಅವನ ನಿರ್ಭರತೆ ಇವು ಅಂತಹವನನ್ನು ಕೈಬಿಡದೆ ಉದ್ಧಾರವಾಡುತ್ತವೆ. ಇತರರಂತೆ ಅವನು ನಿರ್ವಿಣ್ಣತೆಗೆ ತುತ್ತಾಗುವುದಿಲ್ಲ, ಮೋಘಕರ್ಮನಾಗುವುದಿಲ್ಲ,

ನಷ್ಟಾತ್ಮನಾಗುವುದಿಲ್ಲ. ಆದ್ದರಿಂದಲೆ ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳನ್ನು ಈಗಿರುವುದಕ್ಕಿಂತಲೂ ನೂರುಮಡಿ ಸಾವಿರಮಡಿ ತೋಜೋಮಯವಾಗಿಯೂ ಆಶಾಪೂರ್ಣವಾಗಿಯೂ ಮಾಡಿ ಅವೆಲ್ಲವುಗಳ ಸರ್ವತೋಮುಖವಾದ ಏಳಿಗೆಗೆ ಪ್ರಚೋದಕಶಕ್ತಿಯಾಗುವ ಆತ್ಮಶ್ರೀಯ ಅನುಸಂಧಾನವು ಉದ್ಧಾರಾಕಾಂಕ್ಷಿಗಳಾದ ವಿದ್ಯಾರ್ಥಿಗಳೆಲ್ಲರಿಗೂ ಅಮೃತಪಥ್ಯ. ವಿದ್ಯೆ ಆತ್ಮಶ್ರೀಯಿಂದ ಪ್ರದೀಪ್ತವಾದರೆ ಅದು ನಿಜವಾಗಿಯೂ ವಿದ್ಯೆಯಾಗುತ್ತದೆ; ಇಲ್ಲದಿದ್ದರೆ, ಅದು ಎಷ್ಟು ಅಕ್ಷರಗಳ ಪದವಿಗೆ ಬೇಕಾದರೂ ಏರಿರಲಿ, 'ಅವಿದ್ಯೆ' ಎನಿಸಿಕೊಳ್ಳುತ್ತದೆ.

ನಾವೀಗ ವಿದ್ಯೆ ಎಂದು ವ್ಯವಹರಿಸುತ್ತಿರುವ ವೈಷಯಿಕವಾದ ಜ್ಞಾನ ಭಾಗಗಳನ್ನೆಲ್ಲ ಉಪನಿಷತ್ತಿನ ದರ್ಶನ 'ಅವಿದ್ಯೆ' ಎಂದು ಪರಿಗಣಿಸುತ್ತದೆ. ಈ ವಿದ್ಯೆ ಎಷ್ಟಿದ್ದರೂ ತಮಸ್ಸಿನ ಚಮತ್ಕಾರವೆ ಹೊರತು ಜ್ಯೋತಿಯ ಆವಿಷ್ಕಾರವಲ್ಲ ಎಂಬುದು ಆ ಋಷಿದೃಷ್ಟಿ. 'ವಿದ್ಯೆ' ಎಂದು ಹೆಸರು ಪಡೆದಿರುವ 'ಅವಿದ್ಯೆ'ಯಲ್ಲಿ ಪಾರಂಗತರಾದ ವಿದ್ವಾಂಸರುಗಳಿಂದ ವಿದ್ಯಾರ್ಥಿಗೆ ಆತ್ಮ ಜ್ಯೋತಿಯ ಆವಿಷ್ಕಾರವಾಗಲು ಸಾಧ್ಯವಿಲ್ಲ. ಅಂತಹ ವಿದ್ವಾಂಸರು ವಿಪುಲ ಧನಾರ್ಜನಾ ಸಾಮರ್ಥ್ಯದಿಂದ ಜನಸಾಮಾನ್ಯ ಮಾನ್ಯರಾಗಿದ್ದರೂ ಅವರು ಉಪನಿಷತ್ಕಾರರ ದೃಷ್ಟಿಯಲ್ಲಿ, ಅವಿದ್ಯಾ ವಿದ್ವಾಂಸರೇ ಹೊರತು ವಿದ್ಯಾಗುರುಗಳಾಗಲಾರರು. ಆತ್ಮ ಜ್ಞಾನದ ದೃಷ್ಟಿಯಿಂದ ಅವರೂ ಕುರುಡರು. ಬೆಳಕಿನ ಅವಶ್ಯಕತೆ ಅವರಿಗೇ ಇರುವಾಗ ಅವರು ವಿದ್ಯಾರ್ಥಿಗಳಿಗೆ ಜ್ಯೋತಿರ್ದಾನ ಮಾಡುತ್ತಾರೆಂದರೆ, ಉಪನಿಷತ್ತು ಹೇಳುತ್ತದೆ:

ಅವಿದ್ಯಾಯಾಮಂತರೇ ವರ್ತಮಾನಾಃ
ಸ್ವಯಂ ಧೀರಾಃ ಪಂಡಿತಂ ಮನ್ಯಮನಾಃ ।
ಜಂಘನ್ಯ ಮಾನಾಃ ಪರಿಯಂತಿ ಮೂಢಾ
ಆಂಧೇನೈವ ನೀಯಮಾನಾ ಯಥಾಂಧಾಃ ॥

ಅವಿದ್ಯೆಯೊಳಗಿದ್ದೂ ತಾವು ಬದ್ಧಿವಂತರೆಂದೂ ಪಂಡಿತರೆಂದೂ ಭ್ರಮಿಸಿ, ಕುರುಡರನ್ನು ನಡೆಸುವ ಕುರುಡರಂತೆ, ಮೂಢರು ತೊಳಲುತ್ತಾರೆ.

ಆದರೂ ಉಪನಿಷತ್ತಿನ ದರ್ಶನದಲ್ಲಿ 'ಅವಿದ್ಯೆ'ಯ ಅವಹೇಳನವಿಲ್ಲ. ಆತ್ಮಜ್ಞಾದಂತೆ ಉಳಿದ ಎಲ್ಲ ಲೌಕಿಕ ವಿದ್ಯಾಸಮೂಹಗಳೂ ಲೋಕದ ಬದುಕಿಗೆ ಅಗತ್ಯ. ಆಧ್ಯಾತ್ಮ ವಿದ್ಯೆಯಂತೆಯೇ ಲೌಕಿಕ ವಿದ್ಯೆಗಳೂ ಬೇಕು.

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

ವಿದ್ಯೆ ಅವಿದ್ಯೆಗಳೆರಡನ್ನೂ ತಿಳಿಯುವಾತನು ಅವಿದ್ಯೆಯಿಂದ ಮೃತ್ಯುವನ್ನು ಉತ್ತರಿಸಿ ವಿದ್ಯಯಿಂದ ಅಮೃತವನ್ನು ಪಡೆಯುತ್ತಾನೆ.

ಅಮೃತವನ್ನು ಪಡೆಯುವುದಕ್ಕೆ 'ವಿದ್ಯೆ' ಬೇಕಾಗುವಂತೆ ಮೃತ್ಯುವನ್ನು ದಾಡುವುದಕ್ಕೆ 'ಅವಿದ್ಯೆ' ಬೇಕು. ಇನ್ನೂ ಒಂದು ಹೆಜ್ಜೆ ಮುಂದುವರಿದು ಉಪನಿಷತ್ತು ಎಚ್ಚರಿಕೆ ಹೇಳುತ್ತದೆ.

ಅಂಧಂತಮಃ ಪ್ರವಿಶನ್ತಿ ಯೇऽವಿದ್ಯಾಮುಪಾಸತೇ ॥
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ ॥

ಅವಿದ್ಯೆಯನ್ನೆ ಉಪಾಸಿಸುವವರು ಕುರುಡುಗತ್ತಲೆಗಿಳಿದರೆ ವಿದ್ಯೆಯಲ್ಲಿಯೆ ಮಾತ್ರ ರತರಾದವರು ಅದಕ್ಕಿಂತಲೂ ಹೆಚ್ಚು ಎಂಬಂತಹ ಕಗ್ಗತ್ತಲೆಗಿಳಿಯುತ್ತಾರೆ. ಆದ್ದರಿಂದ ಅವಿದ್ಯಾ ವಿದ್ವಾಂಸರುಗಳೂ ಪೃಥಿವಿಯ ಒಳ್‌ಬಾಳಿಗೆ ಆವಶ್ಯಕ. ಅವರ ವಿಚಾರದಲ್ಲಿ ಅಲ್ಲಿ ಒಂದಿನಿತೂ ಅಸಡ್ಡೆಯಿಲ್ಲ, ಎಳ್ಳನಿತೂ ಅವಜ್ಞೆಯಿಲ್ಲ. ಆದರೆ ಆತ್ಮಶ್ರೀ ಯಾರ ಬಯಕೆಯೋ ಅವರಿಗೆ ಆ ದಿಕ್ಕಿನಿಂದ ಬೆಳಕು ಲಭಿಸುವುದಿಲ್ಲ.

ಇತ್ತ ವಿದ್ಯಾಸಂಸ್ಥೆಗಳಲ್ಲಿಯೂ ಆತ್ಮಶ್ರೀ ಸಾಧನೆಗೆ ಅವಕಾಶವಿಲ್ಲ. ಅತ್ತ ಮತ ಸಂಸ್ಥೆಗಳಲ್ಲಿಯೂ ಅದರ ಅವಿಕೃತ ಮಾರ್ಗವಿಲ್ಲ. ಹೀಗಿರುವಾಗ ಆತ್ಮಶ್ರೀ ಸಾಧನಾಕಾಂಕ್ಷಿಯಾದ ವಿದ್ಯಾರ್ಥಿ ಏನು ಮಾಡಬೇಕು? ಎತ್ತ ತಿರುಗಬೇಕು?

ತಾನೆಯೆ ಪ್ರಯತ್ನಿಸಬೇಕು. ತನ್ನೊಳಗೆಯೆ ತಿರುಗಬೇಕು. ಅನ್ಯರಿಂದಾಗಲಿ ಅನ್ಯವಿಧಾನಗಳಿಂದಾಗಲಿ ದೊರಕೊಳ್ಳದು ಆತ್ಮದ ಅಂತಃಶ್ರೀ.

೪

ತಾರುಣ್ಯಕ್ಕೆ ಬಹಿರ್ಮುಖತೆಯೆ ಸಹಜ ಪ್ರಕೃತಿ; ಅಂತರ್ಮುಖತೆ ಪ್ರಯತ್ನದಿಂದ ಮಾತ್ರ ಸಾಧ್ಯ. ಅಂಗಾಂಗಗಳನ್ನು ಚಲಿಸಿ ಬೆವರು ಸುರಿಸಿ ಚೆಂಡಾಡುವುದು ಅದಕ್ಕೆ ಸುಲಭ ಮತ್ತು ಸಂತೋಷಕರ; ನಿಶ್ಚಲವಾಗಿ ಕುಳಿತು ಧ್ಯಾನ ಮಾಡುವುದು ಕಠಿನ ಮತ್ತು ಕ್ಲೇಶಕರ, ಮೊದಲನೆಯದು ರಜಸ್ಸು, ಎರಡನೆಯದು ತಪಸ್ಸು. ತಮಸ್ಸಿಗಿಂತ ರಜಸ್ಸು ಮೇಲು; ಆದರೆ ತಪಸ್ಸು ಸರ್ವೋತ್ತಮ. ತಪಸ್ಸಿಲ್ಲದೆ ಆತ್ಮಶ್ರೀ ಅಲಭ್ಯ. ಯಾವ ವಿದ್ಯಾರ್ಥಿ ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳನ್ನು ಅತ್ಯುಜ್ವಲವಾಗಿ ಪಡೆಯಬೇಕೆಂದು ಹಾರೈಸುತ್ತಾನೆಯೊ ಆತನು ಇತರ ಎಲ್ಲ ಶ್ರೀಗಳಿಗೂ ಶ್ರೀಯಾಗಿರುವ ಆತ್ಮಶ್ರೀಯನ್ನು ಸಾಧಿಸಲೇಬೇಕು. ಎಂದರೆ ಆತನೂ ತಪಸ್ವಿಯಾಗಬೇಕು.

ಆತ್ಮಶ್ರೀ ಸಾಧಕನಾದ ವಿದ್ಯಾರ್ಥಿಯೂ ತಪಸ್ವಿ. ಆತನ ತಪಸ್ಸು ತಲೆ ಕೆಳಗಾಗಿ ನಿಲ್ಲುವುದರಲ್ಲಿಲ್ಲ; ಬರಿಯ ದೇಹದಂಡನೆಯಲ್ಲಿಲ್ಲ; ಜೀವನದ ಮುಗ್ಧ ಸುಖಗಳ ತ್ಯಾಗದಲ್ಲಾಗಲಿ ಸರಳ ಸೌಂದರ್ಯಗಳ ವಿಸರ್ಜನೆಯಲ್ಲಾಗಲಿ ಇಲ್ಲ. ಆತನ ತಪಸ್ಸು ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳ ತಿರಸ್ಕಾರದ ರೂಪ ತಾಳುವ ಬಣಗು ಚಿತ್ತವೃತ್ತಿಯಲ್ಲ. ಆತನ ತಪಸ್ಸು ಇರುವುದು ಅಧ್ಯಯನದಲ್ಲಿ, ಏಕಾಗ್ರತೆಯಲ್ಲಿ, ಸಂಯಮದಲ್ಲಿ, ದ್ಯಾನದಲ್ಲಿ, ಆತ್ಮಾನುಸಂಧಾನದಲ್ಲಿ.

ಮನುಷ್ಯ ಸಂಗವೂ ಶಬ್ದಮಯ ಸಾಮಾಜಿಕ ಜೀವನವೂ ಓಕರಿಕೆ ಹಿಡಿಸುವಷ್ಟು ಯಥೇಚ್ಚವಾಗಿರುವ ಈ ಕೋಲಾಹಲಪೂರ್ಣವಾದ ನಗರಕ್ಕೆ ವಿದ್ಯಾರ್ಜನೆಗಾಗಿ ಬಂದಿರುವ ಎಳೆಯ ಗೆಳೆಯರ ಮುಮದೆ ಏಕಾಂತವನ್ನೂ ಮೌನವನ್ನೂ ಕುರಿತು ಒಂದೆರಡು ಪ್ರಶಂಸೆಯ ಮಾತುಗಳನ್ನಾಡಿದರೆ ಅವರನ್ನೆಲ್ಲ ಕೆಲಸಕ್ಕೆ ಬಾರದ ಕನಸುಗಾರರನ್ನಾಗಿ ಮಾಡುವ ಭಯ ನನಗಿನಿತೂ ಇಲ್ಲ. ತುಂಬುಬಾಳಿಗೆ ಬಹಿರ್ಮುಖತೆಯಷ್ಟೇ ಆವಶ್ಯಕ ಅಂತರ್ಮುಖತೆ. ಬದುಕನ್ನು ಕುರಿತು ಜಾನಿಸುವುದೂ ಚೆನ್ನಾಗಿ ಬದುಕುವುದಕ್ಕೆ ನೆರವಾಗುತ್ತದೆ. ಕೊನೆಗೂ ನಮ್ಮ ಒಟ್ಟು ಬದುಕಿನ ಉತ್ತಮಾಂಶ ಆ ಬದುಕನ್ನು ಕುರಿತು ಧ್ಯಾನದ ಬದುಕಿನಿಂದಲೇ ಸಿದ್ಧವಾಗುತ್ತದೆ, ಮೊಸರಿನ ಸತ್ವಾಂಶ ಬೆಣ್ಣೆಯಲ್ಲಿ ಸಿದ್ಧಿಸುವಂತೆ. ಪಶುವೂ ಕೂಡ ತಾನು ಹಗಲೆಲ್ಲ ಅಲೆಹಲೆದು ಮೇದುದನ್ನು ಮೈಹಿಡಿಸಿಕೊಳ್ಳುವುದಕ್ಕಾಗಿ ಇರುಳು ಕೊಟ್ಟಿಗೆಯಲ್ಲಿ ವಿರಾಮವಾಗಿ ಮಲಗಿ ಮೆಲಕು ಹಾಕುತ್ತದೆ. ಇಲ್ಲದಿದ್ದರೆ ತಿಂದ ಮೇವು ತನ್ನದಾಗುವುದಿಲ್ಲ. ಅಂತೆಯೆ ಪುಸ್ತಗಳಿಂದಲೂ ವ್ಯಕ್ತಿಗಳಿಂದಲೂ ಸಂಸ್ಥೆಗಳಿಂದಲೂ ಜೀವನ ವ್ಯಾಪಾರಗಳಿಂದಲೂ ನಾವು ಪಡೆಯುವ ತಿಳಿವು ನಮ್ಮ ಅನುಭವಕ್ಕೆ ಹಿಡಿಯಬೇಕಾದರೆ, ಅದರಿಂದ ನಮ್ಮ ಆತ್ಮಶ್ರೀ ಅರ್ವಿರ್ಭವುಸಬೇಕಾದರೆ, ಏಕಾಂತವೂ ಮೌನವೂ ಧ್ಯಾನವೂ ಅತ್ಯಗತ್ಯ. ದಿನದ ದೀರ್ಘಜೀವನದಲ್ಲಿ ಸ್ವಲ್ಪ ಕಾಲವನ್ನಾದರೂ ಅದಕ್ಕೆ ಮೀಸಲಾಗಿಸುವುದರಿಂದಲೇ ಬಾಳು ಪರಿಪೂರ್ಣವೂ ಸುಂದರವೂ ಆಗಲು ಸಾಧ್ಯ.

ಕವನವೊಂದು ನನ್ನ ನೆನಪಿಗೆ ಬರುತ್ತದೆ. ಅದು ಒಬ್ಬ ಸಂನಾಸಿ ರಚಿಸಿದ್ದು. ತನ್ನ ಕರ್ಮಮಯ ಜೀವನವನ್ನೆಲ್ಲ ಧ್ಯಾನಕ್ಕೆ ಮೀಸಲಾಗಿ ಇರಿಸಿದ ಆತನು ಶ್ರೀ ರಾಮಕೃಷ್ಣ ಮಹಾಸಂಸ್ಥೆಯ ಪ್ರತಿನಿಧಿಗಳಲ್ಲೊಬ್ಬನಾಗಿ, ಅಮೆರಿಕಾಕ್ಕೆ ಹೋಗಿ ಸುಮಾರು ಕಾಲು ಶತಮಾನ ಅಲ್ಲಿ ಧರ್ಮಪ್ರಚಾರ ಮಾಡಿ, ಅನೇಕ ಲೌಕಿಕ ಸಂಸ್ಥೆಗಳನ್ನೂ ನಿರ್ಮಿಸಿ, ಲೋಕಸೇವೆ ಮಾಡಿದ ಹಿರಿಯ ವ್ಯಕ್ತಿ:

Silence is the heart of all things: sound the fluttring of its impulse
Which the fever and spasm of the Universe convulse.
Each sound that breaks the silence only makes it more profound,
Like a crash of deafening thunder in the sweet, blue stillness drowned.
Let the soul walk softly in thee, as a saint in heaven unshod,
For to be alone with silence is to be alone with God.
— Swami Paramananda.

ಮೌನಮಂದಿರದಲ್ಲಿ ಧ್ಯಾನದೇಕಾಂತದಲ್ಲಿ ಭಗವಂತನ ದಿವ್ಯಸಾನ್ನಿಧ್ಯ ಗೋಚರಿಸುತ್ತದೆ ಎಂಬುದು ಆತ್ಮಶ್ರೀ ಸಾಧಕರೆಲ್ಲರ ಅನುಭವವಾಗಿದೆ. ಆತ್ಮಶೀಯನ್ನು ಬಯಸುವ ವಿದ್ಯಾರ್ಥಿ ಆ ಮೌನ, ಆ ಧ್ಯಾನ, ಆ ಏಕಾಂತತೆಗಳನ್ನು ತಕ್ಕಮಟ್ಟಿಗಾದರೂ ಆಶ್ರಯಿಸಲೇ ಬೇಕು, ವಿಜ್ಞಾನಿ ಪ್ರಯೋಗಶಾಲೆಯನ್ನು ಆಸ್ರಯಿಸುವಂತೆ.

ಪ್ರಾಚೀನಕಾಲದ ಅರಣ್ಯಾಶ್ರಮಗಳ ವಿದ್ಯಾರ್ಥಿಗೆ ಋಷಿಗುರುಗಳ ಸನ್ನಿಧಿಯಲ್ಲಿ ಯಾವುದು ತನಗೆ ತಾನೆ ಲಭಿಸುತ್ತಿತ್ತೊ ಆ ಸನ್ನಿವೇಶ ಪ್ರಶಾಂತಿ ಈ ಯಂತ್ರ ನಾಗರಿಕತೆಯಲ್ಲಿ ದುರ್ಲಭ. ಆದರೂ ಕಷ್ಟಸಾಧ್ಯ. ಆ ಪುಣ್ಯಾಶ್ರಮಗಳ ವಿದ್ಯಾರ್ಥಿಯೆ, ಆ ಪ್ರಾಚೀನ ಕಾಲದ ನಮ್ಮ ಪುಣ್ಯ ಸ್ನೆಹಿತನೆ ಆಧುನಿಕ ವಿದ್ಯಾರ್ಥಿಗಳಾದ ನಮಗೂ ಆದರ್ಶವಾಗಿದ್ದಾನೆ. ಆತ್ಮಶ್ರೀ ಸಾಧನೆಯ ಪಥದಲ್ಲಿ ನಮಗೆ ಮಾರ್ಗದರ್ಶಿಯಾಗಲೂ ಆತನೆ ಆರ್ಹ.

ಆತನ ವಿದ್ಯಾತಪಸ್ಸು 'ಸಹನಾವವತು' ವಿನಿಂದ ಮೊನೆಗೊಂಡು 'ಓಂ ಶಾಂತಿಃ ಶಾಂತಿಃ ಶಾಂತಿಃ' ಯಲ್ಲಿ ಕೊನೆಗೊಳ್ಳುತ್ತಿತ್ತು. ಆತನಿಗೆ ಶಾಂತಿಯೆ ಜೀವನದ ಸರ್ವೋಚ್ಚ ಲಕ್ಷ್ಯವಾಗಿತ್ತು. ತನ್ನೊಬ್ಬನ ಶಾಂತಿ ಮಾತ್ರವಲ್ಲ, ವಿಶ್ವ ಜೀವರಾಶಿಗಳೆಲ್ಲರ ಶಾಂತಿಯೂ ಅವನ ಧ್ಯಾನದ ಆಕಾಂಕ್ಷೆ.

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ
ಪೃಥಿವೀ ಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ

ಸ್ವರ್ಗಜೀವಿಗಳಿಗೆ ಶಾಂತಿ. ಆಕಾಶದ ಆತ್ಮರಿಗೆ ಶಾಂತಿ. ಭೂಮಿಯ, ನೀರಿನ, ಗಿಡಮರಗಳ ಚೇತನಗಳಿಗೆ ಶಾಂತಿ. ಸರ್ವ ದೇವತೆಗಳಿಗೆ ಶಾಂತಿ. ಬ್ರಹ್ಮಕ್ಕೆ ಶಾಂತಿ. ಆ ನಿಜವಾದ ಶಾಂತಿ, ಆ ಎಲ್ಲರ ಶಾಂತಿ ತನ್ನದಾಗಲಿ ಎಂಬುದು ಆತನ ಧ್ಯಾನವಾಗಿತ್ತು. ಧ್ಯಾನದ ಸಮಯದಲ್ಲಿ ಶುದ್ಧಬುದ್ಧಿಯ ಸೊಡರಕುಡಿ ಲೋಕಾಲೋಕ ಚೇತನವನ್ನು ಸೋಂಕಿ ಆ ಚೈತನ್ಯದ ತೇಜಸ್ಸು ತನ್ನನ್ನು ತುಂಬಲಿ ಎಂದು ಹಂಬಲಿಸುತ್ತಿತ್ತು.

ತೇಜೋಽಸಿ ತೇಜೋ ಮಯಿ ಧೇಹಿ। ವೀರ್ಯಮಸಿ ವೀರ್ಯಂ ಮಯಿ ಧೇಹಿ॥
ಬಲಮಸಿ ಬಲಂ ಮಯಿ ಧೇಹಿ। ಓಜೋಽಸಿ ಓಜೋ ಮಯಿ ಧೇಹಿ॥
ಮನ್ಯುರಸಿ ಮನ್ಯುಂ ಮಯಿ ಧೇಹಿ। ಸಹೋಽಡಸಿ ಸಹೋ ಮಯಿ ಧೇಹಿ॥

ತೇಜಸ್ಸಿಗೆ ತೇಜಸ್ಸಾದ ನೀನು ನನ್ನನ್ನು ತೇಜಸ್ಸಿನಿಂದ ತುಂಬು. ಶಕ್ತಿಗೆ ಶಕ್ತಿಯಾದ ನೀನು ನನ್ನನ್ನು ಬಲದಿಂದ ತುಂಬು. ಎಲ್ಲ ಓಜಸ್ಸಿಗೂ ನೀನು ಓಜಸ್ಸು, ನನ್ನಲ್ಲಿ ಓಜಸ್ಸಾಗಿ ಆವಿರ್ಭವಿಸು: ಸರ್ವಸಹನೆಗೂ ಶಾಂತಿ ನೀನು, ಆ ಸಹಾನಾಶಾಂತಿಯಾಗಿ ನನ್ನ ಆತ್ಮದಲ್ಲಿ ಸಂಭವಿಸು.

ಆ ವಿದ್ಯಾರ್ಥಿಯ ತಪಸ್ಸು ಶಾಂತಿಯನ್ನು ಹೇಗೆಕೋರುತ್ತಿತ್ತೊ ಹಾಗೆಯೆ ಸುಖವನ್ನೂ ಕೋರುತ್ತಿತ್ತು. ಸತ್ಯದ ಜೋತೆಗೆ ಸೌಂದರ್ಯವನ್ನೂ ಶಿವದ ಜೊತೆಗೆ ಅನಂದವನ್ನೂ ಬಯಸುತ್ತಿತ್ತು.

ಬ್ರಹ್ಮಮೇತು ಮಾಮ್ ಮಧುಮೆತು ಮಾಮ್ ॥
ಬ್ರಹ್ಮಮೇವ ಮಧುಮೇತು ಮಾಮ್ ।

ನಮಗೆ ಬ್ರಹ್ಮಸಿದ್ಧಿಯಾಗಲಿ; ಮಧುಸಿದ್ಧಿಯೂ ಆಗಲಿ; ಯಾವ ಮಧು ಬ್ರಹ್ಮದಿಂದ ಬೇರೆಯಲ್ಲವೊ ಅದು ಸಿದ್ಧಿಯಾಗಲಿ.

ಬ್ರಹ್ಮ ಮೇಧಯಾ ಮಧು ಮೇಧಯಾ ।
ಬ್ರಹ್ಮಮೇವ ಮಧು ಮೇಧಯಾ ॥

ಬ್ರಹ್ಮ ಜಿಜ್ಞಾಸೆ, ಮಧುಜಿಜ್ಞಾಸೆ, ಬ್ರಹ್ಮಮೇವ ಮಧುವಿನ ಜಿಜ್ಞಾಸೆ ಇವುಗಳನ್ನು ಚಿಂತಿಸುವಾಗ ಆ ವಿದ್ಯಾರ್ಥಿಯ ಮನಸ್ಸು ಧ್ಯಾನಯಾನದಲ್ಲಿ ತ್ರಿಲೋಕಯಾತ್ರಿಯಾಗಿ ಜಗದ್ವ್ಯಾಪಿಯಾಗುತ್ತಿತ್ತು; ವಿಶ್ವಸಂಚಾರಿಯಾಗುತ್ತಿತ್ತು; ಬ್ರಹ್ಮಚಾರಿಯಾಗುತ್ತಿತ್ತು. ಆತನ ಆತ್ಮ ನನ್ನ ಭಾವಬಾಹುಗಳನ್ನು ಪ್ರಸರಿಸಿ ಸೃಷ್ಟಿಯ ಪ್ರಕೃತಿ ಸೌಂದರ್ಯಗಳನ್ನೆಲ್ಲ ತನ್ನ ವಿಶಾಲವೃಕ್ಷದಲ್ಲಿ ಆಲಿಂಗಿಸಿ, ಅದರ ರಸಸುಖವನ್ನೆಲ್ಲ ಹೀರಿ ಪುಷ್ಟಿಗೊಳ್ಳುತ್ತಿತ್ತು. ಆತನು ಎಷ್ಟುಸಾರಿ ಆ ದಟ್ಟವಾದ ಕಾಡುಗಳಲ್ಲಿ ಗೋವು ಕಾಯುತ್ತಾ ಅಲೆದಿರಬಹುದು! ಮತ್ತೆಷ್ಟು ತೊರೆಗಳಲ್ಲಿ ಈಜಾಡಿ ಮಿಂದಿರಬಹುದು! ಮತ್ತೆಷ್ಟು ಕೆರೆಗಳಲ್ಲಿ ತಾವರೆ ನೈದಿಲೆಗಳನ್ನು ತಿಳಿದಿರಬುದು! ಎಂತೆಂತಹ ಗಿಡ ಹೂವು ಕೊಯ್ದಿರಬಹುದು! ಯಾವ ಯಾವ ಜಾತಿಯ ಮರಗಳಲ್ಲಿ ಏನೇನು ಸಾಹಸಮಾಡಿ ಹಣ್ಣು ಉದುರಿಸಿರಬಹುದು! ಎಷ್ಟು ಸೂರ್ಯೋದಯಾಸ್ತಗಳನ್ನು ಮಲೆನೆತ್ತಿಗಳಿಂದ ರಸಾವಿಷ್ಟನಾಗಿ ಈಕ್ಷಿಸಿರಬಹುದು! ಆತನ ಕಾಲಿಗೆ ಹೊಳೆಯ ನುಣ್ಣನೆಯ ಬಿಳಿಮಳಲಿನ ಸ್ಪರ್ಶವೂ ತಾಯಿಯ ಮುತ್ತಿನಂತೆ ಕಣ್ಮುಚ್ಚುವ ಸುಖವನ್ನು ಕೊಡುತ್ತಿತ್ತೆಂದು ತೋರುತ್ತದೆ. ಇಲ್ಲದಿದ್ದರೆ "ಮಧುಮತ್ ಪಾರ್ಥಿವಂ ರಜಃ" (ನೆಲದ ಧೂಳು ನಮಗೆ ಮಧುವೀಯಲಿ) ಎಂಬ ಪ್ರಾರ್ಥನೆ ಅಸಾಧ್ಯವಾಗುತ್ತಿತ್ತು. ಆತನು ಧ್ಯಾನ ಸಮಯದಲ್ಲಿ ಆ ಎಲ್ಲ ಮಧುರಾನುಭವಗಳನ್ನೂ ರೋಮಂಥಿಸಿ ರಸನಂದಕ್ಕೇರಿ ಬ್ರಹ್ಮಸ್ಪರ್ಶಿಯಾಗಿ ಪ್ರಜ್ವಲಿಸುತ್ತಿದ್ದನೆಂದು ತೋರುತ್ತದೆ. ಹಾಗಿದೆ ಆತನು ಘೋಷಿಸುತ್ತಿದ್ದ ಆ ಮಂತ್ರಧ್ವನಿಃ

ಮಧು ವಾತಾ ಋತಾಯತೇ। ಮಧು ಕ್ಷರನ್ತಿ ಸಿಂಧವಃ॥
ಮಾಧ್ವೀರ್ನಃ ಸನ್ತ್ವೋಷಧೀಃ॥
ಮಧು ನಕ್ತಮುತೋಷಸೋ। ಮಧುಮತ್ ಪಾರ್ಥಿವಂ ರಜಃ।
ಮಧು ದ್ಯೌರಸ್ತು ನಃ ಪಿತಾ ॥
ಮಧುಮಾನ್ನೋ ವನಸ್ಪತಿಃ। ಮಧುಮಾನಸ್ತು ಸೂರ್ಯಃ।
ಮಾಧ್ವೀರ್ಗಾವೋ ಭವಂತು ನಃ॥

ಅಲೆವ ಗಾಳಿಯೆಮಗೆ ಮಧುವೀಯಲಿ, ಹರಿವ ಹೊಳೆಗಳೆಮಗೆ ಮಧುವೀಯಲಿ,
ಬಳ್ಳಿಗಿಡಗಳೆಮಗೆ ಮಧುವೀಯಲಿ.
ಬೆಳಗು ಬೈಗುಗಳೆಮಗೆ ಮಧುವೀಯಲಿ, ಪೊಡವಿ ಪುಡಿ ನಮಗೆ
ಮಧುವೀಯಲಿ, ತಿಳಿಯ ಬಾನೆಮಗೆ ಮಧುವೀಯಲಿ.
ಪಿರಿಯ ಮರಗಳೆಮಗೆ ಮಧುವೀಯಲಿ, ಪೊಳೆವ ನೇಸರೆಮಗೆ ಮಧುವೀಯಲಿ,
ವೃಂದಗೋವುಗಳೆಮಗೆ ಮಧುವೀಯಲಿ.

ಮಹದ್ಭಾವಗಳನ್ನೂ ಮಹದಾಲೋಚನೆಗಳನ್ನೂ ಮಹದನುಭವಗಳನ್ನಾಗಿ ಪರಿವರ್ತಿಸಿ ಆತ್ಮಶ್ರೀಯನ್ನು ಪ್ರೋಜ್ವಲವಾಗಿ ಮಾಡುವ ಸಾಧನ ವಿಧಾನವೆ ಧ್ಯಾನ. ಹೇರಾನೆಯ ಹಿಂಡು ನುಗ್ಗಿ ತೊತ್ತಳದುಳಿದರೆ ಕಾಡಿನ ಹಳು ಬಟ್ಟಬಯಾಲಾಗಿ, ಮರಗತ್ತಲೆ ಅಳಿದು, ಬೆಳಕಿಗೆಡೆಗೊಡುವಂತೆ ಮಹಾದ್ಭಾವಗಳೂ ಮಹಾದಾಲೋಚನೆಗಳೂ ಚಿತ್ತದಲ್ಲಿ ಸದಾ ಸಂಚರಿಸುವಂತೆ ಮಾಡಿದರೆ ಕೀಳುಬಗೆ ತನಗೆ ತಾನಾಗಿ ಹಿಂಗಿ ಆತ್ಮಕ್ಕೆ ಕಾಂತಿ ಅವತರಿಸುತ್ತದೆ. ಸಾಹಿತ್ಯ ಪ್ರಪಂಚದಲ್ಲಿ, ಮಹಾಕವಿಗಳ ಅನುಭವ ಸಾರಸರ್ವಸ್ವವಾದ ಅವರ ಕೃತಿಗಳಲ್ಲಿ ಮಹದ್ಭಾವಗಳೂ ಮಹದಾಲೋಚನೆಗಳೂ ನಮಗೆ ಯಥೇಚ್ಛವಾಗಿ ದೊರೆಯುತ್ತವೆ. ಆದರೆ ಅವು ಬೆನ್ನ ಮೇಲಣ ಹೇರಿನಂತಾಗದೆ ಮೈಯೊಳಗಣ ನೆತ್ತ ರಂತಾಗಿ ನಮಗೆ ಆಯಾಸಕರ ಮಾತ್ರವಾಗದೆ ಶಕ್ತಿದಾಯಕವಾಗಬೇಕಾದರೆ, ನಮ್ಮ ಆತ್ಮದ ಪುಷ್ಟಿಗೆ ಅಮೃತಾಹಾರವಾಗಬೇಕಾದರೆ, ರೋಮಂಥನ ಕ್ರಿಯಾಸ್ವರೂಪದವಾದ ಧ್ಯಾನ ಅತ್ಯಂತ ಆವಶ್ಯಕ. ಮಹದ್ಭಾವಗಳಿಲ್ಲದಿದ್ದರೆ, ಮಹದಾಲೋಚನೆಗಳಿಲ್ಲದಿದ್ದರೆ ನಮ್ಮ ಧ್ಯಾನ ಕಬ್ಬು ಕೊಡದೆ ಗಾಣ ತಿರುಗಿಸಿದಂತೆ ವ್ಯರ್ಥವಾಗುತ್ತದೆ; ಮೇವು ಮೇಯದೆ ಮೆಲುಕುಹಾಕುವಂತೆ ನಿಷ್ಫಲವಾಗುತ್ತದೆ. ಧ್ಯಾನವಿಲ್ಲದೆ ಆತ್ಮಶ್ರೀಯ ಆವಿರ್ಭಾವವಿಲ್ಲ. ಆತ್ಮಶ್ರೀಯಿಲ್ಲದ ಇತರ ಶ್ರೀಗಳು ಅಶಾಶ್ವತ, ಅಶಾಂತಿಕರ; ಬಹುಬೇಗನೆ ಅರ್ಥಹೀನಾವಾಗಿ ನೀರಸವಾಗುತ್ತವೆ.

ತಪಸ್ವಿ ಪರಮೇಶ್ವರನನ್ನು ತಪಸ್ಸಿಲ್ಲದ ತನ್ನ — ಸೌಂದರ್ಯದಿಂದ ಗೆಲ್ಲುವ ಪ್ರಯತ್ನದಲ್ಲಿ ಭಗ್ನಮನೋರಥಳಾದ ಗಿರಿರಾಜನಂದನೆ ಪಾರ್ವತಿಯ ಮನಸ್ಸನ್ನು 'ಕುಮಾರ ಸಂಭವದ' ಕವಿ "ನಿನಿಂದ ರೂಪಂ ಹೃದಯೇನ ಪಾರ್ವತೀ" ಎಂದು ವರ್ಣಿಸಿದ್ದಾನೆ. ಯಾವ ದೇಹಶ್ರೀಯನ್ನು ತಾನು ಹೆಮ್ಮೆಯಿಂದ ಪೋಷಿಸಿದ್ದಳೊ, ಅಭಿಮಾನದಿಂದ ಅಲಂಕರಿಸಿದ್ದಳೊ, ಯಾವ ದೇಹಶ್ರೀಯಲ್ಲಿ ತನಗೆ ಅಗಾಧವಾದ ಶ್ರದ್ಧೆಯಿದ್ದಿತೊ ಆ ತನ್ನ ರೂಪರಾಶಿಯನ್ನು ದೇವಿ ಹೃತ್ಪೂರ್ವಕವಾಗಿ ಹಳಿದುಕೊಳ್ಳುತ್ತಾಳೆ. ಆತ್ಮಶ್ರೀಯನ್ನು ಸಾಧಿಸಲಾರದ ದೇಹಶ್ರೀ, ಅದು ಎಷ್ಟೇ ಮೋಹಕವಾಗಿದ್ದರೂ, ತನ್ನನ್ನು ತಾನೆ ನಿಂದಿಸಿಕೊಳ್ಳಬೇಕಾಗುತ್ತದೆ. ಅದು ಕೊನೆಗೆ ತನಗೆ ತಾನೆ ಜುಗುಪ್ಸಾರ್ಹವಾಗುತ್ತದೆ. ಆತ್ಮಶ್ರೀ ಇದ್ದರೆ ಇತರ ಶ್ರೀಗಳೆಲ್ಲ ಇಮ್ಮಡಿ ಮುಮ್ಮಡಿಯಾಗಿ ವರ್ಧಿಸಿ ಶೋಭಿಸುತ್ತವೆ. ಅದಿಲ್ಲದಿದ್ದರೆ ಬಹುಬೇಗನೆ ನೀರಸವೂ ನಿಂದಾರ್ಹವೂ ಆಗುತ್ತವೆ. ಅಷ್ಟೇ ಅಲ್ಲ, ಲೋಕ ಸಂಕಟಕರವೂ ಪ್ರಾಣವಿಪತ್ಕಾರವೂ ಅಗುತ್ತವೆ ಎಂಬುದಕ್ಕೆ ರಣೋನ್ಮಾದಗ್ರಸ್ತವಾದ ಇಂದಿನ ಪ್ರಪಂಚ ಸ್ಥಿತಿಯೆ ಸಾಕ್ಷಿ.

ಯಾವ ಶ್ರೀ ಇತರ ಎಲ್ಲ ಶ್ರೀಗಳಿಗೂ ಆತ್ಮಪ್ರಾಯವೋ ಆದರ ಅನುಸಂಧಾನವನ್ನು ವಿದ್ಯಾರ್ಥಿ ಅಲಕ್ಷಿಸಲಾಗದು ಯೋಗಕ್ಷೇಮ ಕಾತರನಾದ ಯಾವನೂ ಅದನ್ನು ತಿರಸ್ಕರಿಸುವುದಿಲ್ಲ. ಆತ್ಮಶ್ರೀ ಸಾಧಕನಿಗೆ ಇತರ ಶ್ರೀಗಳು ಮೊದಮೊದಲು ಕೈಸೇರದಿದ್ದರೂ ಆತನು ಹತಾಶನಾಗುವುದಿಲ್ಲ. ಆತ್ಮಶ್ರೀಗಾಗಿ ಇತರ ಶ್ರೀಗಳನ್ನು ತ್ಯಾಗಮಾಡಲು ಸಿದ್ಧನಾಗುತ್ತಾನೆ, ತನ್ನ ಅತುಲ ಸೌಂದರ್ಯವನ್ನೂ ತೃಣೀಕರಿಸಿ 'ಅಸಹ್ಯಹೂಂಕಾರ ನಿವರ್ತಿತ' ನಾದ ಪಿನಾಕಿಯನ್ನು ಒಲಿಸಲೋಸುಗ ಶೈಲರಾಜಕುಮಾರಿ ದೇಹಶ್ರೀಯನ್ನು ವಿಸರ್ಜಿಸಿ ತಾನೂ ತಪಸ್ವಿನಿಯಾದಂತೆ.

ಆತ್ಮಶ್ರೀಯನ್ನು ಇಲ್ಲಗಳೆಯುವ ಅಥವಾ ಅಲ್ಲಗಳೆಯುವ ಜಡಮತಿಗಳಾಗಲಿ ಅಥವಾ ನಮ್ಮ ಸ್ವಂತ ಸಂಶಯಬುದ್ಧಿಯಾಗಲಿ ನಮ್ಮೆದುರು ನಿಂತು, ಆತ್ಮ ಶ್ರೀಯನ್ನೇ ತಮ್ಮ ಜೀವನದ ಏಕಮಾತ್ರ ಧ್ಯೇಯವನ್ನಾಗಿ ಮಾಡಿಕೊಂಡವರ ಕಡೆಗೆ ಕೈತೋರಿಸಿ, ವಟುವೇಷಧಾರಿಯಾದ ಮಹೇಶ್ವರನು ತಪಸ್ಸು ಮಾಡುತ್ತಿದ್ದ ಪಾರ್ವತಿಯ ಬಳಿಗೆ ಬಂದು ಅವಳನ್ನು ಪರೀಕ್ಷಿಸಲೆಂದು ಹೇಳಿದಂತೆ "ನೀನು ಯಾರಿಗಾಗಿ ತಪಸ್ಸು ಮಾಡುತ್ತಿದ್ದೀಯೋ ಅವನು ಬರಿ ಬೀಕಾರಿ. 'ದಿಗಂಬರತ್ವೇನ ನಿವೇದಿತಂ ವಸು!' ಬತ್ತಲೆಯಿಂದಲೆ ಬಹಿರಂಗ ವಾಗಿದೆ ಅವನ ಸಂಪತ್ತು" ಎಂದು ಮೊದಲಾಗಿ ಪ್ರತಿಕೂಲ ವಾದ ಹೂಡಬಹುದು, ಆಗ ನಾವೂ ದೇವಿ ಕೊಟ್ಟ ಉತ್ತರವನ್ನೆ ಕೊಡಬಾಕಾಗುತ್ತದೆ:

ಅಲೋಕ ಸಾಮಾನ್ಯಮಚಿಂತ್ಯ ಹೇತುಕಂ
ದ್ವಿಷಂತಿ ಮಂದಾಶ್ಚರಿತಂ ಮಹಾತ್ಮನಾಮ್ ।

ಮಹಾತ್ಮರ ನಡೆವಳಿ ಲೋಕಸಾಮಾನ್ಯವಾದುದಲ್ಲ. ಅದು ಈ ರೀತಿಯಲ್ಲಿಯೆ ವ್ಯಕ್ತವಾಗುತ್ತದೆ ಎಂದು ಊಹಿಸುವುದಕ್ಕೂ ಸಾಧ್ಯವಲ್ಲ. ತಮ್ಮ ಸಂಪ್ರದಾಯದ ಪ್ರಕಾರ ಅದು ವ್ಯಕ್ತವಾಗದಿದ್ದ ಮಾತ್ರಕ್ಕೆ ಮಂದಮತಿಗಳು ಅವರನ್ನು ದೂರುತ್ತಾರೆ.

ಆತ್ಮಶ್ರೀ ಇತರ ಶ್ರೀಗಳಂತಲ್ಲ. ಅದು ಇತರ ಶ್ರೀಗಳಲ್ಲಿ ಒಂದು ಮಾತ್ರವಲ್ಲ. ಅದು ಎಲ್ಲ ಶ್ರೀಗಳ ಶ್ರೀ. ಇತರೆ ಶ್ರೀಭೂಮಿಕೆಗಳಲ್ಲಿ ವ್ಯಕ್ತವಾಗಿ ಅವುಗಳ ಉಚ್ಛ್ರಾಯವನ್ನು ಸಾಧಿಸಬಲ್ಲುದಾದರೂ ಅದು ಎಲ್ಲ ಭೂಮಿಕೆಗಳನ್ನೂ ಒಳಕೊಂಡು ಎಲ್ಲವನ್ನೂ ಮೀರಿರುವ ಸಾರ್ವಭೌಮಿಕಶ್ರೀ.

ಆತ್ಮಶ್ರೀ ಸಹಿತವಾದರೆ ಎಲ್ಲ ಶ್ರೀಗಳೂ ಶೋಭಿಸುತ್ತವೆ. ಶ್ರೀ ಮಾತ್ರವಲ್ಲ, ಅಶ್ರೀಯೂ ಪೂಜ್ಯವಾಗುತ್ತದೆ. ವಟುವೇಶಿ ಮಹೇಶ್ವರನಿಗೆ ಗೌರಿಯ ಸಖಿ ಶೈಲಾಧಿರಾಜತನಯೆಯ ತಪಸ್ಸಿನ ಉದ್ದೇಶವನ್ನು ತಿಳಿದಾಗ ಅವನು 'ಅವ್ಯಂಜಿತ ಹರ್ಷ ಲಕ್ಷಣ' ನಾಗಿ ಶಿವನ ವಿರೂಪವನ್ನು ದಾರಿದ್ರ್ಯವನ್ನೂ ಅಸಹ್ಯ ಸ್ಥಿತಿಯನ್ನೂ ವರ್ಣಿಸಿ ಆಕೆಯ ಮನಸ್ಸನ್ನು ವಿಮುಖ ಮಾಡಲು ಯತ್ನಿಸುತ್ತಾನೆ. "ಅವಸ್ತುವಿನಲ್ಲಿ ಅನುರಕ್ತೆಯಾಗಿದ್ದೀಯೆ. ಹಾವು ಸುತ್ತಿಕೊಂಡಿರುವ ಅವನನ್ನು ನೀನು ಕೈಹಿಡಿಯುವುದಾದರೂ ಹೇಗೆ? ನಿನ್ನದು — ವಧುದುಕೂಲಂ ಕಲಹಂಸ ಲಕ್ಷಣಂ; ಅವನದೋ — ಗಜಾಜಿನಂ ಶೋಣಿತ ಬಿಂದುವರ್ಷಿ. ನಿನ್ನ ಬಿಳಿಯ ರೇಸಿಮೆಯ ಸೀರೆ ಅವನುಟ್ಟಿರುವ ಆನೆಯ ತೊಗಲಿನಿಂದ ಬಸಿಯುವ ಬಿಸುನೆತ್ತರಿಗೆ ತೊಯ್ದು ಹೋಗುವುದಿಲ್ಲವೆ? ನಿನ್ನದು — ಅಲಕ್ತಕಾಂಕಾನಿ ಪದಾನಿ ಪಾದಯೋಃ; ಅವನದು — ವಿಕೀರ್ಣಕೇಶಾಸು ಪರೇತ ಭೂಮಿಷು. ಅಲಕ್ತರಸಲೇಪನದಿಂದ ಅರುಣ ಮನೋಹರವಾದ ಪಾದಗಳುಳ್ಳವಳು ನೀನು; ಪ್ರೇತಭೂಮಿಯ ಶವಭಸ್ಮದಿಂದ ಕೇಶಸಂಸ್ಕಾರ ಮಾಡಿಕೊಂಡಿರುವವನು ಅವನು ಪಟ್ಟದಾನೆಯನ್ನೇರಿ ಮೆರವಣಿಗೆ ಹೋಗಬೇಕಾದ ನೀನು ಅವನೊಡನೆ ಮುದಿಬಸವನನ್ನೇರಿ ಹೋಗುವುದನ್ನು ಕಂಡು 'ಮಹಾಜನಃ ಸ್ಮೇರಮುಖೋ ಭವಿಷ್ಯತಿ' — ಮಂದಿ ಬಾಯ್ಗೆ ಕೈಮುಚ್ಚಿಕೊಂಡು ನಗುತ್ತಾರೆ. ನೀನೆಲ್ಲಿ? ಅವನೆಲ್ಲಿ? 'ನಿವರ್ತಯಾಸ್ಮಾದಸ ದೀಪ್ಸಿತಾನ್ಮನಃ' — 'ಬಯಸಬಾರದ್ದನ್ನು ಬಯಸುತ್ತಿದ್ದೀಯೆ' ಅವಸ್ತುವಿನಿಂದ, ಅಸತ್ತಿನಿಂದ, ಮನಸ್ಸನ್ನು ಹಿಂತಿರುಗಿಸು".

ಆತ್ಮಶ್ರೀಸಾಧಕರನ್ನು ಅವರ ಪ್ರಯತ್ನದಿಂದ ಪರಾಙ್ಮುಖರನ್ನಾಗಿ ಮಾಡುವುದಕ್ಕೆ ಸ್ವೈರಮುಖಿಗಳಾದ ಮಹಾಜನರು ನಾನಾ ಪ್ರತಿಕೂಲ ವಾದಗಳನ್ನು ತಂದೊಡ್ಡಬಹುದು. "ಅಸತ್ಯ ಕಂಠಾರ್ಪಿತ ಬಾಹುಬಂಧನಾ" ಎಂದು ಗಿರಿಜೆಯ ಸ್ಥಿಯನ್ನು ವರ್ಣಿಸಿದಂತೆ "ಇಲ್ಲದ ಕನಸಿಗೆ ಕೈಯೊಡ್ಡಬೇಡಿ" ಎಂದು ಬೋಧಿಸಬಹುದು. ಒಂದು ವೇಳೆ ಅದು ಇದ್ದರೂ ನಮಗೆ ನಿಲುಕದ್ದಕ್ಕೆ ನಿಕ್ಕುಳಿಸಿ ಪ್ರಯೋಜನವೇನು? ಎಂದು ಕೇಳಬಹುದು. ಅಂಥವರಿಗೆ ದೇವಿ "ಮನೋರಥಾನಾಮಗತಿರ್ನವಿದ್ಯತೇ" ಎಂದು ಉಪದೇಶಿಸುತ್ತಾಳೆ. ಮನುಷ್ಯನ ಆತ್ಮಪಿಪಾಸೆಗೆ ಅಮೇಯವೆಂಬುದಿಲ್ಲ.

ಆತ್ಮಶ್ರೀ ಅರಮನೆಯಲ್ಲಿ ಸಿಂಹಾಸನವೇರಿ ಶ್ರೀರಾಮನಾಗಿರಬಹುದು. ಅಥವಾ ಅರಣ್ಯದಲ್ಲಿ ಮೃಗಾಜಿನವೇರಿ ಅಗಸ್ತ್ಯನಾಗಿರಬಹುದು. ಸಿಂಹಾಸನ ಮೃಗಾಜಿನಗಳೆರಡೂ ಅದಕ್ಕೆ ಒಂದೆ. ಆದರ ಯೋಗ್ಯತೆಯನ್ನು ಸಿಂಹಾಸನದಿಂದಾಗಲಿ ಮೃಗಾಜಿನದಿಂದಾಗಲಿ ನಿರ್ಣಯಿಸಲಾಗುವುದಿಲ್ಲ:

ವಿಭೂಷಣೋದ್ಭಾಸಿ ಪಿನದ್ಧಭೊಗಿ ವಾ
ಗಜಾಜಿನಾಲಂಬಿ ದುಕೂಲಧಾರಿ ವಾ।
ಕಪಾಲಿ ವಾ ಸ್ಯಾದಥವೇನ್ದು ಶೇಖರಂ
ನ ವಿಶ್ವಮೂರ್ತೇರವಧಾರ್ಯತೇ ವಪುಃ॥

ಆತಶ್ರೀ ಯಾವ ರೀತಿಯಿಂದಲೂ ಅಭಿವ್ಯಕ್ತವಾಗಬಹುದು. ಅದು ಹೀಗೆ ಆಗಬೇಕು; ಹೀಗಾದರೆ ಆತ್ಮಶ್ರೀ, ಇಲ್ಲದಿದ್ದರೆ ಅಲ್ಲ ಎನ್ನುವುದು ತಪ್ಪು. ಅದು ಕಿರೀಟಧಾರಿಯಾದರೆ ಹೇಗೆ ಗೌರವಾಸ್ಪದವೊ ಹಾಗೆಯೆ ಜಟಾಧಾರಿಯಾಗಿ ಹೆಣಬೂದಿ ಬಳಿದುಕೊಂಡರೂ ಜಗದ್ವಂದ್ಯವಾಗುತ್ತದೆ:

ತದಂಗ ಸಂಸರ್ಗಮವಾಪ್ಯ ಕಲ್ಪತೇ
ಧ್ರುವಂ ಚಿತಾ ಭಸ್ಮರಜೋ ವಿಶುದ್ಧಯೇ।
ತಥಾ ಹಿ ನೃತ್ಯಾಭಿನಯಕ್ರಿಯಾ ಚ್ಯುತಂ
ವಿಲಿಪ್ಯತೇ ಮೌಲಿಭಿರಂಬರೌಕಸಾಂ॥
ಅಸಂಪದಸ್ತಸ್ಯ ವೃಷೇಣ ಗಚ್ಛತಃ
ಪ್ರಭಿನ್ನ ದಿಗ್ವಾರಣ ವಾಹನೋ ವೃಷಾ।
ಕರೋತಿ ಪಾದಾವುಪಗಮ್ಯ ಮೌಲಿನಾ
ವಿನಿದ್ರ ಮಂದಾರ ರಜೋರುಣಾಂಗುಲೀ॥

ವಿಶ್ವಮೂರ್ತಿಯ ಅಂಗಸರ್ಗ ತಮಗೆ ಅಪ್ರಾಪ್ಯ ಎಂದು ದೇವತೆಗಳೂ ಕೂಡ ಶಿವನು ತಾಂಡವವಾಡುವಾಗ ಉದುರಿ ಬೀಳುವ ಜಟಾಭಸ್ಮವನ್ನು ತಲೆಗಿಟ್ಟುಕೊಂಡು ಕೃತಕೃತರಾಗುತ್ತಾರೆ. ಅಮರ ಸಂಪತ್ತಿಗೆ ಒಡೆಯನಾದ ದೇವೇಂದ್ರನೂ ಬಡ ಬಸವನನ್ನೇರಿದಾತನ ಪದತಲಕ್ಕೆ, ಐರಾವತದಿಂದ ಇಳಿದು, ನಮಸ್ಕರಿಸಿ, ಅದನ್ನು ನಂದನವನದ ಮಂದಾರದ

ಹೂಧೂಳಿಯಿಂದ ಕೆಂಪಾಗಿ ಮಾಡುತ್ತಾನೆ. ಆತ್ಮಶ್ರೀಗೆ ಮೀರಿದ ಶ್ರೀ ಇನ್ನಿಲ್ಲ. ರಾಜ ಮಹಾರಾಜರುಗಳೂ ಚಕ್ರವರ್ತಿಗಳೂ ಅದಕ್ಕೆ ತಲೆಬಾಗುತ್ತಾರೆ. ಪರಿಜ್ಞಾನವೂ ಸಾಧನೇಚ್ಛೆಯೂ ತಿಲಮಾತ್ರವೂ ಇಲ್ಲದೆ ಸುಮ್ಮನೆ ವಾದಕ್ಕಾಗಿವಾದಿಸುವ ಪ್ರತಿವಾದಿಗಳ ವಿಚಾರದಲ್ಲಿ ಸಾಧಕನಾದವನು ಹೇಗೆ ವರ್ತಿಸಬೇಕೆಂದು ಕಾಳಿದಾಸನ ಗೌರಿದೇವಿಯೆ ತೋರಿಸಿಕೊಟ್ಟಿದ್ದಾಳೆ:

ನಿವಾರ್ಯತಾಮಾಲಿ ಕಿಮಪ್ಯಯಂ ವಟುಃ
ಪುನರ್ವಿವಕ್ಷುಃ ಸ್ಫುರಿತೋತ್ತರಾಧರಃ।
ನ ಕೇವಲಂ ಯೋ ಮಹತೋಽಪಭಾಷತೇ
ಶೃಣೋತಿ ತಸ್ಮಾದಪಿ ಯಃ ಸ ಪಾಪಭಾಕ್॥

“ಸಖೀ, ತೊಲಗಿಸಿಲ್ಲಿಂದೀ ವಟುವನೆಂತಾದೊಡಂ, ಮತ್ತೇನನೋ ನುಡಿಯಲೆಂದಿರ್ಪಿ ನಡುಗು ತುಟಿಯನಂ. ಪಿರಿದಾದುದರ ನಿಂದೆ ಕಿರಿದಲ್ತು; ದುರಿತಭಾಗಿಗಳಪ್ಪರದಕೆ ಕಿವಿಗೊಟ್ಟೊಡಂ”.

ಭರತನೇಕೆ ಅಯೋಧ್ಯೆಗೆ ವಿಮುಖನಾದನೆಂದು ಈಗ ನಮಗೆ ಅರ್ಥವಾಗುತ್ತದೆ. ಶ್ರೀರಾಮರೂಪಿ ಆತ್ಮಶ್ರೀ ಅಲ್ಲಿರಲಿಲ್ಲ.

ಜನಮನೋಮಂದಿರದ ಸುಸ್ವಪ್ನ ಗೋಪುರದ
ಕಲಶಂ ನಭಶ್ಚುಂಬಿಯಾಗದಿರೆ, ಋಷಿಹೃದಯ
ಮಂಗಳಾರತಿ ಬಾಳಿನಂಧತೆಯನಳಿಸದಿರೆ,
ಕವಿಕೃತಿಯ ವರ್ಣಗಾನಂ ಮಹನ್ ನಿತ್ಯತಾ
ಸ್ವರ್ಣಸುಂದರ ಇಂದ್ರಿಯಾತೀತ ನಂದನದಿ
ನವರಸಾಪ್ಸರಿಯರಂ ನರ್ತನಂಗೈಸದಿರೆ,
ಏನಿರ್ದುಮೇನ್ ಅನಾಗರಿಕತಾ ಶ್ರೀ?

ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ? ಎಂಬ ಪ್ರಶ್ನೆಗೆ ಉತ್ತರ: ಆತ್ಮಶ್ರೀ ಇಲ್ಲದ ವಿದ್ಯೆ ಶ್ರೀರಾಮನಿಲ್ಲದ ಅಯೋಧ್ಯೆ!